
ರಂಜನ ಬೋಧನ ಪ್ರಚೋದನೆ


ಲಂಕೇಶ್

ಜೂನ್ 25, 2008 ರೂ. 12/-



ಅತುಲ್‌ಗೂ
ಕಾದಿದೆ
ಸಾವು?






ಭಟ್ಟ
ಪೊಲೀಸ್
ಕೈವಾಡ

ಪದ್ಮಪ್ರಿಯ

ಕೊಲೆ



ಮೈಸೂರು:
ಪೊಲೀಸ್
ಬಲೆಗೆ

ಚೆಡ್ಡಿಗಳ ರಕ್ತದಾಹಕ್ಕೆ ಅನ್ನದಾತ ಬಲಿ!




ಪರಿಷತ್ ಚುನಾವಣೆ

ಯಾರಿಗೆ ಗೆಲುವು?

ಕಾರ್ಟೂನ್ ಕಾರ್ನರ್

ಆಧುನಿಕ ಸಂಸಾರ



ನೋ ಕಾಮೆಂಟ್ಸ್

"ನಾನು ಆತನಿಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ. ನನ್ನ ತಮ್ಮನನ್ನು ವಾಪಸ್ಸು ತರಲು ಆತನಿಂದ ಸಾಧ್ಯವೇ?"

-ಶಣ್ಮುಖಪ್ಪ ಚೂರಿ, ಹಾವೇರಿಯಲ್ಲಿ ಪೊಲೀಸರ ಗುಂಡೇಟಿಗೆ ಬಲಿಯಾದ ರೈತ ಸಿದ್ಧಲಿಂಗಪ್ಪ ಚೂರಿಯ ಸಹೋದರ; ಮುಖ್ಯಮಂತ್ರಿ ಯಡ್ಡಿ ಚೂರಿಯ ತಾಯಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರ ಧನದ ಚೆಕ್ ನೀಡಿದಾಗ..

ನಂಬಿದ್ರೆ ನಂಬಿ, ಬಿಟ್ರೆ ಬಿಡಿ

"ಎಲ್.ಕೆ. ಅಡ್ವಾಣಿ ಈ ದೇಶದ ಪ್ರಧಾನಿ ಆಗಬೇಕೆಂಬ ಆಸೆ ನನ್ನದು. ಯಾಕೆಂದರೆ ಆತನಾದರೂ ನನ್ನನ್ನು ಗಲ್ಲಿಗೇರಿಸುವ ಬಗ್ಗೆ ಒಂದು ನಿರ್ಧಾರ ತೆಗೆದುಕೊಂಡು ನಿತ್ಯ ನರಕವಾಗಿರುವ ಈ ನನ್ನ ಬದುಕಿನಿಂದ ಪಾರುಮಾಡುತ್ತಾನೆ"

-ಅಫ್ಜಲ್ ಗುರು, ಪಾರ್ಲಿಮೆಂಟ್‌ನ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಗಲ್ಲು ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿ.

ತಪ್ಪೊಪ್ಪಿಗೆ

"ಮಕರ ಜ್ಯೋತಿಯ ಹಿಂದೆ ಯಾವ ದೈವಶಕ್ತಿಯೂ ಇಲ್ಲ. ಅದನ್ನು ಪ್ರತಿ ವರ್ಷ ಹಚ್ಚುವವರು ಪೊಲೀಸರು ಮತ್ತು ದೇವಸ್ಥಾನದೊಂದಿಗೆ ಸಂಬಂಧ ಹೊಂದಿರುವ ಮಾನವರು"

- ತಂತ್ರಿ ಕಂಟಕಾರ ಮಹೇಶ್ವರಾರು, ಶಬರಿಮಲೈ ದೇವಸ್ಥಾನದ ಮುಖ್ಯ ಅರ್ಚಕ.

ಮುಜುಗರ

"ಬರಾಕ್ ಒಬಾಮಾ ಮೇಲೆ ಅನಿವಾರ್ಯವಾಗಿ ದಾಳಿ ಮಾಡಬೇಕಿರುವ ಚುನಾವಣಾ ಪ್ರಚಾರ ತಂಡದೊಂದಿಗೆ ಇರಲು ನನಗೆ ಮುಜುಗರವಾಗುತ್ತದೆ"

-ಮಾರ್ಕ್ ಮ್ಯಾಕಿನ್‌ಸನ್, ಡೆಮಾಕ್ರಟ್ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿರುವ ಒಬಾಮಾರ ವಿರುದ್ಧ ಸ್ಪರ್ಧಿಸಲಿರುವ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಮ್ಯಾಕ್‌ಕೈನ್‌ರವರ ಸಲಹೆಗಾರ

ಹೊಸಹಾದಿ

"ನಾನು ಅಮೆರಿಕದ 'ವೈರಿ' ದೇಶಗಳಾದ ಇರಾನ್, ಸಿರಿಯಾ, ಕ್ಯೂಬಾ, ಉತ್ತರ ಕೊರಿಯಾ ಮತ್ತು ವೆನೆಜುವೇಲಾ ದೇಶಗಳ ನಾಯಕರೊಂದಿಗೆ ಯಾವುದೇ ಪೂರ್ವ ಷರತ್ತುಗಳಿಲ್ಲದೆ ಭೇಟಿಯಾಗಿ ಚರ್ಚಿಸಲು ಸಿದ್ಧನಿದ್ದೇನೆ"

-ಬರಾಕ್ ಒಬಾಮಾ ತಮ್ಮ 'ದಿ ಆಡಾಸಿಟಿ ಆಫ್ ಹೋಪ್' ಪುಸ್ತಕದಲ್ಲಿ

ದುರ್ಗತಿ

"ಐಪಿಎಲ್‌ನಲ್ಲಿ ರಾಹುಲ್ ದ್ರಾವಿಡ್ ಅನುಭವಿಸುತ್ತಿರುವ ದಿಗ್ಭ್ರಮೆ ಯಾರಿಗೂ ಅರ್ಥವಾಗುತ್ತಿಲ್ಲ. ಭಾರತದ ಟೆಸ್ಟ್ ಮ್ಯಾಚಿನಲ್ಲಿ ಅತಿ ಶ್ರೇಷ್ಠ ಆಟಗಾರನಾದ ದ್ರಾವಿಡ್ ಇವತ್ತು ತನ್ನ ಪ್ರತಿಭೆಯನ್ನು ಹೆಂಡದ ದೊರೆಯೊಬ್ಬನ ಪರವಾಗಿ ಮಾರಾಟ ಮಾಡುವ ಹಂತಕ್ಕೆ ತಲುಪಿದ್ದಾನೆ."

-'ತೆಹೆಲ್ಕಾ' ಪತ್ರಿಕೆಯಲ್ಲಿನ ಒಂದು ಲೇಖನದಲ್ಲಿ

ಸತ್ಯಮೇವ ಜಯತೇ

"ಬಜೆಪಿ ಎಂಬ ಚಿರತೆ ತನ್ನ ಚುಕ್ಕೆಗಳನ್ನು ಬದಲಾಯಿಸಿದರೂ ಅದು ತನ್ನ ನರಿಬುದ್ಧಿಯನ್ನು ಎಂದೂ ಬಿಡುವುದಿಲ್ಲ."

"ಬಜೆಪಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಿರುವ ಅಂಶ ಯಾವುದೆಂದರೆ ತಮ್ಮ ಪಕ್ಷವನ್ನು ಇತರೆ ರಾಜ್ಯಗಳಲ್ಲಿ ಗೆಲ್ಲಿಸುವುದಕ್ಕೆ ಅಲ್ಲೆಲ್ಲಾ ದೇವೇಗೌಡ ಇಲ್ಲ."

-'ಔಟ್ ಲುಕ್' ಪತ್ರಿಕೆಯ ಓದುಗರ ಪ್ರತಿಕ್ರಿಯೆ

ಬ್ಯುಟಿ ಟಿಪ್

"ಅತೀ ಸಣ್ಣಗಾಗುವುದು ಅಥವಾ ಅತೀ ಯಶಸ್ವಿಯಾಗುವುದು, ಎರಡೂ ಸಾಧ್ಯವಿಲ್ಲ"

-ಸೋನಮ್ ಕಪೂರ್, ನಟಿ


ಒಂದು ಸತ್ಯ

"ತನ್ನ ಪರವಾಗಿ ಯಶಸ್ವಿಯಾಗಿ ಲಾಬಿ ಮಾಡಬಲ್ಲ ನುರಿತ ವ್ಯಕ್ತಿ ಇಲ್ಲದೆ ಇವತ್ತು ಯಾವ ಕಾರ್ಪೊರೇಟ್ ಕಂಪನಿಯೂ ಸಂಪೂರ್ಣವಾಗಿರುವುದಿಲ್ಲ. ಟಾಟಾ ಕಂಪನಿಯ ಪರವಾಗಿ ಇವತ್ತು ಲಾಬಿ ಮಾಡುತ್ತಿರುವವಳು ನೀರಾ ರಾಡಿಯಾ. ಇಂಗ್ಲೆಂಡಿನಲ್ಲಿ ಹಲವು ಕಂಪನಿಗಳನ್ನು ದಿವಾಳಿ ಎಬ್ಬಿಸಿ ಬಂದ ಈಕೆಗೆ ಜಾಗತಿಕ ವಾಯುಯಾನಾ ವ್ಯವಹಾರದ ಬಗ್ಗೆ ಸಾಕಷ್ಟು ಅನುಭವವಿದೆ. ಮಾಜಿ ವಾಯುಯಾನ ಸಚಿವ ಅನಂತಕುಮಾರನಿಗೆ ಹತ್ತಿರವಾಗಿದ್ದ ಈಕೆ VSNL ನ ಬಹುದೊಡ್ಡ ಭಾಗ ಟಾಟಾಗಳಿಗೆ ಸಿಗುವಂತೆ ನೋಡಿಕೊಂಡಳು.

'ತೆಹೆಲ್ಕಾ' ಪತ್ರಿಕೆಯ ವರದಿ



ಒಂದು ಉಡುಗೆಯ ಜಗಳ



ಕೆಳೆದ ಶುಕ್ರವಾರ ಸಂಜೆ ನನಗಾಗಿ ನನ್ನ ಸ್ನೇಹಿತರು ಆಯೋಜಿಸಿದ್ದ ಪಾರ್ಟಿಗೆ ಹೋಗಲು ರೆಡಿಯಾಗಲಾರಂಭಿಸಿದೆ. ಯಾವ ಡ್ರೆಸ್ ಹಾಕಿಕೊಂಡರೆ ಚೆಂದ ಎಂದು ಹುಡುಕಾಡುತ್ತಿದ್ದಾಗ ಅಮೆರಿಕದಲ್ಲಿ ಖರೀದಿಸಿದ್ದ ಕಪ್ಪುಬಣ್ಣದ ಡ್ರೆಸ್ ಒಂದು "ನನ್ನನ್ನ ಹಾಕಿಕೊ, ನನ್ನನ್ನ ಹಾಕಿಕೊ" ಎನ್ನುತ್ತಿರುವಂತೆ ಕೈಗೆ ಸಿಕ್ಕಿತು. ತೋಳಿಲ್ಲದ, ನೆಕ್‌ಲೈನ್ ಸ್ವಲ್ಪ ಕೆಳಗೆ ಇದ್ದ, ಮಂಡಿಯ ತನಕ ಉದ್ದವಿದ್ದ ಇಂತಹ ಉಡುಪುಗಳನ್ನು ಕಾಕ್‌ಟೇಲ್ ಡ್ರೆಸ್ ಎಂದು ಕರೆಯುತ್ತಾರೆ. ಹೇಗಿದ್ದರೂ ನಾನು ಹೋಗುತ್ತಿದ್ದ ಪಾರ್ಟಿಯಲ್ಲಿ ಡ್ರಿಂಕ್ಸ್ ಕೂಡ ಇರುತ್ತದಲ್ಲವೆ ಎಂದು ಆ ಡ್ರೆಸ್ ಅನ್ನು ಧರಿಸಿ, ಅದಕ್ಕೆ ಹೊಂದುವ ಸರ, ಬ್ರೇಸ್‌ಲೆಟ್ ಮತ್ತು ಶೂ ಹಾಕಿಕೊಂಡು ಹೊರಬಂದೆ.

ನನ್ನ ಈ ಹೊಸ ಅವತಾರವನ್ನು ಕಂಡು ಅಮ್ಮ ಏನನ್ನುತ್ತಾರೊ ಎಂಬ ಕುತೂಹಲ ನನಗಿತ್ತು. ಅದಕ್ಕೆ ತಕ್ಕಂತೆ ನನ್ನನ್ನು ಕಂಡಕೂಡಲೆ ಅಮ್ಮ ಹುಬ್ಬುಗಂಟಿಕ್ಕಿದರು. ಆದರೂ ಸುಮ್ಮನಿರದ ನಾನು "ನನ್ನ ಡ್ರೆಸ್ ಹೇಗಿದೆ" ಅಂತ ಕೇಳಿದೆ.

"ಮೇಲೊಂದು ಸ್ವೆಟರ್, ಕೆಳಗೊಂದು ಸ್ಕರ್ಟ್ ಹಾಕಿಕೊಂಡರೆ ಸಂಪೂರ್ಣ ಆಗುತ್ತೆ" ಅಂದರು.

"ಡ್ರೆಸ್ ಅಡಿ ಸ್ಕರ್ಟ್ ಹಾಕೋಬೇಕಾ?"

ಅಮ್ಮ ಉತ್ತರಿಸುವ ಮುನ್ನ ತನ್ನ ರೂಮಿನಿಂದ ಹೊರಬಂದ ಶಾಂತನು ಸಣ್ಣದಾಗಿ ಶಿಳ್ಳೆ ಹೊಡೆದು "ಆಂಟಿ ಆಗೋ ವಯಸ್ಸಿನಲ್ಲಿ ಬ್ಯೂಟಿ ಆಗಲು ಹೊರಟಿದ್ದೀಯಲ್ಲಾ ಶಾರೂ?" ಎಂದ.

"ಏಯ್.... ಯಾರೋ ಆಂಟಿ ಆಗಿರೋದು? ನನಗೆ ಆಂಟಿ ವಯಸ್ಸು ಅಂತೀಯೇನೋ?" ಎಂದು ರೇಗಿದೆ.

"ಮತ್ತೆ? ನಿನ್ನ ಫ್ರೆಂಡ್ಸ್ ಮಕ್ಕಳಿಗೆ ನೀನು ಆಂಟಿ ಅಲ್ಲದೆ ಇನ್ನೇನು? ಅಷ್ಟೇ ಅಲ್ಲ, ಇವತ್ತು ಥರ್ಟಿ ಹತ್ತಿರ ಇರೋರನ್ನು ಹುಡುಗರು ಕರೆಯೋದೇ ಆಂಟಿ ಅಂತ, ಗೊತ್ತಾ?" ಅಂದ ಶಾಂತನು.

ಆತನಿಗೆ ಒಂದೇಟು ಹಾಕಲು ನೋಡಿದರೆ ಆತ ಸೋಫಾ ಹಾರಿ ನನ್ನ ಕೈಯಿಂದ ತಪ್ಪಿಸಿಕೊಂಡ.

ಆಗ ಅಮ್ಮ "ನನ್ನ ಅಜ್ಜಿಗೆ ನನ್ನ ಅಜ್ಜ ಏನು ಮಾಡ್ತಿದ್ದರೋ ಅದನ್ನೇ ನಿಂಗೆ ಮಾಡಬೇಕು ನೋಡು" ಎಂದರು.

"ಹಾ, ಆಂಟಿಯಿಂದ ಅಜ್ಜಿ ತನಕ ಹೋಯಿತಾ ವಿಷಯಾ? ಹೋಗಲಿ ನಿನ್ನ ಅಜ್ಜಿಗೆ ಅಜ್ಜ ಏನು ಮಾಡ್ತಿದ್ರೂ?" ಅಂದೆ.

"ಅವರಿಗೆ ಅಜ್ಜ ಆಗಾಗ್ಗೆ ಹೊಸ ಸೀರೆ ಕೊಡಿಸಿದರೂ, ಎಂದೂ ಹೊಸ ಕುಪ್ಪಸ ಕೊಡಿಸುತ್ತಿರಲಿಲ್ಲವಂತೆ. ಯಾಕೆ ಹೀಗೆ ಅಂತ ಕೊನೆಗೂ ಧೈರ್ಯ ಮಾಡಿ ಅಜ್ಜಿ ಕೇಳಿದಾಗ ಅಜ್ಜ ಏನಂದರಂತೆ ಗೊತ್ತಾ? ಹೊಸ ಸೀರೆ ಜೊತೆ ಹಳೇ ಕುಪ್ಪಸ ಹಾಕಿಕೊಂಡಿರೋದು ಜನರಿಗೆ ಗೊತ್ತಾಗಬಾರದೂ ಅಂತ ನೀನು ಸೆರಗನ್ನು ಮೈತುಂಬ ಸುತ್ತಿಕೋತೀಯಾ. ಇಲ್ಲಾ ಅಂದ್ರೆ ಹೊಸ ಸೀರೆ ಜೊತೆ ಕುಪ್ಪಸಾನೂ ಕಾಣಿಸುವಂತೆ ಸೀರೆ ಉಡುತ್ತೀಯಾ. ಅದಕ್ಕೆ ಹೊಸ ಕುಪ್ಪಸನ ಎಂದೂ ನಿನಗೆ ಕೊಡಸಲ್ಲ ಅಂದರಂತೆ."

"ಮಮ್ಮಿ, ನನ್ನ ಈ ತೋಳಿಲ್ಲದ ಡ್ರೆಸ್‌ಗೇನೇ ಇಷ್ಟೆಲ್ಲಾ ಹೇಳ್ತಿಯಲ್ಲಾ? ಮುತ್ತಜ್ಜಿ ಹಾಕಿಕೊಳ್ಳುತ್ತಿದ್ದಂತಹ ಬ್ಲೌಸ್ ಅನ್ನು ಇವತ್ತು ನಾನು ಹಾಕಿಕೊಂಡರೆ ಸುಮ್ಮನಿರ್ತಿಯಾ?"

"ಏನು ಹಂಗಂದ್ರೆ?" ಎಂದ ಶಾಂತನು.

"ಅಯ್ಯೋ, ಮುತ್ತಜ್ಜಿ ಬ್ಲೌಸ್ ಹೇಗಿರುತ್ತಿತ್ತು ಗೊತ್ತಾ? ಅದಕ್ಕೆ ತೋಳಿದ್ದರೂ ಇಲ್ಲದಂತಿರುತ್ತಿತ್ತು. ಆಗೆಲ್ಲ ಇನ್ನು ಗುಂಡಿ, ಬಟನ್, ಅವೆಲ್ಲ ಇರಲಿಲ್ಲ. ಅದಕ್ಕೆ ಅಜ್ಜಿ ತನ್ನ ಬ್ಲೌಸನ್ನ ಮುಂದೆ ಒಂದು ಗಂಟು ಹಾಕಿಕೊಂಡು ಕಟ್ಟಿಕೊಳ್ಳುತ್ತಿದ್ದರು. ಅದು ಎಷ್ಟು ಸೆಕ್ಸಿ ಆಗಿರ್ತಿತ್ತು ಅಂದ್ರೆ ಇವತ್ತು ಮಲ್ಲಿಕಾ ಶೆರಾವತ್ ಹಾಕಿಕೊಳ್ತಾಳಲ್ಲ, ಹಾಗಿರ್ತಿತ್ತು. ಅಂತಹದ್ದನ್ನು ನಾನಿವತ್ತು ಹಾಕಿಕೊಂಡ್ರೆ ಮಮ್ಮಿ ಲಬೋ, ಲಬೋ ಬಾಯಿ ಬಡಕೊಳ್ತಾರಷ್ಟೇ!" ಅಂದೆ.

"ಸುಮ್ಮನಾಗು ಶಾರು, ಹೋಗಿ ಬೇರೆ ಬಟ್ಟೆ ಹಾಕಿಕೋ ಜಾಣ" ಅಂದರು ಅಮ್ಮ.

"ನೋಡು ಮಮ್ಮಿ, ನನ್ನ ಡ್ರೆಸ್ ನಿನಗೆ ಬೋಲ್ಡ್ ಆಗಿ ಕಾಣಿಸಬಹುದು. ಆದರೆ ಇವತ್ತು ಅದೆಷ್ಟೋ ಹುಡುಗಿಯರು ಇದಕ್ಕಿಂತ ಬೋಲ್ಡ್ ಆಗಿರುವ ಡ್ರೆಸ್‌ಗಳನ್ನು ಹಾಕ್ತಾರೆ ಅಂತ ನಿಂಗೊತ್ತಿಲ್ಲ. ಒಂದು ಐಡಿಯಾ. ಹೇಗಿದ್ದರೂ ನನ್ನನ್ನ ಕರೆದುಕೊಂಡು ಹೋಗೋದಕ್ಕೆ ಕಬೀರ್ ಬರ್ತಾನಲ್ಲ, ಅವನನ್ನೇ ಕೇಳೋಣ. ಆತ ನಿನ್ನ ಪರಮ ಭಟ್ಟಂಗಿ. ಅವನು ಈ ಡ್ರೆಸ್ ಸರಿಯಾಗಿದೆ ಅಂದ್ರೆ ನೀನು ಒಪ್ಪಬೇಕು, Okನಾ?" ಅಂದೆ.

ಅದಕ್ಕೆ ಒಪ್ಪಿಕೊಂಡ ಅಮ್ಮ ಕಬೀರ್‌ನ ಆಗಮನಕ್ಕಾಗಿ ಕಾಯಲಾರಂಭಿಸಿದರು.

ಕಬೀರ್ ಬಂದವನೇ ನನ್ನ ಡ್ರೆಸ್ ನೋಡಿ ಏನನ್ನೂ ಹೇಳದೆ ಸುಮ್ಮನೆ ನಿಂತ. ಒಂದೆರಡು ಕ್ಷಣ ಕಾದ ನಂತರ ಅಮ್ಮನನ್ನು ಕೇಳಿದ್ದ "ಹೇಗಿದೆ ನನ್ನ ಡ್ರೆಸ್?" ಪ್ರಶ್ನೆಯನ್ನೇ ಆತನಿಗೂ ಕೇಳಿದೆ.

"ಮೇಲೊಂದು ಸ್ವೆಟರ್ ಹಾಕಿಕೊಂಡರೆ ಸರಿಯಾಗಿರುತ್ತೆ ಅಂತ ಅನ್ನಿಸುತ್ತಿದೆ" ಎಂದು ಕಬೀರ್ ಉತ್ತರಿಸಿದಾಗ ಅಮ್ಮ ಚಪ್ಪಾಳೆ ತಟ್ಟಲಾರಂಭಿಸಿದರು. ನನ್ನ ಮತ್ತು ಅಮ್ಮನ ನಡುವಿನ ಹುಸಿಜಗಳ ಅವನಿಗೂ ಗೊತ್ತಾಯಿತು.

"ಛೆ, ಏನಿದು ಕಬೀರ್, ನೀನೂ ಕೂಡ ಓಲ್ಡ್ ಫ್ಯಾಷನ್ಡ್ ಆಗಿದ್ದೀಯಲ್ಲಾ? ಹಾಗೆ ನೋಡಿದರೆ ಕೆಲ ಹುಡುಗಿಯರು ತಮ್ಮ ಹೊಕ್ಕಳು ಕಾಣಿಸುವಂತೆ ಸೀರೆ ಉಡ್ತಾರಲ್ಲಾ, ಅದಕ್ಕಿಂತಲೂ ನನ್ನ ಡ್ರೆಸ್ ಡೀಸೆಂಟ್ ಆಗಿದೆ" ಅಂದೆ.

ನನ್ನ ಹತ್ತಿರ ಬಂದು ನನ್ನ ಕೈಹಿಡಿದ ಕಬೀರ್, "ಒಂದು ನಿಮಿಷ ತಾಳ್ಮೆಯಿಂದಿರು ಶಾರು. ಅಮ್ಮ, ಉಡುಪುಗಳು ಅದನ್ನು ತೊಟ್ಟಿರುವುದರ ವ್ಯಕ್ತಿತ್ವದ ಭಾಗವಾಗಿರುತ್ತೆ. ಯಾವಾಗ ನಮಗೆ ಅದು ಅಸಹಜ ಮತ್ತು ಅಸಹ್ಯವಾಗಿ ಕಾಣಿಸುತ್ತೆಂದರೆ ಅದು ಅವುಗಳನ್ನು ತೊಟ್ಟಿರುವ ಮನುಷ್ಯನ ವ್ಯಕ್ತಿತ್ವಕ್ಕೆ ಹೊಂದದೆ ಇರುವಾಗ. ನಿಜವಾಗಲೂ ಹೇಳಬೇಕೆಂದರೆ ಈ ಡ್ರೆಸ್‌ನಲ್ಲಿ ಶಾರೂ ಬ್ಯೂಟಿಫುಲ್ ಆಗಿ ಕಾಣಿಸುತ್ತಿದ್ದಾಳೆ. ಯಾಕೆಂದರೆ ಈ ಡ್ರೆಸ್ ಅವಳ ವ್ಯಕ್ತಿತ್ವಕ್ಕೆ ಸೂಟ್ ಆಗುತ್ತಿದೆ" ಎಂದು ವಿವರಿಸಿದ.

"ಆದರೆ ಅವಳು ಸ್ವೆಟರ್ ಹಾಕಿಕೊಂಡರೆ ಚೆಂದ ಅಂತ ನೀನಂದೆ?" ಅಮ್ಮನ ಪ್ರಶ್ನೆ.

"ರಾತ್ರಿ ವಾಪಸ್ಸು ಬರುವಾಗ ಚಳಿ ಆದ್ರೆ ಅಂತ ಹಾಗೆ ಹೇಳಿದೆ."

"ಕಬೀರ್ ಹೇಳೋದು ಸರಿ ಅನ್ನಿಸುತ್ತೆ ಮಮ್ಮಿ" ಎಂದು ಹೇಳಿದ ಶಾಂತನು."ಯಾಕೆಂದರೆ ಇವತ್ತು ಸೋನಿಯಾ ಗಾಂಧಿನ ಸುಷ್ಮಾ ಸ್ವರಾಜ್‌ಳ ದೊಡ್ಡ ಬಿಂದಿಯುಲ್ಲಿ, ಅಡ್ವಾಣಿನ ನೆಹರೂ ಜಾಕೆಟ್‌ನಲ್ಲಿ, ಜಯಲಲಿತಾನ ಮಾಯಾವತಿಯ ಸಲ್ವಾರ್ ಸೂಟ್‌ನಲ್ಲಿ, ಅಪ್ಪನ್ನ ಬರ್ಮುಡಾ ಶಾರ್ಟ್ಸ್‌ನಲ್ಲಿ, ನಿನ್ನನ್ನ ಶಾರೂ ಈಗ ಹಾಕಿಕೊಂಡಿರುವ ಡ್ರೆಸ್‌ನಲ್ಲಿ ಇಮಾಜಿನ್ ಮಾಡಿಕೊಳ್ಳಕ್ಕಾಗುತ್ತಾ..." ಎಂದು ಕೇಳಿದ.

"ಸುಮ್ಮನಿರೋ ತರಲೆ" ಎಂದ ಅಮ್ಮ "ಏನೋ ಹೊಸ ಚಿಂತನೆ ಇರುವವರು ನೀವು. ನೀವು ಹೇಳಿದ್ದೇ ಸರಿ ಇರಬೇಕು" ಎಂದು ನಿಟ್ಟುಸಿರುಬಿಟ್ಟರು.

"ಒಂದೇ ಒಂದು ವಿಷಯ. ವ್ಯಕ್ತಿತ್ವವನ್ನು ಉಡುಪುಗಳು ಬಿಂಬಿಸುವುದಕ್ಕೂ, ಅಸಭ್ಯವಾಗಿ ಕಾಣುವ ಬಟ್ಟೆಗಳಿಗೂ ವ್ಯತ್ಯಾಸ ಇದೆ. ಆದರೆ ಅಸಭ್ಯ ಅಂದರೆ ಏನು ಎಂಬುದರ ಕಲ್ಪನೆಯೂ ಕಾಲಾನುಕಾಲಕ್ಕೆ ಬದಲಾಗ್ತಾನೆ ಇರುತ್ತೆ ಅಲ್ವ ಮಮ್ಮಿ. ನಿನ್ನ ಕಾಲದ ಸಿನಿಮಾ ವ್ಯಾಂಪ್ ಫ್ರಾಕ್ ಹಾಕೋದೇ ದೊಡ್ಡ ವಿಷಯವಾಗಿತ್ತು. ಆದರೆ ಈಗ ಸಾಮಾನ್ಯ ಹುಡುಗಿಯರೇ ಅಂಥ ಸ್ಕರ್ಟ್‌ಗಳನ್ನು ಧರಿಸುತ್ತಾರೆ. ನನ್ನ ಡ್ರೆಸ್ ನಿನಗೆ ಸ್ವಲ್ಪ ಬೋಲ್ಡ್ ಆಗಿ ಕಾಣಿಸಬಹುದು. ಆದರೆ ಖಂಡಿತವಾಗಿಯೂ ಇದು ಅಸಭ್ಯವಾಗಿಲ್ಲ" ಅಂತ ಅಮ್ಮನಿಗೆ ವಿವರಿಸಿದೆ.

ಆಗ ತನ್ನ ವಾಚ್ ನೋಡಿಕೊಂಡ ಕಬೀರ್ "ಲೇಟ್ ಆಗ್ತಿದೆ, ಹೊರಡೋಣ?" ಎಂದು ಕೇಳಿದ.

"ಒಂದು ನಿಮಿಷ" ಎಂದ ನಾನು ನನ್ನ ರೂಮಿಗೆ ಹೋಗಿ ನನ್ನ ಡ್ರೆಸ್‌ನೊಂದಿಗೆ ಮ್ಯಾಚ್ ಆಗುವ ಸ್ವೆಟರ್ ಒಂದನ್ನು ನನ್ನ ಹೆಗಲ ಮೇಲೆ ಹಾಕಿಕೊಂಡು ಹೊರಬಂದೆ.

ಕಬೀರ್ "come on" ಎನ್ನುತ್ತ ನನ್ನನ್ನು ಅವನ ಕಾರಿನಲ್ಲಿ ಕೂರಿಸಿಕೊಂಡು ಹೊರಟ.

■ ಶಾರದೆ

ರೈತರ ಬಗ್ಗೆ ಚಿಂತಿಸದ ಯಡ್ಡಿ ಮಣ್ಣಿನ ಮಗನೇ?



ಕಂಡಹಾಗೆ

■ ಗೌರಿ ಲಂಕೇಶ್

ಕೃಷ್ಣಯ್ಯ ಶೆಟ್ಟಿ ಎಂಬ ಬುದ್ಧಿಮಾಂದ್ಯ ವ್ಯಕ್ತಿ ಮಂತ್ರಿಗಾದಿಗೆ ಏರುತ್ತಿದ್ದಂತೆ ರಾಜ್ಯದ ಎಲ್ಲಾ ಮುಜರಾಯಿ ದೇವಾಲಯಗಳಲ್ಲಿ ಮುಖ್ಯಮಂತ್ರಿ ಹಾಗೂ ಸರ್ಕಾರದ ಹೆಸರಿನಲ್ಲಿ ಅರ್ಚನೆಗಳನ್ನು ನಡೆಸುವಂತೆ ಸುತ್ತೋಲೆಯನ್ನು ಹೊರಡಿಸಿದ್ದು ಅಚ್ಚರಿ ಏನಲ್ಲ. ಮೊದಲೇ ಈತ ಮೋಸ, ವಂಚನೆಯಿಂದ ಕೋಟ್ಯಾಧಿಪತಿಯಾಗಿರುವ ವ್ಯಕ್ತಿ. ಎರಡನೆಯದಾಗಿ ತನ್ನ ಈ ಹಡಬೆ ದುಡ್ಡನ್ನು ಯಡ್ಡಿಗೆ ನೀಡಿ ಮಂತ್ರಿ ಸ್ಥಾನವನ್ನು ಖರೀದಿಸಿರುವ ಕುಬೇರ. ಮೂರನೆಯದಾಗಿ ಬಾಯಲ್ಲಿ ದನ, ತಲೆಯಲ್ಲಿ ಸಗಣಿ ಎಂಬ ಮಾತಿಗೆ ಹೇಳಿಮಾಡಿಸಿರುವಂತಹ ವ್ಯಕ್ತಿ. ಈತನಿಂದ ಅಂತಹ ಸುತ್ತೋಲೆಯಲ್ಲದೆ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಈ ಶೆಟ್ಟಿ ಎಂತಹ ಭಂಡನೆಂದರೆ ರಾಜ್ಯಾದ್ಯಂತ ರೈತರು ಬಿತ್ತನೆ ಬೀಜ ಮತ್ತು ಗೊಬ್ಬರಕ್ಕಾಗಿ ಬೇಡುತ್ತಿದ್ದರೆ, ಅದಕ್ಕೆಂದು ಪೊಲೀಸರ ಗುಂಡೇಟಿಗೆ ಬಲಿಯಾಗುತ್ತಿದ್ದರೆ, ರಾಜ್ಯದ ಎಲ್ಲಾ ದೇವಸ್ಥಾನಗಳಲ್ಲಿ ಯಡ್ಡಿ ಹೆಸರಲ್ಲಿ ಅರ್ಚನೆಗಳನ್ನು ಮಾಡಿದರೆ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ಈತ ವಾದಿಸಿದ್ದಾನೆ. "ಒಂದೇ ಸಮಯದಲ್ಲಿ ಇಂತಹ ಪೂಜೆಗಳು ನೆರವೇರಿದರೆ ರಾಜ್ಯದ ಸುಭಿಕ್ಷೆಗೆ ಎಷ್ಟು ಲಾಭ ಆಗುತ್ತಿತ್ತು" ಎಂದು ಸುತ್ತೋಲೆಯನ್ನು ಹಿಂದೆ ಪಡೆಯಬೇಕಾಗಿ ಬಂದಾಗ ಮರುಗಿದ್ದಾನೆ.



ಈ ಬಿಜೆಪಿಗಳು ಯಾವಾಗ ವಿಧಾನಸೌಧದಲ್ಲೇ ಹೋಮ, ಹವನಗಳನ್ನು ನೆರವೇರಿಸಿದರೋ, ತಾವು ಕೂರುವ ಕುರ್ಚಿಗಳಿಗೂ ಪೂಜೆ ಸಲ್ಲಿಸಿದರೋ; ಇಂತಹ ಒಂದು ಮೂಢನಂಬಿಕೆಯ ಅಧ್ಯಾಯ ಕರ್ನಾಟಕದಲ್ಲಿ ಪ್ರಾರಂಭವಾಗಲಿದೆ ಎಂಬುದು ಸ್ಪಷ್ಟವಾಗಿತ್ತು. ಆದರೆ ನಮ್ಮ ಸಂವಿಧಾನದ ಜಾತ್ಯತೀತ ಆಶಯಗಳಿಗೆ ಬದ್ಧವಾಗಿರಬೇಕಿದ್ದ ಮಂತ್ರಿಯೋರ್ವ ತನ್ನ ಇಲಾಖೆಯನ್ನು ತನ್ನ ಸ್ವಂತ ಮಾಲೀಕತ್ವದ ಕಂಪನಿ ಎಂಬಂತೆ ಇಂತಹ ಹುಚ್ಚು ಸುತ್ತೋಲೆಯನ್ನು ಹೊರಡಿಸುವ ಮಟ್ಟಿಗೆ ಹೋಗುತ್ತಾನೆ ಎಂದರೆ ಇದು ಎಲ್ಲರಿಗೂ ಶಾಕ್ ನೀಡುವ ವಿಚಾರ.

ಈಗ ಈ ಸುತ್ತೋಲೆಯನ್ನು ವಾಪಸ್ಸು ಪಡೆಯಲಾಗಿದ್ದರೂ ಇದು ಬರಲಿರುವ ಚೆಡ್ಡಿಗಳ ಇನ್ನಷ್ಟು ಕಿತಾಪತಿಗಳಿಗೆ ಒಂದು ಮುನ್ಸೂಚನೆಯಷ್ಟೆ. ಯಾಕೆಂದರೆ ಚೆಡ್ಡಿಗಳಿಗೆ ನಮ್ಮ ಸಂವಿಧಾನದಲ್ಲಾಗಲಿ, ಅದರ ಜಾತ್ಯತೀತ ಆಶಯಗಳಲ್ಲಾಗಲಿ ಕಿಂಚಿತ್ತೂ ನಂಬಿಕೆ, ಗೌರವ, ಆಸಕ್ತಿಗಳಿಲ್ಲ. ಬದಲಾಗಿ ಎಲ್ಲೆಡೆ ತಮ್ಮ ಹಿಂದೂತ್ವ ಎಂಬ ಅಧರ್ಮವನ್ನು ಸ್ಥಾಪಿಸುವ ಹೆಬ್ಬಯಕೆ ಅವರದ್ದು.

ಈಗಾಗಲೇ ಯಡಿಯೂರಪ್ಪ ಹಣಕಾಸು ಸಚಿವರಾಗಿದ್ದಾಗ ಮಠಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಧಾರೆ ಎರೆದಿದ್ದರು. ಅಷ್ಟೇ ಅಲ್ಲ, ಈ ಮುಜರಾಯಿ ಇಲಾಖೆಯಡಿ ಬರುವ ದೇವಸ್ಥಾನಗಳಿಗೆ 2006-07ನೇ ಸಾಲಿನಲ್ಲಿ ವಾರ್ಷಿಕ ತಸದೀಕನ್ನು ಆರು ಕೋಟಿಗಳಿಂದ 21.48 ಕೋಟಿಗಳಿಗೆ ಏರಿಸಿದ್ದರು. ಇಂತಹ ಹಣ ಪಡೆದೇ ರಾಘವೇಶ್ವರ ಎಂಬ ದನಪ್ರಿಯ ಸ್ವಾಮಿ ಗೋ ಸಮ್ಮೇಳನ ಹೆಸರಲ್ಲಿ ಅರಣ್ಯ ಮತ್ತು ಪರಿಸರವನ್ನು ನಾಶ ಮಾಡಿದ್ದ. ತಸದೀಕನ್ನು ಹೆಚ್ಚಿಸಿದ್ದರಿಂದ ಹಲ ಬ್ರಾಹ್ಮಣ ಪೂಜಾರಿಗಳಿಗೆ ಲಾಭವಾಗಿರಬಹುದೇ ಹೊರತು ರಾಜ್ಯಕ್ಕಂತೂ ಯಾವ ಲಾಭವೂ ಆಗಿಲ್ಲ.

ಇಲ್ಲಿ ಬ್ರಾಹ್ಮಣ ಪೂಜಾರಿ ಎಂದು ಯಾಕೆ ಹೇಳುತ್ತಿದ್ದೇನೆ ಎಂದರೆ ಮುಜರಾಯಿ ಇಲಾಖೆಯ ನಿಯಮದ ಪ್ರಕಾರ ಯಾವ ದೇಗುಲಗಳಲ್ಲಿ ಆಗಮಿಕ ಪದ್ಧತಿಗಳನ್ನು ಅನುಸರಿಸಲಾಗುತ್ತದೋ ಅವುಗಳಿಗೆ ಮಾತ್ರ ಸರ್ಕಾರದ ಹಣ ನೀಡಲಾಗುತ್ತದೆ. ಇದರರ್ಥ ಹಿಂದುಳಿದ ವರ್ಗಗಳ ಮಾರಮ್ಮ, ಜೋಗಮ್ಮ ತರಹದ ಆಗಮಿಕ ಪದ್ಧತಿಯನ್ನು ಅನುಸರಿಸದ ದೇಗುಲಗಳಿಗೆ ಸರ್ಕಾರದ ಅನುದಾನವಿಲ್ಲ. ಅಂದರೆ ಸರ್ಕಾರ ಕೂಡ ನೇರವಾಗಿ ಪ್ರೋತ್ಸಾಹಿಸುತ್ತಿರುವುದು ಪುರೋಹಿತಶಾಹಿ ಸಂಸ್ಕೃತಿಯನ್ನೇ ಹೊರತು, ಜನಸಾಮಾನ್ಯರ ಸಂಸ್ಕೃತಿಯನ್ನಲ್ಲ.

ಒಂದೆಡೆ ಮೂಢನಂಬಿಕೆಗಳನ್ನು ಹೊಡೆದೋಡಿಸಿ ವೈಜ್ಞಾನಿಕ ಚಿಂತನೆಯನ್ನು ಬಲಪಡಿಸಬೇಕೆಂದು ಹೇಳುವ ಸಂವಿಧಾನ. ಇನ್ನೊಂದೆಡೆ ಮೂಢನಂಬಿಕೆಗಳನ್ನೇ ವಿಧಾನಸೌಧದೊಳಕ್ಕೆ ತಂದು, ಅದನ್ನೆಲ್ಲ ಸರ್ಕಾರಿ ಆದೇಶಗಳ ಮೂಲಕ ಅನುಷ್ಠಾನಕ್ಕೆ ತರಲು ಯತ್ನಿಸುವ ಸರ್ಕಾರ. ಇದನ್ನು ನಮ್ಮ ಸಂವಿಧಾನ ಬದ್ಧ ಸರ್ಕಾರ ಎಂದು ಒಪ್ಪಿಕೊಳ್ಳುವುದಾದರೂ ಹೇಗೆ.

ಕೊನೆಯದಾಗಿ: ಈ ಕೃಷ್ಣಯ್ಯ ಶೆಟ್ಟಿ ಎಂಥ ಈಡಿಯಟ್ ಅಂದರೆ ತಾನು ಹೊರಡಿಸಿದ ಸುತ್ತೋಲೆಯಲ್ಲಿ ತಾನು ಅಪಾರವಾಗಿ ನಂಬಿರುವ ದೇವರನ್ನೇ ತನ್ನ ಆದೇಶಗಳನ್ನು ಪಾಲಿಸುವ ಗುಲಾಮನಂತೆ ಬಿಂಬಿಸಿದ್ದೇನೆ ಎಂಬ ಅರಿವೂ ಆತನಿಗಿಲ್ಲ.

* * * * * * * *

ಅವತ್ತು ಮೇ 25 ನೇ ತಾರೀಖು. ಚುನಾವಣಾ ಫಲಿತಾಂಶಗಳು ಪ್ರಕಟಗೊಂಡು ಬಿಜೆಪಿ ಪಕ್ಷ 110 ಸ್ಥಾನಗಳನ್ನು ಪಡೆದ ಸಂಭ್ರಮದಲ್ಲಿದ್ದರು ಯಡಿಯೂರಪ್ಪ. ಅವರು ಶಾಸಕಾಂಗ ಪಕ್ಷದ ಸಭೆಯನ್ನು ಕರೆದು ತಾವೇ ಮುಖ್ಯಮಂತ್ರಿ ಎಂದು ಅಧಿಕೃತವಾಗಿ ಘೋಷಿಸುವ ಹುಮ್ಮಸ್ಸಿನಲ್ಲಿದ್ದರು.

ಅದೇ ದಿನ ರಾಜ್ಯದ ಬಹಳಷ್ಟು ಕಡೆ ರೈತರು ತಮ್ಮ ಭೂಮಿಯನ್ನು ಹಸನು ಮಾಡಿ ಬಿತ್ತನೆಗೆ ಸಿದ್ಧಗೊಂಡಿದ್ದರು.

ಮೇ 26: ಐವರು ಪಕ್ಷೇತರರ ಬೆಂಬಲವನ್ನು 'ಪಡೆಯುವಲ್ಲಿ' ಯಶಸ್ವಿಯಾದ ಬಿಜೆಪಿ ಯಡಿಯೂರಪ್ಪನನ್ನು ತನ್ನ ಶಾಸಕಾಂಗ ಪಕ್ಷದ ನಾಯಕಕನ್ನಾಗಿ ಆಯ್ಕೆ ಮಾಡಿತು.

ಅಂದು ಹಾಸನದಲ್ಲಿ ಬೀಜ ಮತ್ತು ಗೊಬ್ಬರಕ್ಕಾಗಿ ರೈತರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟಿಸಿದರು. ಕೃಷಿ ಇಲಾಖೆಗೆ ಮುತ್ತಿಗೆ ಹಾಕಿದರು, ಸಂತೇಪೇಟೆಯಲ್ಲಿ ರಸ್ತೆ ತಡೆ ಪ್ರತಿಭಟನೆಗೆ ಮುಂದಾದರು. ಅವರನ್ನು ಕೂಡಲೇ ಪೊಲೀಸರು ತಡೆದರು.

ಮೇ 27: ಯಡಿಯೂರಪ್ಪ ಸನ್ಮಾನ ಸಮಾರಂಭಗಳಲ್ಲಿ ಮುಳುಗಿದರು. ಅಭಿಮಾನಿಗಳ ಮಹಾಪುರ ಅವರ ಮನೆಗೆ ಎಡತಾಕಿತ್ತು. ಪೂಜೆ, ಪುರಸ್ಕಾರಗಳಲ್ಲಿ ಯಡ್ಡಿ ಬ್ಯೂಸಿ ಆದರು.

ಆದರೆ ಅತ್ತ ಹಾಸನ ಸೇರಿದಂತೆ ಹಲವಾರು ಕಡೆ ಗೊಬ್ಬರ ಹೆಚ್ಚು ಬೆಲೆಗೆ ಮಾರಾಟವಾಗಿ ರೈತರು ಕಂಗಾಲಾದರು.

ಮೇ 28: ಯಡ್ಡಿಯ ಸಂಭ್ರಮ ಯಾವ ಲಂಗೂ-ಲಗಾಮು ಇಲ್ಲದೆ ಮುಂದುವರೆಯಿತು.

ರೈತರೂ ತಮ್ಮ ಧರಣಿಗಳನ್ನು ಮುಂದುವರೆಸಿದರು.

ಮೇ 29: ತಮ್ಮ ಮಂತ್ರಿಮಂಡಲ ರಚನೆ ಬಗ್ಗೆ, ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡುವ ಬಗ್ಗೆ ಹಾಗೂ ಹಲವಾರು ಸ್ವಾಮಿ, ಮಠಾಧೀಶರ ಕಾಲಿಗೆರಗುವ ಬಗ್ಗೆಯೇ ಯಡ್ಡಿ ಹೆಚ್ಚು ಆಸಕ್ತಿ ವಹಿಸಿದರು. ಅದೇ ಹೊತ್ತಿಗೆ ಮಾರನೆ ದಿನ ನಡೆಯಲಿರುವ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಬಂದೋಬಸ್ತ್ ಮಾಡುವ ಬಗ್ಗೆ ಅಧಿಕಾರಿಗಳು ಹೆಚ್ಚು ಗಮನ ಕೊಟ್ಟರೆ ಹೊರತು ರೈತರ ಸಂಕಷ್ಟವನ್ನು ಬಗೆಹರಿಸುವ ಕುರಿತು ತಲೆ ಕೆಡಿಸಿಕೊಳ್ಳಲಿಲ್ಲ.

ಮೇ 30: ಹಸಿರು ಶಾಲ್ ಹೊದ್ದ ಯಡಿಯೂರಪ್ಪ ರೈತರ ಮತ್ತು ಭಗವಂತನ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಅದೇ ಸಂದರ್ಭದಲ್ಲಿ ಹಲವು ಖದೀಮರಿಗೂ, ಗಣಿ ಚೋರರಿಗೂ ತಮ್ಮ ಸಚಿವ ಸಂಪುಟದಲ್ಲಿ ಸ್ಥಾನ ನೀಡಿದರು.

ಬೆಂಗಳೂರಿನಲ್ಲಿ ಯಡ್ಡಿ ಗ್ಯಾಂಗ್ ಕೈಕೈ ಹಿಡಿದು ಸಂಭ್ರಮಿಸುತ್ತಿದ್ದ ಆ ದಿನದಂದೇ ದಾವಣಗೆರೆಯ ಜಿಲ್ಲಾಧಿಕಾರಿಗಳ ಕಚೇರಿಗೆ ರೈತರು ಮುತ್ತಿಗೆ ಹಾಕಿದರು. ಗೊಬ್ಬರವನ್ನು ಪೂರೈಸುವಂತೆ ಮತ್ತು ಕಾಳಸಂತೆಕೋರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಸ್ತೆ ತಡೆ ನಡೆಸಿದರು.

ಮೇ 31: ಸಚಿವ ಸ್ಥಾನದಿಂದ ವಂಚಿತರಾದ ಶಾಸಕರ ಆಕ್ರೋಶವನ್ನು ತಣಿಸುವಲ್ಲಿಯೇ ಯಡಿಯೂರಪ್ಪ ನಿರತರಾದರು. ಅಂದು ಪತ್ರಿಕಾಗೋಷ್ಠಿ ನಡೆಸಿದ ನೂತನ ಮುಖ್ಯಮಂತ್ರಿ ಯಡಿಯೂರಪ್ಪ ನಕ್ಸಲ್‌ರನ್ನು ನಿಗ್ರಹಿಸುವುದರ ಬಗ್ಗೆ, ಅಧಿಕಾರಿಗಳ ಸಭೆ ಕರೆಯುವುದರ ಬಗ್ಗೆ ಮಾತನಾಡಿದರು.

ಅವತ್ತೂ ಕೂಡ ಹಾಸನದಲ್ಲಿ ರೈತರು ಮತ್ತೆ ರಸಗೊಬ್ಬರದ ಕೊರತೆ ವಿರುದ್ಧ ಪ್ರತಿಭಟಿಸಿದರು. ಆಕ್ರೋಶಗೊಂಡಿದ್ದ ರೈತರನ್ನು ನಿಯಂತ್ರಿಸಲು ಪೊಲೀಸರ ಹರಸಾಹಸ ಮಾಡಬೇಕಾಯಿತು.

ಜೂನ್ 1: ದೆಹಲಿಗೆ ಹಾರಿ ಹೋದ ಯಡಿಯೂರಪ್ಪ ವಾಜಪೇಯಿಯ ಕಾಲಿಗೆ ಬಿದ್ದರು. ಬಿಜೆಪಿ ನಾಯಕರಿಂದ ಶಹಭಾಷ್‌ಗಿರಿ ಪಡೆದರು. ಜಗದೀಶ್ ಶೆಟ್ಟರ್‌ಗೆ ಮಂತ್ರಿ ಪದವಿ ನೀಡುವುದಿಲ್ಲ ಎಂದು ಹಟ ಮಾಡಿದರು.

ಜೂನ್ 2: ಹೊಗೇನಕಲ್ ಕುರಿತು ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರೊಂದಿಗೆ ಚರ್ಚಿಸಿದ ಯಡ್ಡಿ ತಮ್ಮ ಸರ್ಕಾರ ವಿಶ್ವಾಸ ಮತ ಗಳಿಸುವ ತಯಾರಿ ನಡೆಸಿದರು.

ಅವತ್ತು ಬಿತ್ತನೆ ಬೀಜ ವಿತರಿಸುವ ಬಗ್ಗೆ ಸರ್ಕಾರ ಮೀನಮೇಷ ಎಣಿಸುತ್ತಿದ್ದರ ಬಗ್ಗೆ ರಾಜ್ಯದ ಹಲವೆಡೆ ಉದ್ರಿಕ್ತಗೊಂಡ ರೈತರು ಪ್ರತಿಭಟಿಸಿದರು. ದಾವಣಗೆರೆ, ಬೆಳಗಾವಿ ಮತ್ತು ಹಾಸನ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಕಚೇರಿಗಳಿಗೆ ಮುತ್ತಿಗೆ ಹಾಕಿದರು. ದಾವಣಗೆರೆಯಲ್ಲಿ ರಸ್ತೆ ಸಾರಿಗೆಯ 8 ಕ್ಕೂ ಹೆಚ್ಚು ಬಸ್‌ಗಳಿಗೆ ಕಲ್ಲು ತೂರಿ ಜಖಂ ಮಾಡಿದರು. ಬೆಳಗಾವಿಯಲ್ಲಿ ಭ್ರಷ್ಟ ಕೃಷಿ ಅಧಿಕಾರಿಗಳು ತಮಗೆ ಬೇಕಾದ ಶ್ರೀಮಂತರಿಗೆ ಬೇಕಾದಷ್ಟು ಬಿತ್ತನೆ ಬೀಜ ವಿತರಿಸಿ ದಾಸ್ತಾನು ಖಾಲಿ ಮಾಡಿದ್ದಾರೆ ಎಂದು ರೈತರು ಪ್ರತಿಭಟಿಸಿದರು.

ಜೂನ್ 3: ಹೋಮ ಹವನಗಳೊಂದಿಗೆ ವಿಧಾನಸೌಧದಲ್ಲಿ ರಾಡಿ ಎಬ್ಬಿಸಿದ ನಂತರ ತಮ್ಮ ಪ್ರಥಮ ಅಧಿವೇಶನ ನಡೆಸುವುದರ ಬಗ್ಗೆ ಬ್ಯುಸಿ ಆಗಿದ್ದ ಯಡಿಯೂರಪ್ಪ ಕೊನೆಗೂ ರೈತರ ಬೇಡಿಕೆಯತ್ತ ತಮ್ಮ ಗಮನ ಹರಿಸಿದರು. ರೈತರು ಬಿತ್ತನೆ ಬೀಜ ಮತ್ತು ಗೊಬ್ಬರ ಸರಬರಾಜು ಮಾಡಿ ಎಂದು ಕೇಳುತ್ತಿದ್ದರೆ ಯಡ್ಡಿ ಹೇಳಿದ್ದೇನು ಗೊತ್ತೆ? "ಐದು ಎಕರೆ ಜಮೀನು ಹೊಂದಿರುವ ರೈತರಿಗೆ ಶೇ. 50 ರ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜ ವಿತರಿಸಲಾಗುವುದು" ಎಂದು!

ಜೂನ್ 4: ಪೆಟ್ರೋಲ್, ಡೀಸೆಲ್ ಮತ್ತು ಸಿಲಿಂಡರ್ ಬೆಲೆ ಹೆಚ್ಚಳ ಮಾಡಿರುವ ಬಗ್ಗೆ ಕೇಂದ್ರ ಸರ್ಕಾರದ ವಿರುದ್ಧ ಯಡ್ಡಿ ಕಿಡಿಕಾರಿದರು. ದೇವೇಗೌಡರನ್ನು ಭೇಟಿಯಾಗಿ ಹೂಗುಚ್ಛ ಕೊಟ್ಟರು. ವಿಧಾನ ಸಭಾಧ್ಯಕ್ಷ ಸ್ಥಾನಕ್ಕೆ ಶೆಟ್ಟರ್ ನಾಮಪತ್ರ ಸಲ್ಲಿಸುವಾಗ ಪಕ್ಕದಲ್ಲೇ ಹಲ್ಲು ಕಿರಿಯುತ್ತಾ ನಿಂತಿದ್ದರು.



ಅದೇ ದಿನ ತಮ್ಮ ಬೇಡಿಕೆಯನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದ್ದರಿಂದ ಮಾರನೆ ದಿನದಿಂದ ಉಗ್ರ ಪ್ರತಿಭಟನೆಯನ್ನು ಪ್ರಾರಂಭಿಸುವುದಾಗಿ ರೈತರು ಘೋಷಿಸಿದರು.

ಜೂನ್ 5: ಬಂಗಾರಪ್ಪನವರ ಮನೆಗೆ ಭೇಟಿ ನೀಡಿದ ಯಡ್ಡಿ ಅವರೊಂದಿಗೆ ಆರಾಮವಾಗಿ ಟೀ ಸೇವಿಸಿದರು. ಆರೋಗ್ಯದ ಬಗ್ಗೆ ವಿಚಾರಿಸಿಕೊಂಡರು. ಮಾರನೆ ದಿನ ವಿಶ್ವಾಸ ಮತ ಗೆಲ್ಲುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡರು.

ರಾಣೆಬೆನ್ನೂರಿನಲ್ಲಿ ಹೆದ್ದಾರಿ ತಡೆ ನಡೆಸಿದ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದರು. ರೈತರು ವಿವಿಧ ಗೊಬ್ಬರ ಅಂಗಡಿಗಳ ಮೇಲೆ ದಾಳಿ ನಡೆಸಿ 11,000 ಚೀಲ ಅಕ್ರಮವಾಗಿ ಗೊಬ್ಬರ ಸಂಗ್ರಹಸಿದ್ದನ್ನು ಪತ್ತೆಹಚ್ಚಿದರು.

ಜೂನ್ 8: ಯಡ್ಡಿ ವಿಶ್ವಾಸಮತವನ್ನು ಗೆದ್ದರು. ವಿಧಾನಸೌಧದಲ್ಲಿ ಪೂಜೆ ಮಾಡಿದರು. ದೇವರಾಜ ಅರಸು ಪುಣ್ಯತಿಥಿ ಅಂಗವಾಗಿ ಅವರ ಪ್ರತಿಮೆಗೆ ಹಾರ ಹಾಕಿ ಗೌರವಿಸಿದರು. ಬಿಡುವು ಸಿಕ್ಕಾಗ ಪತ್ರಿಕಾಗೋಷ್ಠಿ ನಡೆಸಿ ಗೊಬ್ಬರ ಕೊರತೆಯ ನಿವಾರಣೆಗೆ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು.

"ರೈತರು ಆತಂಕಕ್ಕೆ ಒಳಗಾಗದೆ ತಮಗೆ ಅಗತ್ಯದಷ್ಟು ಮಾತ್ರ ಗೊಬ್ಬರ ಖರೀದಿಸಬೇಕು" ಎಂದು ಪುಕ್ಕಟೆ ಸಲಹೆ ನೀಡಿದರು. ಗೊಬ್ಬರ ಬೆಲೆ ಇಷ್ಟೊಂದು ಹೆಚ್ಚಾಗಿರುವಾಗ ತನ್ನ ಅಗತ್ಯಕ್ಕಿಂತ ಹೆಚ್ಚು ಗೊಬ್ಬರವನ್ನು ಯಾವ ರೈತರಿಂದ ಖರೀದಿಸಲು ಸಾಧ್ಯ ಎಂಬ ಸರಳ ಸತ್ಯವೂ ಯಡ್ಡಿ ಎಂಬ ಢೋಂಗಿ 'ರೈತನಾಯಕ'ನಿಗೆ ಗೊತ್ತಿಲ್ಲ.

ಇರಲಿ, ಆ ದಿನವೂ ದಾವಣಗೆರೆಯಲ್ಲಿ ರೈತರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಸ್ತಾರೋಕೊ ನಡೆಸಿದರು. ಹಾಸನದಲ್ಲಿ ರಸ್ತೆ ತಡೆ ಕಾರ್ಯಕ್ರಮಗಳು ನಡೆದವು.

ಜೂನ್ 7: ಖಾತೆ ಕಸರತ್ತನ್ನು ಮುಗಿಸಿದ ಯಡ್ಡಿ ಭಂಟರ ಸಂಘದ ಉದ್ಘಾಟನೆ, ಚಿತ್ರರಂಗದ ಮಂದಿಯೊಂದಿಗೆ ಭೇಟಿ, ಇಂತಹ ಹಲವು ತುರ್ತು(!) ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಈ ಮಧ್ಯೆ ಗೊಬ್ಬರದ ಸಮಸ್ಯೆಯನ್ನು ಪರಿಹರಿಸಲು ತಾನು ಮ್ಯಾಜಿಕ್ ಮಾಡಲು ಸಾಧ್ಯವಿಲ್ಲ, ತಾವು ಈ ಸಮಸ್ಯೆಗೆ ಕಾರಣರಲ್ಲ, ರಾಜ್ಯಪಾಲರೇ ಇದಕ್ಕೆ ಹೊಣೆ ಎಂದು ಈ ಸಮಸ್ಯೆಯಿಂದಲೇ ಕೈ ಕೊಳೆದುಕೊಳ್ಳಲು ಯತ್ನಿಸಿದರು.

ಅವತ್ತೂ ರೈತರು ಗೊಬ್ಬರಕ್ಕಾಗಿ ಪರದಾಡುತ್ತಿದ್ದರು. ದಾವಣಗೆರೆ ಮತ್ತು ಹಾಸನದಲ್ಲಿ ರೈತರು ಬಂದ್ ಕರೆ ನೀಡಿದರು.

ಜೂನ್ 8: ಖಾತೆ ಹಂಚಿಕೆ ಕುರಿತು ಭುಗಿಲೆದ್ದ ಅಸಮಾಧಾನ ಯಡ್ಡಿಯನ್ನು ಸಂಪೂರ್ಣವಾಗಿ ಆವರಿಸಿತು.

ಅವತ್ತು ರೈಲ್ವೆ ಹಳಿ ಮೇಲೆ ಮಲಗಿದ ರೈತರು ಗೊಬ್ಬರಕ್ಕಾಗಿ ಜೀವ ಕೊಡಲೂ ಸಿದ್ಧ ಎಂದು ಪ್ರಕಟಿಸಿದರು.

ಜೂನ್ 10: ಹಾವೇರಿಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಯಡ್ಡಿಯೂರಪ್ಪನವರ ಪೊಲೀಸರು ಗುಂಡು ಹಾರಿಸಿ ಸಿದ್ಧಲಿಂಗಪ್ಪ ಚೂರಿ ಎಂಬ ರೈತನನ್ನು ಬಲಿ ತೆಗೆದುಕೊಂಡರು. ಅವತ್ತು ಇನ್ನೂ ಹಲವಾರು ರೈತರ ಪೊಲೀಸರ ಗುಂಡೇಟುಗಳಿಗೆ ಗಾಯಗೊಂಡರು.

ಆಗ ಯಡಿಯೂರಪ್ಪ ಮಾಡಿದ್ದೇನು ಗೊತ್ತಾ? ರೈತರಿಗೆ ಗೊಬ್ಬರ ಮತ್ತು ಬೀಜ ಸರಬರಾಜಿಗೆ ವ್ಯವಸ್ಥೆ ಮಾಡುವ ಬದಲಾಗಿ ಅವರು ಪ್ರತಿಭಟಿಸದಂತೆ ನೋಡಿಕೊಳ್ಳಲು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರನ್ನು ನೇಮಿಸಿದರು.

ಅಂದಹಾಗೆ ಅವತ್ತು ಬಿಜೆಪಿಯ ರಾಜ್ಯಾಧ್ಯಕ್ಷ ಮತ್ತು ಯಡ್ಡಿ ಭಂಟ ಸದಾನಂದ ಗೌಡ "ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಮುಖಂಡರು ಗೂಂಡಾಗಳನ್ನು ಬಳಸಿಕೊಂಡು ರೈತರ ಹೆಸರಲ್ಲಿ ಹುಬ್ಬಳ್ಳಿ, ಧಾರವಾಡ, ಹಾವೇರಿ ಮೊದಲಾದ ಕಡೆಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ್ಯಾರೂ ರೈತರಲ್ಲ" ಎಂದು ಹೇಳಿದರು.

ಅದಕ್ಕೆ ಸರಿಯಾಗಿ ಯಡ್ಡಿ ಕೂಡ "ಗೊಬ್ಬರಕ್ಕಾಗಿ ನಡೆಯುತ್ತಿರುವ ಹೋರಾಟದಲ್ಲಿ ಭಾಗವಹಿಸುತ್ತಿರುವ ಬಹಳಷ್ಟು ಮಂದಿ ರೈತರೇ ಅಲ್ಲ, ರೈತರು ಸಹನೆ ಕಳೆದುಕೊಳ್ಳಬಾರದು" ಎಂದು ಹೇಳಿದರು.

ಇಂತಹ ಮನುಷ್ಯ ತಾನು ರೈತ, ತಾನು ರೈತ ಚಳವಳಿಗಳಲ್ಲಿ ಭಾಗವಹಿಸಿದ್ದೇನೆ, ತಾನು ರೈತ ನಾಯಕ ಎಂದೆಲ್ಲಾ ಪೋಸು ಕೊಡುತ್ತಾ ರೈತರ ಹೆಸರಿನಲ್ಲಿ ಪ್ರಮಾಣವಚನ ಬೇರೆ ಸ್ವೀಕರಿಸುವ ಲಜ್ಜೆಗೇಡಿತನ ತೋರಿಸುತ್ತಾರೆ.

ಇಂತಹ 'ಮಣ್ಣಿನ ಮಗ'ನನ್ನು ಪಡೆದಿರುವ ಈ ರಾಜ್ಯದ ರೈತರಿಗೆ ನೆಮ್ಮದಿ ಸಿಗುವುದಾದರೂ ಹೇಗೆ? ■

ಡಿಸಿ ಮಣಿವಣ್ಣನ್ ಗಮನಿಸಲಿ

ಖಡಕ್ ಜಿಲ್ಲಾಧಿಕಾರಿ ಎಂದೇ ಖ್ಯಾತರಾಗಿರುವ ಮೈಸೂರು ಜಿಲ್ಲಾಧಿಕಾರಿ ಮಣಿವಣ್ಣನ್ ಈಗ ಶಾಸಕ ರಾಮದಾಸ್ ವಿರುದ್ಧ ಪೊಲೀಸ್ ಕೇಸ್ ದಾಖಲಿಸಿಕೊಳ್ಳುವಂತೆ ಆದೇಶಿಸಿರುವುದೇನೋ ಸರಿ. ಆದರೆ ಕಳೆದ 12 ವರ್ಷಗಳಿಂದ ಈ ಭೂಗಳ್ಳತನದ ಫೈಲ್ ಎಲ್ಲಿ ಅಡಗಿತ್ತು, ಆಗಲೇ ಯಾಕೆ ಕಾನೂನು ಕ್ರಮ ಜರುಗಿಸಲಿಲ್ಲ, ಅದಕ್ಕೆ ಹೊಣೆ ಯಾರು ಎಂಬುದನ್ನೂ ತನಿಖೆ ಮಾಡಿಸಬೇಕಿದೆ.

ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಶಾಸಕ ರಾಮದಾಸ್ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಿ ವಂಚಿಸಿರುವುದು ಕಡಿಮೆ ಅಪರಾಧವಲ್ಲ. ಹಾಗೇ ತಪ್ಪು ಮಾಡಿಯೂ ಇಷ್ಟು ದಿನ ಅವನು ಕಾನೂನಿನ ಕೈಗೆ ಸಿಗಲಿಲ್ಲ ಎಂಬುದೇ ಇದರಲ್ಲಿ ಕಂದಾಯ ಇಲಾಖೆ ಅಧಿಕಾರಿಗಳೂ ಶಾಮೀಲಾಗಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ.

ಮಣಿವಣ್ಣನ್ ಈ ಕೂಡಲೇ ತನಿಖೆ ಮಾಡಿಸಿ ಜೊತೆಗೆ ಮಳಲವಾಡಿಯ ಸರ್ಕಾರಕ್ಕೆ ಸೇರಬೇಕಾದ ಅಷ್ಟು ಜಮೀನನ್ನು ವಶಕ್ಕೆ ಪಡೆಯಬೇಕಿದೆ.

ರಾಮ್‌ಶ್ರೀ ಟ್ರಸ್ಟ್ ದಂಧೆ

ಶಾಸಕ ರಾಮದಾಸನ ತಂದೆ ಮಂಡ್ಯದವರು. ಅಲ್ಲಿನ ಆನೇಕೆರೆ ಬೀದಿಯ ಮನೆಮನೆಗೂ ಹೋಗಿ ನಾದಬ್ರಹ್ಮ ಊದುಕಡ್ಡಿಯನ್ನು ಮಾರಿಕೊಂಡಿದ್ದಾತ. ಅದೇ ಕುಟುಂಬದ ರಾಮದಾಸ್ ಈಗ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಮತದಾರರ ಮನೆಮನೆಗೆ ಡೈರಿ, ಕ್ಯಾಲೆಂಡರ್‌ಗಳು, ಪುಸ್ತಕ, ಸೀರೆ, ಯೂನಿಫಾರಂಗಳನ್ನು ಪುಗಸಟ್ಟೆಯಾಗಿ ಹಂಚುತ್ತಿದ್ದಾನೆ. ಇವುಗಳ ಒಟ್ಟು ಖರ್ಚನ್ನು ಲೆಕ್ಕ ಹಾಕಿದರೆ ಅದೇ 30 ರಿಂದ 40 ಲಕ್ಷಗಳಾಗುತ್ತವೆ.

ಇದು ಒಂದು ವರ್ಷದ ಖರ್ಚು!

ರಾಮದಾಸನಿಗೆ ಇಷ್ಟು ಹಣ ಎಲ್ಲಿಂದ ಬರುತ್ತಿದೆ. ಹೆಸರಿಗೆ ರಾಮ್‌ಶ್ರೀ ಟ್ರಸ್ಟ್ ಅಂತ ಒಂದು ಬೋರ್ಡ್ ನೇತು ಹಾಕಿಕೊಂಡು ಸಮಾಜ ಸೇವೆಯ ಮುಖವಾಡದಲ್ಲಿ ದಾನಧರ್ಮ ನಡೆಸುತ್ತಿರುವ ರಾಮದಾಸ್ ತನ್ನ ಏರಿಯಾ ಬಿಟ್ಟು ಹೊರಬಂದೇಟಿಗೆ ಭೂಗಳ್ಳನಾಗಿ ಬದಲಾಗಿ ಬಿಡುತ್ತಾನೆ.

ಮೈಸೂರು: ಪೊಲೀಸ್ ಬಲೆಗೆ ರಾಮದಾಸ್



ಮೈಸೂರಿನ ಬಿಜೆಪಿ ಶಾಸಕ ಎ. ರಾಮದಾಸನ ಪಾಪದ ಕೊಡ ತುಂಬಿರುವಂತೆ ಕಾಣುತ್ತಿದೆ.

ಮೈಸೂರು ಜಿಲ್ಲಾಧಿಕಾರಿಗಳು ಕೃಷ್ಣರಾಜ ಕ್ಷೇತ್ರದ ಶಾಸಕ ರಾಮದಾಸನ ವಿರುದ್ಧ ಒಂದು ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಅಶೋಕಪುರಂ ಪೊಲೀಸರಿಗೆ ಇತ್ತೀಚೆಗೆ ಆದೇಶ ಕೊಟ್ಟಿದ್ದಾರೆ. (ಸಂಖ್ಯೆ ಇಎಲ್‌ಎಸ್ 08-2007-08 ದಿ. 19.4.08)

ರಿಯಲ್ ಎಸ್ಟೇಟ್ ವಂಚನೆ ಪ್ರಕರಣ ಇದು.

ರಾಜ್ಯದ ಹೊಸ ಬಿಜೆಪಿ ಸರ್ಕಾರದಲ್ಲಿ ಸಚಿವಗಿರಿಗಾಗಿ ಭಾರಿ ಸರ್ಕಸ್ ಮಾಡಿದ್ದ ರಾಮದಾಸ್ ಅಲ್ಲಿ ವಿಫಲರಾಗಿದ್ದರು. ಈಗ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹುದ್ದೆಯಾದರೂ ಸಿಗಲೆಂದು ಕಂಡಕಂಡವರ ಕಾಲು ಹಿಡಿಯುತ್ತಿರುವ ರಾಮದಾಸ್‌ಗೆ ಈಗ ಪೊಲೀಸ್ ತನಿಖೆಯ ಭೀತಿ ಎದುರಾಗಿದೆ. ಒಂದು ವೇಳೆ ಮುಂದಿನ ತನಿಖೆ ನಿಷ್ಪಕ್ಷಪಾತವಾಗಿ ನಡೆದಿದ್ದೇ ಆದಲ್ಲಿ ಈ ರಾಮದಾಸ್ ಕೃಷ್ಣಜನ್ಮಸ್ಥಾನ ಸೇರಲೂಬಹುದು.

ಏಕೆಂದರೆ ಅದು ನೂರಾರು ಕೋಟಿ ರೂ.ಗಳ ವಂಚನೆ ಹಗರಣ. ಒಂದು ಕಡೆ ಸರ್ಕಾರಕ್ಕೆ ಮತ್ತೊಂದೆಡೆ ಸಾವಿರಾರು ಅಮಾಯಕರಿಗೆ ವಂಚಿಸಿರುವ ಭಾರಿ ಚೀಟಿಂಗ್ ಕೇಸ್ ಇದು. ಈಗ ಲಭ್ಯವಿರುವ ಅಧಿಕೃತ ದಾಖಲೆಗಳು, ಹಿಂದಿನ ಮೈಸೂರು ಜಿಲ್ಲಾಧಿಕಾರಿ ತ.ಮ. ವಿಜಯಭಾಸ್ಕರ್‌ರ ತನಿಖಾ ವರದಿಗಳೆಲ್ಲಾ ಶಾಸಕ ರಾಮದಾಸ್ ವಂಚಕ ಎಂಬುದನ್ನು ಖಚಿತವಾಗಿ ಹೇಳುತ್ತಿವೆ. ಈ ವಂಚನೆ ನಡೆದದ್ದು 1995 ರಲ್ಲಾದರೂ ಇದುವರೆಗೂ ಕಾನೂನು ಕ್ರಮ ತೆಗೆದುಕೊಳ್ಳದಂತೆ ಲಾಬಿ ಮಾಡಿಕೊಂಡು ಬಂದಿದ್ದ ರಾಮದಾಸ್‌ಗೆ 12 ವರ್ಷಗಳ ನಂತರ ಈಗ ಮತ್ತೆ ಆ ಕೇಸ್ ಬೆಂಬಿಡದ ಭೂತದಂತೆ ಬೆನ್ನುಹತ್ತಿದೆ.

ಈ ವಂಚನೆ ಪ್ರಕರಣಕ್ಕೆ ಮತ್ತೆ ಜೀವ ನೀಡಿ ಬೆಳಕಿಗೆ ತಂದಿರುವುದು ಬೇರೆ ಯಾರೂ ಅಲ್ಲ ಒಬ್ಬ ಪತ್ರಕರ್ತ.

ಆತ ಕೃಷ್ಣ.

ಮೈಸೂರಿನ ಪತ್ರಕರ್ತರ ವಲಯದಲ್ಲಿ ಸ್ನೇಹಜೀವಿ ಕೃಷ್ಣ ಎಂದೇ ಹೆಸರಾಗಿರುವ ಕೃಷ್ಣ ಸಕಲೆಂಟು ದಾಖಲೆಗಳೊಂದಿಗೆ ಈಗ ಶಾಸಕ ರಾಮದಾಸ್ ವಿರುದ್ಧ ಯುದ್ಧ ಘೋಷಿಸಿದ್ದಾರೆ. ಈತನ ಒತ್ತಡದಿಂದಾಗಿ ಈಗ ಪೊಲೀಸರೂ ಬೇರೆ ದಾರಿಯಿಲ್ಲದೆ ರಾಮದಾಸ್ ವಿರುದ್ಧ ಕೇಸ್ ದಾಖಲಿಸುವ ಅನಿವಾರ್ಯತೆಗೆ ಸಿಲುಕಿದ್ದಾರೆ.

ಸರ್ಕಾರಕ್ಕೆ ಸೇರಬೇಕಿದ್ದ ಭೂಮಿ ಲಪಟಾಯಿಸಿದ್ದು ಮೊದಲ ಅಪರಾಧವಾದರೆ, ಆ ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಪರಿವರ್ತಿಸದೆ ಸೈಟುಗಳಾಗಿ ವಿಂಗಡಿಸಿ ಅಮಾಯಕರಿಗೆ ಮಾರಿ ದುಡ್ಡು ದೋಚಿದ್ದು ಎರಡನೇ ಅಪರಾಧವಾಗಿದೆ. ಈ ವಹಿವಾಟಿಗೆ ಕಂದಾಯ, ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಅನುಮತಿ ಬೇಕಿತ್ತಾದರೂ ಧನದಾಹಿ ರಾಮದಾಸ್ ಕಾನೂನಿಗೆ ಕೇರ್ ಮಾಡಲೇ ಇಲ್ಲ.


ಮಳಲವಾಡಿ ಭೂಹಗರಣ

ಒಂದು ಕಾಲದಲ್ಲಿ 'ನಾದಬ್ರಹ್ಮ' ಬ್ರಾಂಡಿನ ಊದುಬತ್ತಿ ಮಾರಿಕೊಂಡು ಜೀವನ ನಡೆಸುತ್ತಿದ್ದ ರಾಮದಾಸ್ ನಂತರ ರಾಜಕೀಯಕ್ಕೆ ಬಂದು 90 ರ ದಶಕದಲ್ಲಿ ಮೈಸೂರು ಭೂ ವ್ಯವಹಾರಗಳಿಗೆ ಕೈ ಹಾಕಿದ್ದ. ಭೂಮಿ ಹಾಗೂ ಸೈಟ್‌ಗಳಿಗೆ ಭಾರಿ ಡಿಮ್ಯಾಂಡ್ ಕುದುರುತ್ತಿದ್ದ ಕಾಲ ಅದು.

ಮೈಸೂರು ನಗರಕ್ಕೆ ತಾಗಿಕೊಂಡಂತಿದ್ದ ಕಸಬಾ ಹೋಬಳಿ ಮಳಲವಾಡಿ ಗ್ರಾಮದ ಸರ್ವೆ ನಂಬರ್ 32, 33, 34 ರಲ್ಲಿದ್ದ ಒಟ್ಟು 16.5 ಎಕರೆ ಜಮೀನು ನೀಲಕಂಠ ಬಿನ್ ಆಂಜಿನಪ್ಪ ಎಂಬುವನಿಗೆ ಸೇರಿತ್ತು. ಇದು 1975 ರಲ್ಲೇ ಮೈಸೂರು ನಗರ ಯೋಜನೆ ವ್ಯಾಪ್ತಿಗೆ ಸೇರಿದ್ದ ಭೂಮಿ. ಆದರಂತೆ ಸರ್ಕಾರವು ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ವಹಿಸಿದಾಗ 1976 ರಲ್ಲೇ ಭೂಮಾಲೀಕರು ಇದನ್ನು ಒಪ್ಪಿ ಘೋಷಣೆ ಪತ್ರ ನೀಡಿದ್ದರು. ನಂತರ ಈ ಭೂಮಿ ಸರ್ಕಾರದ ವಶಕ್ಕೆ ಬಂತೆಂಬುದಾಗಿ ಆಗಿನ ಡಿ.ಸಿ. ಆದೇಶ ಹೊರಡಿಸಿದ್ದರು. ಆಮೇಲೆ ಭೂಮಾಲೀಕರು ಇದನ್ನು ಪ್ರಶ್ನಿಸಿ ವಿಭಾಗಾಧಿಕಾರಿಗೆ ಅರ್ಜಿ ನೀಡಿದರಾದರೂ ಅದಕ್ಕೆ ಬೆಲೆ ಸಿಕ್ಕಿರಲಿಲ್ಲ. ಈ ಭೂಮಿ ಸರ್ಕಾರದ್ದೆಂದು 21.11.95 ರಲ್ಲಿ ತೀರ್ಪು ಹೊರಬಿತ್ತು.

ರಾಮದಾಸ್ ರಂಗಪ್ರವೇಶವಾದದ್ದು ಈ ಹಂತದಲ್ಲೇ.

ಈ ಜಮೀನಿನ ಮಾಲೀಕತ್ವವನ್ನು ಅಕ್ರಮವಾಗಿ ಬೇರೆಯವರಿಗೆ ಪರಭಾರೆ ಮಾಡಿಸಿದ ರಾಮದಾಸ್ ನಂತರ ಆ ವ್ಯಕ್ತಿಗಳಿಂದ ತಾವೇ ನೇರವಾಗಿ ಭೂ ಮಾರಾಟದ ಜನರಲ್ ಪವರ್ ಆಫ್ ಅಟಾರ್ನಿ (GPA) ಪಡೆದುಕೊಂಡು ಬಿಟ್ಟರು. ಲಕ್ಷ್ಮಮ್ಮ, ಕೆಂಪಮ್ಮ, ಎ. ನಾರಾಯಣ, ಗಿರೀಶ್ ಗೌಡ, ಎ. ನೀಲಕಂಠಪ್ಪ ಎಂಬುವರಿಗೆ ಈ 16 ಎಕರೆ ಭೂಮಿ ಸೇರಿದೆ ಎಂಬುದಾಗಿ ಬಿಂಬಿಸಿ ಅವರಿಂದಲೇ ಜಿಪಿಎ ಪಡೆದು ಸೈಟು ದಂಧೆ ಶುರು ಮಾಡಿಬಿಟ್ಟ ಈ ರಾಮದಾಸ ಮಹಾಶಯ.



ವಿಷಯ: ಶ್ರೀ ಎ. ರಾಮದಾಸ್ ಮಾಜಿ ವಿಧಾನ ಸಭಾ ಸದಸ್ಯರು ಕೃಷ್ಣರಾಜ ಕ್ಷೇತ್ರ ಮೈಸೂರು ಇವರ ವಿರುದ್ಧ ಸಲ್ಲಿಸಿರುವ ದೂರು ಬಗ್ಗೆ.

ಉಲ್ಲೇಖ: ಶ್ರೀ ಸ್ನೇಹ ಜೀವಿ ಕೃಷ್ಣ ಸುದ್ದಿ ಸುಗ್ಗಿ ಪಾಕ್ಷಿಕ ಪತ್ರಿಕೆ ಮೈಸೂರು ಇವರ ದಿನಾಂಕ 11.04.2008 ರ ದೂರು ಅರ್ಜಿ

*****

ಶ್ರೀ ಎ.ರಾಮದಾಸ್ ಮಾಜಿ ವಿಧಾನ ಸಭಾ ಸದಸ್ಯರು ಕೃಷ್ಣರಾಜ ಕ್ಷೇತ್ರ ಇವರು, ಮೈಸೂರು ತಾಲ್ಲೂಕು ಕಸಬಾ ಹೋಬಳಿ ಮಳಲವಾಡಿ ಗ್ರಾಮದ ಸರ್ವೆ ನಂಬರ್ 32/2,32/3,33/2,33/3,34/2 ರ ಜಮೀನುಗಳು ನಗರ ಭೂಮಿತಿ ಕಾಯಿದೆಯ ಒಳಪಟ್ಟಿದ್ದು ಸದರಿ ಜಮೀನನ್ನು ಭೂ ಮಾಲೀಕರಾದ ಶ್ರೀ ಎ.ನೀಲಕಂಠಪ್ಪ ಮತ್ತಿತರರುಗಳಿಂದ ಜಿ.ಪಿ.ಎ ಪಡೆದು ಅಕ್ರಮವಾಗಿ ನಿವೇಶನಗಳನ್ನು ರಚಿಸಿ ಮಾರಾಟ ಮಾಡುವುದರ ಮೂಲಕ ನಗರ ಭೂ ಮಿತಿ ಕಾಯಿದೆಯನ್ನು ಉಲ್ಲಂಘನೆ ಮಾಡಿರುತ್ತಾರೆಂದು. ಅನ್ನಲ್ಲದೆ ಮಂಜೂರಾತಿ ಪಡೆಯದೆ ನಿವೇಶನಗಳನ್ನಾಗಿ ರಚಿಸಿ, ಭೂ ಕಂದಾಯ ಕಾಯಿದೆಯನ್ನು ಉಲ್ಲಂಘಿಸಿರುವುದಾಗಿ ಸದರಿ ಜಮೀನುಗಳಲ್ಲಿ ಯಾವುದೇ ಮನೆಗಳಿಲ್ಲದಿದ್ದರೂ ಮನೆಗಳಿವೆ ಎಂದು ಸುಳ್ಳು ದಾಖಲೆ ಸೃಷ್ಟಿಸಿರುವುದಾಗಿ, ಕರ್ನಾಟಕ ಭೂ ಸುಧಾರಣಾ ಕಾಯಿದೆ 79 ಎ ಮತ್ತು 79 ಬಿ ಉಲ್ಲಂಘನೆ ಮಾಡಿರುವುದರಿಂದ ಸದರಿಯವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡದ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಕೋರಿ ಸಲ್ಲಿಸಿರುವ ದೂರು ಅರ್ಜಿಯ ಪ್ರತಿಯನ್ನು ಈ ಕೂಡ ಲಗತ್ತಿಸಿದೆ.

ಮೊಕದ್ದಮೆ ನೋಂದಾಯಿಸಿಕೊಂಡು ದೂರು ಅರ್ಜಿಯಲ್ಲಿನ ಅಂಶಗಳ ಬಗ್ಗೆ ಸತ್ಯ ಸತ್ಯತೆ ಬಗ್ಗೆ ಬಗ್ಗೆ ಪರಿಶೀಲಿಸಿ, ಕ್ರಮ ಕೈಗೊಳ್ಳಲು ಕೋರಿದೆ.

ತಮ್ಮ ನಂಬುಗೆಯ


ಜಿಲ್ಲಾಧಿಕಾರಿಗಳ ಪರವಾಗಿ

ಮೈಸೂರು ಜಿಲ್ಲೆ ಮೈಸೂರು

ಪೊಲೀಸರಿಂದ ಜಿಲ್ಲಾಧಿಕಾರಿ ಬರೆದ ಪತ್ರ...

ಈ ಹಂತದಲ್ಲಿ ರಾಮದಾಸ್ ಮಾಡಿರುವ ವಂಚನೆಗಳು ಒಂದೆರಡಲ್ಲ.

ಸರ್ಕಾರಕ್ಕೆ ಸೇರಬೇಕಿದ್ದ ಭೂಮಿ ಲಪಟಾಯಿಸಿದ್ದು ಮೊದಲ ಅಪರಾಧವಾದರೆ, ಆ ಕೃಷಿ ಭೂಮಿಯನ್ನು ವಸತಿ ಉದ್ದೇಶಕ್ಕೆ ಪರಿವರ್ತಿಸದೆ ಸೈಟುಗಳಾಗಿ ವಿಂಗಡಿಸಿ ಅಮಾಯಕರಿಗೆ ಮಾರಿ ದುಡ್ಡು ದೋಚಿದ್ದು ಎರಡನೇ ಅಪರಾಧವಾಗಿದೆ. ಈ ವಹಿವಾಟಿಗೆ ಕಂದಾಯ, ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಅನುಮತಿ ಬೇಕಿತ್ತಾದರೂ ಧನದಾಹಿ ರಾಮದಾಸ್ ಕಾನೂನಿಗೆ ಕೇರ್ ಮಾಡಲೇ ಇಲ್ಲ. ಇನ್ನೂ ದೊಡ್ಡ ಮೋಸ ಏನೆಂದರೆ ಈ ಅನಧಿಕೃತ, ಅಕ್ರಮ ನಿವೇಶನಗಳನ್ನು ಅವುಗಳ ಮಾರ್ಕೆಟ್ ರೇಟಿಗಿಂತ ಕಡಿಮೆ ಬೆಲೆ ನಮೂದಿಸಿ ಸಬ್ ರಿಜಿಸ್ಟರ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿಸಲಾಗಿದೆ.



ಪತ್ರಕರ್ತ ಕೃಷ್ಣ

ರಾಮದಾಸನ ವಂಚನೆ ಇಲ್ಲಿಗೂ ಮುಗಿಯುವುದಿಲ್ಲ.

ಅದೆಲ್ಲಾ ಸರ್ಕಾರಿ ಜಮೀನಾಗಿದ್ದು, conversion ಕೂಡ ಆಗದಿದ್ದುದರಿಂದ ತನ್ನ ಕ್ರಿಮಿನಲ್ ಬುದ್ಧಿ ಉಪಯೋಗಿಸಿದ ರಾಮದಾಸ್ ಆಗ ಹಿನಕಲ್ ಮಂಡಲ ಪಂಚಾಯಿತಿ ಕಾರ್ಯದರ್ಶಿಯಾಗಿದ್ದ ಬಸಪ್ಪ, ಬಿಲ್ ಕಲೆಕ್ಟರ್ ಕೆಂಡಗಣಪ್ಪನನ್ನು ಲಂಚದ ಬಲೆಗೆ ಸಿಕ್ಕಿಸಿಕೊಂಡ. 1993-94 ನೇ ಸಾಲಿನಲ್ಲಿ ಪಂಚಾಯ್ತಿಯಲ್ಲೇ ತನ್ನಿಂದ ಸೈಟು ಖರೀದಿಸಿದವರಿಗೆ 90 ಅಕ್ರಮ ಖಾತೆಗಳನ್ನು ಮಾಡಿಸಿಕೊಟ್ಟುಬಿಟ್ಟ. ಮೈಸೂರು ನಗರ ವ್ಯಾಪ್ತಿಗೆ ಬರುತ್ತಿದ್ದ ಈ ಭೂಮಿಯ ತಂಟೆಗೆ ಸ್ಥಳೀಯ ಮಂಡಲ ಪಂಚಾಯಿತಿ ಬರುವಂತಿರಲೇ ಇಲ್ಲ. ಆದಾಗ್ಯೂ ರಾಮದಾಸ್ ಕೆಳಹಂತದ ಅಧಿಕಾರಿಗಳನ್ನು ಬಗ್ಗಿಸಿ ತನ್ನ ದಂಧೆಗೆ ಸರಿಪಡಿಸಿಕೊಂಡಿದ್ದ.

ಇಷ್ಟು ಅವ್ಯವಹಾರ ನಡೆಸುವಷ್ಟರಲ್ಲಿ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿ ಹೋಗಿದ್ದರೆ ಅದೇ ವೇಳೆಯಲ್ಲಿ ರಾಮದಾಸ್ ಕೋಟ್ಯಾಧೀಶನಾಗಿ ಹೋಗಿದ್ದ.

ಅಖಾಡಕ್ಕೆ ವೇದಾಂತ ಹೆಮ್ಮಿಗೆ

ಈ ಭೂಗಳ್ಳತನದ ಬಗ್ಗೆ ಅಲ್ಲಲ್ಲೇ ಪುಕಾರುಗಳೇಳುತ್ತಿದ್ದಂತೆ ಹೆಚ್ಚಿನ ಮಾಹಿತಿ ಸಂಗ್ರಹಿಸಿದ ಮಾಜಿ ಶಾಸಕ ವೇದಾಂತ ಹೆಮ್ಮಿಗೆ ಆಗಿನ ಮೈಸೂರು ಜಿಲ್ಲಾಧಿಕಾರಿ ತ.ಮ. ವಿಜಯಭಾಸ್ಕರ್‌ಗೆ ಲಿಖಿತ ದೂರು ನೀಡಿ ರಾಮದಾಸ್‌ನ ಅವ್ಯವಹಾರ ಹಾಗೂ ಸರ್ಕಾರಕ್ಕೆ ವಂಚನೆ ಮಾಡಿರುವ ಬಗ್ಗೆ ತನಿಖೆ ನಡೆಸುವಂತೆ ಕೋರಿದ್ದರು.

ಅದರಂತೆ ಸಮಗ್ರ ತನಿಖೆ, ಸ್ಥಳ ಪರಿಶೀಲನೆ ಎಲ್ಲವೂ ಆಯಿತು.

ಭೂಗಳ್ಳ ರಾಮದಾಸ್ ಸಿಕ್ಕಿಬಿದ್ದ!

ಆದರೆ ಆಶ್ಚರ್ಯದ ಸಂಗತಿ ಏನೆಂದರೆ ಈ ತನಿಖಾ ವರದಿ ಪೂರ್ಣಗೊಂಡು ರಾಮದಾಸನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿ ಈಗ್ಗೆ ೧೨ ವರ್ಷಗಳಾಗಿ ಹೋಗಿವೆ. ಆದರೂ ಕಂದಾಯ ಇಲಾಖೆ ನಿನ್ನೆಮೊನ್ನೆಯವರೆಗೂ ಈ ಬಗ್ಗೆ ಮೌನ ವಹಿಸಿತ್ತು.

ಇದು ಅನುಮಾನಾಸ್ಪದವಾಗಿದೆ. ಈಗ ಪತ್ರಕರ್ತ ಕೃಷ್ಣರ ಪ್ರಯತ್ನಗಳಿಂದಾಗಿ ಈ ವಂಚನೆ ಪ್ರಕರಣಕ್ಕೆ ಮತ್ತೆ ಜೀವ ಬಂದಿದೆ.

ಜಿಲ್ಲಾಧಿಕಾರಿಗಳ ಆದೇಶದಂತೆ ಅಶೋಕಪುರಂ ಪೊಲೀಸರು ಈಗ ಶಾಸಕನಾಗಿ ಮತ್ತೆ ಗೆದ್ದಿರುವ ರಾಮದಾಸ್ ವಿರುದ್ಧ ಮೇ 21 ನೇ ತಾರೀಖು FIR ದಾಖಲಿಸಿಕೊಂಡಿದ್ದಾರೆ.

ಇನ್ಸ್‌ಪೆಕ್ಟರ್ ಸಿದ್ಧರಾಜು ತನಿಖಾಧಿಕಾರಿ ಈ ತನಿಖೆ ವೇಗವಾಗಿ ನಡೆದು ಪೂರ್ಣಗೊಂಡರೆ ರಾಮದಾಸ್ ವಿಧಾನ ಸಭೆಯಿಂದ ನೇರವಾಗಿ ಜೈಲಿಗೆ ಹೋಗಬೇಕಾಗುತ್ತದೆ. ಇಂಥ ಹಗಲು ದರೋಡೆಯವನನ್ನು, ಸರ್ಕಾರಕ್ಕೆ ವಂಚಿಸಿ ಕೋಟ್ಯಂತರ ರೂಪಾಯಿ ನುಂಗಿರುವ ಖದೀಮನನ್ನು ಸಿಎಂ ಯಡಿಯೂರಪ್ಪ ತಮ್ಮ ಸಂಸದೀಯ ಕಾರ್ಯದರ್ಶಿ ಮಾಡಿಕೊಳ್ಳಲು ಹೊರಟಿದ್ದಾರೆ.


ಬಿಜೆಪಿ ಸರ್ಕಾರಕ್ಕೆ ಗೌರವ ತರುವ ವಿಷಯವಾ ಇದು.

ಭ್ರಷ್ಟಾಚಾರರಹಿತ ಆಡಳಿತ ನೀಡುತ್ತೇನೆ ಎನ್ನುತ್ತಿರುವ ಯಡಿಯೂರಪ್ಪನವರು ಯೋಚಿಸಲಿ.

■ ಬಿಳಿದಾಳೆ ಪಾರ್ವತೀಶ

ಇನ್ನೊಬ್ಬ ವಂಚಕ ಶ್ರೀಕಾಂತ, ಜೊತೆಗೊಬ್ಬ ಕೃಷ್ಣಯ್ಯ ಶೆಟ್ಟಿ

ಈ ಶ್ರೀಕಾಂತನೆಂಬುವನು ರಾಮದಾಸನ ಖಾಸಾ ತಮ್ಮ. ಮೈಸೂರಿನ ಸಕಲ ಅಕ್ರಮ ರಿಯಲ್ ಎಸ್ಟೇಟ್ ದಂಧೆಗಳ key figure ಇವನೆ. ರಾಮದಾಸ್ ತನ್ನ ಬಹುತೇಕ ದಂಧೆಗಳನ್ನು ಒಂದೋ ಶ್ರೀಕಾಂತನ ಹೆಸರಿನಲ್ಲಿ ನಡೆಸುತ್ತಾನೆ ಇಲ್ಲ ಅವನ ತಂಗಿ ಗಂಡನ ಹೆಸರಿನಲ್ಲಿ ವ್ಯವಹರಿಸುತ್ತಿದ್ದಾನೆ. ಇವನ ಕುಟುಂಬದ್ದೇ ಆದ ಎಸ್ ಅಂಡ್ ಎಸ್ ಕನ್‌ಸ್ಟ್ರಕ್ಷನ್ ಕಂಪನಿಯೂ ಒಂದಿದೆ. ಸದ್ಯಕ್ಕೆ ಮೈಸೂರಿನ ಅತೀ ದೊಡ್ಡ ಭೂಹಗರಣವಾಗಿರುವ ಹೂಟಗಳ್ಳಿಯ ಟೆಲಿಕಾಂ ಲೇಔಟ್ ದಂಧೆಯಲ್ಲಿ 300 ಕೋಟಿ ರೂಪಾಯಿವರೆಗೂ ಹಣ ಕೈಬದಲಾಯಿಸಿವೆ. ಅದರಲ್ಲಿ ರಾಮದಾಸ್ ಹಾಗೂ ಶ್ರೀಕಾಂತನೂ ಪಾಲುದಾರರಾಗಿದ್ದಾರೆ.



ಇದರ ಇನ್ನೊಬ್ಬ ಫಲಾನುಭವಿ ಯಾರು ಗೊತ್ತೆ?

ಕೃಷ್ಣಯ್ಯ ಶೆಟ್ಟಿ!

ಯಡ್ಡಿ ಸಂಪುಟದ ವಸತಿ ಸಚಿವ ಇವನು.

ತನ್ನ ಅಕ್ಕಪಕ್ಕದಲ್ಲೆಲ್ಲಾ ಇಂಥ ಹಗಲು ದರೋಡೆಖೋರರನ್ನೇ ತಂದು ಸ್ಥಾಪಿಸಿಕೊಂಡಿರುವ ಯಡ್ಡಿಯೂ ಮುಗ್ಧನಲ್ಲ ಎಂಬುದಂತೂ ಇದರಿಂದ ಸಾಬೀತಾಗಲ್ಲವೆ?

ಚೆಡ್ಡಿಗಳ ರಕ್ತದಾಹಕ್ಕೆ ಅನ್ನದಾತ ಬಲಿ!






ರೈತರ ನರಳಾಟ....


ಯಡ್ಡಿಯ ಮೊಸಳೆ ಕಣ್ಣೀರು


ಬಿಜೆಪಿ ಕಾರ್ಯಕರ್ತ!

ಗೋಲಿಬಾರ್‌ನಲ್ಲಿ ಸತ್ತ ಸಿದ್ದಲಿಂಗಪ್ಪ ಚೂರಿಯ ಇಡೀ ಫ್ಯಾಮಿಲಿಯೇ ಬಿಜೆಪಿಮಯ ಆಗಿತ್ತು. ಮನೆ ತುಂಬ ಅಡ್ವಾನಿ, ವಾಜಪೇಯಿ, ಯಡಿಯೂರಪ್ಪನವರ ಆಳೆತ್ತರದ ಭಾವಚಿತ್ರಗಳು ಗೋಡೆಗೊರಗಿ ನಿಂತಿವೆ. ಈತನ ಅಣ್ಣ ಷಣ್ಮುಖ ಬಿಜೆಪಿಯಿಂದ ಗೆದ್ದು ಕೌನ್ಸಿಲರ್ ಆಗಿದ್ದವನು. ಸಿದ್ದಲಿಂಗಪ್ಪ ಚೂರಿ ಕೂಡ ಬಿಜೆಪಿ ಮತ್ತು ಸಂಘಪರಿವಾರದ ಪ್ರಾಮಾಣಿಕ ಕಾರ್ಯಕರ್ತನಾಗಿದ್ದ. ಕಳೆದ ಮುನ್ಸಿಪಾಲಿಟಿ ಮತ್ತು ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮನೆ ಮನೆ ತಿರುಗಿ ಬಿಜೆಪಿಯ ಪರವಾಗಿ ಪ್ರಚಾರ ಮಾಡಿ ತಾನೊಬ್ಬ ಕಟ್ಟಾ ಬಿಜೆಪಿ ಬೆಂಬಲಿಗ ಎಂಬುದನ್ನು ಆತ ತೋರಿಸಿಕೊಟ್ಟಿದ್ದ. ಈತ ಸಚಿವ ಬಸವರಾಜ ಬೊಮ್ಮಾಯಿಯ ದೂರದ ಸಂಬಂಧಿಕ ಕೂಡ ಹೌದು.

ರೈತಪರ ಮಾತಾಡಿ ಅಧಿಕಾರಕ್ಕೇರಿದ ಬಿಜೆಪಿ, ರೈತನ ಹೆಸರಿನಲ್ಲೇ ಪ್ರಮಾಣವಚನ ಸ್ವೀಕರಿಸಿದ ಯಡ್ಡಿ ತಮ್ಮ ಅಧಿಕಾರ ಭದ್ರಗೊಂಡ ತಕ್ಷಣ ರೈತರ ವಿರುದ್ಧವೇ ತಿರುಗಿಬಿದ್ದದ್ದನ್ನು ಕಂಡು ಬಿಜೆಪಿ ಸರ್ಕಾರಕ್ಕೆ ಪಾಠ ಕಲಿಸಲು ಈ ಚೂರಿ ಕೂಡ ಪ್ರತಿಭಟನೆಗಿಳಿದಿದ್ದ.

ಆದರೆ ಬಿಜೆಪಿ ಅನ್ನದಾತರನ್ನು ಬೀದಿಯಲ್ಲಿ ನಾಯಿಗೆ ಹೊಡೆದ ಹಾಗೆ ಹೊಡೆದು ಗುಂಡಿಟ್ಟು ಕೊಲ್ಲುವಷ್ಟು ಕ್ರೂರಿಯಾಗುತ್ತದೆ ಎಂದು ಮೊದಲೇ ಗೊತ್ತಿದ್ದರೆ ಸಿದ್ದಲಿಂಗಪ್ಪ ಚೂರಿ ಕೂಡ ಬಿಜೆಪಿಗೆ ಓಟು ಹಾಕುತ್ತಿರಲಿಲ್ಲವೇನೋ.

ಅನ್ನದಾತರಿಗೆ ಗುಂಡು ಮತ್ತು ಚೆಡ್ಡಿಗಳ ಮೋಜು



ಚೆಡ್ಡಿಗಳ ಅಮಾನವೀಯತೆಗೆ ಮತ್ತು ನೀಚತನಕ್ಕೆ ಹಾವೇರಿ ಗೋಲಿಬಾರ್ ಒಂದು ಜೀವಂತ ನಿದರ್ಶನ. ಇತ್ತ ಹಾವೇರಿಯ ಸಿದ್ದಪ್ಪ ಕಂಬಳಿ ಸರ್ಕಲ್‌ನಲ್ಲಿ ರೈತರು ಪೊಲೀಸರ ಗುಂಡುಗಳಿಗೆ ಎದೆಯೊಡ್ಡಿ ರಕ್ತದ ಮಡುವಿನಲ್ಲಿ ಉರುಳುತ್ತಿದ್ದರೆ ಅತ್ತ ಸರ್ಕಾರಿ ಪ್ರವಾಸಿ ಮಂದಿರದಲ್ಲಿ ಸಿಎಂ ಉದಾಸಿ ಮತ್ತವನ ಚೇಲಾ ಶಾಸಕರು ಮೋಜಿನಲ್ಲಿ ಮೈಮರೆತಿದ್ದರೆಂಬ ಅಸಲೀಯತ್ತು ಬಹಳ ಜನಕ್ಕೆ ಗೊತ್ತಿಲ್ಲ.

ಸಿದ್ದಲಿಂಗಪ್ಪ ಚೂರಿ ರಕ್ತದ ಮಡುವಿನಲ್ಲಿ ಬಿದ್ದು ಜೀವನ್ಮರಣಗಳ ನಡುವೆ ಒದ್ದಾಡುತ್ತಿದ್ದ ಸಮಯದಲ್ಲೇ ಪ್ರವಾಸಿ ಮಂದಿರದಲ್ಲಿ ಚೆಡ್ಡಿ ಶಾಸಕರು ಉದಾಸಿಯ ಬಾಯಿಗೆ ಸಿಹಿ ಹಾಕಿ, ಆತನ ಕೊರಳಿಗೆ ಹಾರತುರಾಯಿ ಹಾಕುತ್ತಿದ್ದರು. ಉದಾಸಿಗೆ ಒಂದಿಷ್ಟಾದರೂ ರೈತ ಪರ ಸಂವೇದನೆಯಿದ್ದಿದ್ದರೆ ತನ್ನ ಶಾಸಕ ಪಡೆಯನ್ನು ಕಟ್ಟಿಕೊಂಡು ರೈತರು ಪ್ರತಿಭಟಿಸುತ್ತಿದ್ದ ಸ್ಥಳಕ್ಕೆ ಧಾವಿಸಿದ್ದರೆ ರೈತರ ಹೆಣ ಉರುಳುತ್ತಿರಲಿಲ್ಲ.

ಆದರೆ, ರಕ್ತರಾಜಕಾರಣದಲ್ಲೇ ಉದಾಸಿಗೆ ನಂಬಿಕೆ. ಸಂಗೂರು ಫ್ಯಾಕ್ಟರಿ ಕಾರ್ಮಿಕನನ್ನು ಬಲಿತೆಗೆದುಕೊಂಡದ್ದಕ್ಕೆ ಇವತ್ತು ಉದಾಸಿಗೆ ಮಂತ್ರಿಗಿರಿ ಸಿಕ್ಕಿದೆ. ಈಗ ರೈತನನ್ನು ಬಲಿತೆಗೆದುಕೊಂಡಿದ್ದಕ್ಕೆ ಇನ್ನೂ ಉನ್ನತ ಸ್ಥಾನ ಸಿಗಬಹುದೆಂಬ ಲೆಕ್ಕಾಚಾರ ಪ್ರಾಯಶಃ ಉದಾಸಿಗಿರಬಹುದು. ಆತನ ನಂಬಿಕೆ ಸರಿಯೋ ತಪ್ಪೋ ಎಂಬುದನ್ನು ಭವಿಷ್ಯ ನಿರ್ಧರಿಸಲಿದೆ.

ತಹಶೀಲ್ದಾರ್‌ಗೆ ಟಾರ್ಚರ್!

ಗೋಲಿಬಾರ್ ನಡೆಸುವಷ್ಟರ ಮಟ್ಟಿಗೆ ಪರಿಸ್ಥಿತಿಯೇನೂ ಕೈಮೀರಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೂ ಏಕೆ ಗೋಲಿಬಾರ್ ಮಾಡಿದರು ಎಂಬುದು ಇನ್ನೂ ಗೊತ್ತಾಗಬೇಕಿರುವ ವಿಚಾರ. ನಿಷ್ಪಕ್ಷಪಾತ ತನಿಖೆಯಿಂದ ಮಾತ್ರವೇ ಅದು ಹೊರಬೀಳಬೇಕಿದೆ.


ಅಸಲಿಗೆ ಗೋಲಿಬಾರ್ ಮಾಡುವುದಕ್ಕೆ ಉನ್ನತ ಅಧಿಕಾರಿಗಳಿಂದ ಆದೇಶವೇ ಬಂದಿರಲಿಲ್ಲ. ಯಾವನೋ ತಲೆಕೆಟ್ಟ ಪೊಲೀಸ್ ಅಧಿಕಾರಿಯ ಮಾತಿಗೆ ಜೋತುಬಿದ್ದ ಪೊಲೀಸರು ಗುಂಡುಹಾರಿಸಿ ರೈತನೊಬ್ಬನನ್ನು ಬಲಿತೆಗೆದುಕೊಂಡಿದ್ದಾರೆ. ಮಾಡಬಾರದ್ದನ್ನು ಮಾಡಿದ ಮೇಲೆ ಪೊಲೀಸರು ಅದರ ಹೊಣೆ ಹೊರಬೇಕು; ಅದರ ಪರಿಣಾಮ ಎದುರಿಸಬೇಕು. ಅದನ್ನು ಬಿಟ್ಟು ಕಂಡವರ ತಲೆಗೆ ಅದನ್ನು ಕಟ್ಟುವ ಪ್ರಯತ್ನ ಮಾಡಬಾರದು. ಆದರೆ, ಅಂತಹದ್ದೊಂದು ಗಟ್ಟಿತನ ಹಾವೇರಿ ಪೊಲೀಸರಿಗೆಲ್ಲಿದೆ. ಅದಕ್ಕಾಗಿಯೇ ಇಡೀ ಘಟನೆಯನ್ನು ತಹಶೀಲ್ದಾರ್ ಪ್ರಶಾಂತ್ ನಾಲ್ವರ್ ಅವರ ತಲೆಗೆ ಕಟ್ಟುವ ಪ್ರಯತ್ನವನ್ನು ಎಸ್ಪಿ ನಂಜುಂಡಸ್ವಾಮಿ ಮತ್ತು ಡಿಸಿ ವಸ್ತ್ರದ್ ಮಾಡುತ್ತಿದ್ದಾರೆ.

ಗೋಲಿಬಾರ್ ನಡೆದ ಮೇಲೆ ಅದಕ್ಕೆ ತಹಶೀಲ್ದಾರರೇ ಆದೇಶ ನೀಡಿರುವಂತೆ ಒಂದು ಆದೇಶ ಪತ್ರವನ್ನು ಸಿದ್ಧಪಡಿಸಿದ ಎಸ್ಪಿ ನಂಜುಂಡಸ್ವಾಮಿ ಅದಕ್ಕೆ ಸಹಿ ಮಾಡುವಂತೆ ತಹಶೀಲ್ದಾರ್ ಪ್ರಶಾಂತ್ ಮೇಲೆ ಒತ್ತಡ ತಂದಿದ್ದಾರೆ. ಅವರು ಒಪ್ಪದಿದ್ದಾಗ ಅವರಿಗೆ ಮಾನಸಿಕವಾಗಿ ಹಿಂಸೆ ಕೊಟ್ಟು ಸಹಿ ಮಾಡುವಂತೆ ಒತ್ತಾಯಿಸಿದ್ದಾರೆ. ಆದರೂ ದಿಟ್ಟವಾಗಿ ನಿಂತ ತಹಶೀಲ್ದಾರ್ ಅದಕ್ಕೆ ಈತನಕ ಸಹಿ ಮಾಡಿಲ್ಲ. ಆದರೆ ಎಸ್ಪಿ, ಡಿಸಿ ಮತ್ತು ಕೊನೆಗೆ ಖುದ್ದು ಯಡ್ಡಿ, ಉದಾಸಿಯಿಂದ ಧಮಕಿ ಬಂದ ಮೇಲೆ ತಹಶೀಲ್ದಾರ್ ತನ್ನ ಸಹಿ ಗುದ್ದಿದರೂ ಗುದ್ದಬಹುದು. ಹಾಗೇನಾದರೂ ಆತ ಮಾಡಿದರೆ ಇವರೆಲ್ಲರೂ ಮಾಡಿದ ಪಾಪಕ್ಕೆ ತಹಶೀಲ್ದಾರ್ ಬಲಿಪಶುವಾಗುವುದು ಗ್ಯಾರಂಟಿ. ಹಾಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಆತನ ಮೇಲಿದೆ. ತನ್ನ ನೌಕರಿ ಉಳಿಸಿಕೊಳ್ಳುವುದು ಮಾತ್ರವಲ್ಲ, ಮುಂದೆಯೂ ಪೊಲೀಸರು ಇಂತಹ ಪೈಶಾಚಿಕ ಕೃತ್ಯಗಳಿಗೆ ಇಳಿಯದಂತೆ ಎಚ್ಚರಿಕೆ ನೀಡುವುದಕ್ಕೂ ಇದರಿಂದ ಸಹಾಯವಾಗುತ್ತದೆ.

ಹಾವೇರಿ ಗೋಲಿಬಾರ್


ಅಸಲಿಗೆ ಚೆಡ್ಡಿ ಸಿಎಂ ಯಡ್ಡಿ ಹಸಿರು ಶಾಲು ಹೊದ್ದು ರೈತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದಾಗಲೇ ಈ ನಾಡಿನ ರೈತರಿಗೆ ಕಾದಿರುವ ಗಂಡಾಂತರದ ಬಗ್ಗೆ ಪ್ರಜ್ಞಾವಂತರಲ್ಲಿ ಕಳವಳ ಶುರುವಾಗಿತ್ತು. ಅದೀಗ ನಿಜವಾಗಿದೆ. ಹಾವೇರಿಯಲ್ಲಿ ಗೊಬ್ಬರ ಕೇಳಿದ ಅನ್ನದಾತರ ಮೇಲೆ ಗುಂಡಿನ ಮಳೆಗರೆದಿದೆ ಯಡ್ಡಿಯ ಸರಕಾರ. 'ನಾನು ರೈತನ ಮಗ' ಎಂದು ಸುಳ್ಳು ಹೇಳುತ್ತಲೇ ಅಧಿಕಾರದ ಗದ್ದುಗೆಗೇರಿದ ಯಡ್ಡಿಯ ಎದೆಯಾಳದಲ್ಲಿ ರೈತ ಸಮುದಾಯದ ವಿರುದ್ಧ ಅದೆಷ್ಟು ಚಿಂತನೆಗಳು ಅಡಗಿವೆ ಎಂಬುದನ್ನು ಗುಂಡೇಟು ತಿಂದು ಸತ್ತು ಮಲಗಿದ್ದ ಸಿದ್ದಲಿಂಗಪ್ಪ ಚೂರಿಯ ರಕ್ತಸಿಕ್ತ ದೇಹ ಸಾರಿ ಸಾರಿ ಹೇಳುತ್ತಿತ್ತು.

ಪ್ರತಿ ವರ್ಷ ಸ್ವಲ್ಪ ತಡವಾಗಿ ಬರುತ್ತಿದ್ದ ಮುಂಗಾರು ಈ ಬಾರಿ ಸಕಾಲದಲ್ಲಿ ಆಗಮಿಸಿದ್ದು ಕಳೆದ ಕೆಲವು ವರ್ಷಗಳಿಂದ ಕಳೆಗುಂದಿದ ರೈತನ ಮೊಗದಲ್ಲಿ ಮಂದಹಾಸವನ್ನು ಮೂಡಿಸಿತ್ತು. ಬಹಳ ಹುರುಪಿನಿಂದ ತಮ್ಮೆಲ್ಲಾ ಹೊಲಗದ್ದೆಗಳನ್ನು ಹಸನು ಮಾಡಿ ದುಡ್ಡಿನ ಧಣಿಗಳಿಂದ ಸಾಲಸೋಲ ಮಾಡಿ ಬೀಜ, ಗೊಬ್ಬರ ಖರೀದಿಸಲು ಹತ್ತಿರದ ಪಟ್ಟಣ, ನಗರಗಳಿಗೆ ಬಂದಿದ್ದರು. ಈಗಾಗಲೇ ಬೀಜ, ಗೊಬ್ಬರಗಳ ಅಭಾವ ತಲೆದೋರಿರುವ ವಿಚಾರ ದಾವಣಗೆರೆ ಘಟನೆಗಳಿಂದ ಅವರಿಗೆ ತಿಳಿದಿದ್ದರೂ ಬೇರೆ ದಾರಿಯೇ ಇರಲಿಲ್ಲ. ಏಕೆಂದರೆ, ಮುಂಗಾರು ಮಳೆಯ ಈ ಅವಧಿ ತಪ್ಪಿತೆಂದರೆ ವರ್ಷವಿಡೀ ಅವರ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಯೇ ಗತಿ. ಹೀಗಾಗಿ, ಬೀಜ-ಗೊಬ್ಬರಗಳನ್ನರಸಿ ಪಟ್ಟಣಗಳ ಬೀದಿ ಬೀದಿಗಳನ್ನು ಅಲೆದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇತ್ತ ಅನ್ನದಾತ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವ್ಯಾಕುಲತೆಯಿಂದ ಬಳಲುತ್ತಿದ್ದರೆ ಅತ್ತ ಯಡ್ಡಿ ತಮ್ಮ ಕ್ಯಾಬಿನೆಟ್ ಖಾತೆ ಹಂಚುವುದರಲ್ಲಿ, ಬಂಡುಕೋರರನ್ನು ಸಮಾಧಾನಿಸುವಲ್ಲಿ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಗುಡಿ-ಗುಂಡಾರಗಳನ್ನು ಸುತ್ತಿ ಕಂಡಕಂಡ ಸ್ವಾಮಿಗಳ ಕಾಲಿಗೆರಗುತ್ತಾ ಹೋಮ-ಹವನಗಳನ್ನು ಮಾಡಿಸುವಲ್ಲಿ ಬ್ಯೂಸಿಯಾಗಿದ್ದರು!



ಎಷ್ಟು ಅಂಗಡಿಗಳನ್ನು ಸುತ್ತಿದರೂ, ಎಷ್ಟು ನಗರಗಳ ಬೀದಿಗಳನ್ನು ತಡಕಾಡಿದರೂ ಪ್ರಯೋಜನವಾಗದಿದ್ದಾಗ ರೈತರು ಬಂಡಾಯವೆದ್ದರು. ಅದು ನ್ಯಾಯಯುತ ಬಂಡಾಯವಾಗಿತ್ತು. ಏಕೆಂದರೆ, ಈ ಸಂದರ್ಭದಲ್ಲಿ ಅವರಿಗಿದ್ದದ್ದು ಎರಡೇ ದಾರಿ: ಒಂದು, ಬೀಜ-ಗೊಬ್ಬರವಿಲ್ಲದೇ ಮನೆಗೆ ತೆರಳಿ ಇಡೀ ವರ್ಷ ಹಸಿವಿನಿಂದ ನರಳಬೇಕು ಅಥವಾ ಮಾಡಿದ ಸಾಲ ತೀರಿಸಲಾಗದೇ ಮತ್ತೆ ಆತ್ಮಹತ್ಯೆಗೆ ಶರಣಾಗಬೇಕು; ಎರಡು, ತಮ್ಮ ನ್ಯಾಯಯುತ ಹಕ್ಕಿಗಾಗಿ ಹೋರಾಡಿ ಜಾಣ ಕುರುಡನ್ನು ಪ್ರದರ್ಶಿಸುತ್ತಿರುವ ಯಡ್ಡಿ ಸರ್ಕಾರಕ್ಕೆ ತಮ್ಮ ಅಳಲನ್ನು ಕೇಳಿಸಬೇಕು. ಒಂದು ಸಮಾಧಾನಕರ ವಿಚಾರ ಎಂದರೆ ರೈತರು ನಿರಾಶಾದಾಯಕವಾದ ಮೊದಲನೇ ಹಾದಿ ತುಳಿಯದೇ ತಮ್ಮ ಹಕ್ಕನ್ನು ಪ್ರತಿಪಾದಿಸುವ ಎರಡನೇ ಹಾದಿಯನ್ನು ಹಿಡಿದಿದ್ದರು.

ದಾವಣಗೆರೆಯಿಂದ ಆರಂಭವಾದ ರೈತರ ಈ ಜೀವನ್ಮರಣದ ಹೋರಾಟ ನಂತರ ಧಾರವಾಡ, ಸವಣೂರು, ಬಂಕಾಪುರ, ಶಿಗ್ಗಾಂವಿ, ಬೆಳಗಾವಿ ಮತ್ತು ಬೈಲಹೊಂಗಲದ ತನಕ ವ್ಯಾಪಿಸಿತು. ಹಲವಾರು ಕಡೆ ರಸ್ತೆತಡೆ, ಸರ್ಕಾರಿ ಕಚೇರಿ ಮುತ್ತಿಗೆಯಂತಹ ಪ್ರಜಾತಾಂತ್ರಿಕ ಮತ್ತು ಸಂವಿಧಾನಬದ್ಧ ಹೋರಾಟಗಳನ್ನು ನಡೆಸಿದಾಗಲೂ ಯಡ್ಡಿ ಸರ್ಕಾರದ ಕಬ್ಬಿಣದ ಕಿವಿಗಳಿಗೆ ಅವರ ದನಿ ಕೇಳಿಸಲೇ ಇಲ್ಲ. ಕೊನೆಗೆ ರೈತ ಸಮುದಾಯ ಬೇರೆ ದಾರಿಯಿಲ್ಲದೇ ತನ್ನೆಲ್ಲಾ ಶಕ್ತಿಯನ್ನು ರಟ್ಟೆಗೆ ತಂದುಕೊಂಡು ಬೀದಿಗಿಳಿಯಿತು. ಅವರ ಆಕ್ರೋಶಕ್ಕೆ ಸರ್ಕಾರಿ ಬಸ್ಸುಗಳು, ಕಚೇರಿಗಳು ಧ್ವಂಸಗೊಂಡವು.



ಇಂತಹ ಹೊತ್ತಿನಲ್ಲಿ ರಾಜ್ಯದಲ್ಲಿ ಒಂದು ಸಂವೇದನಾಶೀಲ ಸರ್ಕಾರ ಇದ್ದಿದ್ದರೆ ದೇಶಕ್ಕೆ ಅನ್ನ ನೀಡುವ ಅನ್ನದಾತನ ಸಮಸ್ಯೆಗೆ ಮೊದಲ ಪ್ರಾಶಸ್ತ್ಯ ಕೊಟ್ಟು ಬಗೆಹರಿಸುತ್ತಿತ್ತು. ಆದರೆ, ಯಡ್ಡಿ ಸರ್ಕಾರ ಗೊಬ್ಬರ ಕೇಳಿದ ರೈತರಿಗೆ ಲಾಠಿ, ಬೂಟು, ಕೊನೆಗೆ ಗುಂಡಿನ ಮೂಲಕ ಪ್ರತಿಕ್ರಿಯಿಸಿತು. ಹಾವೇರಿಯಲ್ಲಿ ಸಿದ್ದಲಿಂಗಪ್ಪ ಚೂರಿ ಎಂಬ ಅನ್ನದಾತ ಹೆಣವಾಗಿ ಬಿದ್ದ.

ರೈತರ ಮೇಲೆ ಮೊದಲು ಚೆಡ್ಡಿಗಳು ಎರಗಿದರು!

ಹಾಗೆ ನೋಡಿದರೆ, ಹಾವೇರಿಯಲ್ಲಿ ರೈತರ ಮೇಲೆ ಗೋಲಿಬಾರ್ ಮಾಡುವ ಪರಿಸ್ಥಿತಿಯೇ ಇರಲಿಲ್ಲ. ಅವತ್ತು (ಜೂನ್ 10, 2008) ಮಧ್ಯಾಹ್ನ ಹನ್ನೆರಡು ಗಂಟೆಗೆ ಎಪಿಎಂಸಿಯಿಂದ ಹೊರಟ ರೈತರೆಲ್ಲಾ ಒಂದು ಗಂಟೆಯ ಹೊತ್ತಿಗೆ, 'ಸಿದ್ದಪ್ಪ ಕಂಬಳಿ' ಸರ್ಕಲ್‌ಗೆ ಬಂದು ಶಾಂತಿಯುತವಾಗಿಯೇ ರಸ್ತೆ ತಡೆ ನಡೆಸುತ್ತಿದ್ದರು. ಅದೇ ಸಮಯದಲ್ಲಿ ಜಿಲ್ಲಾ ಬಿಜೆಪಿ ಘಟಕವು ಬೆಲೆ ಏರಿಕೆ ವಿರೋಧಿಸಿ ಮನವಿ ಸಲ್ಲಿಸುವ ಗಿಮಿಕ್ ಕಾರ್ಯಕ್ರಮ ಮಾಡುತ್ತಿತ್ತು. ಬೆಲೆ ಏರಿಕೆಯೂ ಕೂಡ ಒಂದು ಗಂಭೀರ ಸಮಸ್ಯೆಯೇನೋ ಹೌದು. ಆದರೆ, ರೈತರಿಗೆ ಬೀಜಗೊಬ್ಬರ ಸಿಗದಿದ್ದುದರ ವಿರುದ್ಧ ಅದು ದನಿ ಎತ್ತದಿರುವುದು ದುರಂತ. ಕಾರಣ ಸ್ಪಷ್ಟವಾಗಿದೆ. ಬೆಲೆ ಏರಿಕೆ ಮಾಡಿದ್ದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ. ರೈತರಿಗೆ ಬೀಜ, ಗೊಬ್ಬರ ಸಿಗದಂತೆ ಮಾಡಿದ್ದು ರಾಜ್ಯದ ಬಿಜೆಪಿ ಸರ್ಕಾರ. ತಮ್ಮದೇ ಬಿಜೆಪಿ ಸರ್ಕಾರದ ವಿರುದ್ಧ ಹೋರಾಡುವ ಬದಲಿಗೆ ಅದು ಕೇಂದ್ರದ ವಿರುದ್ಧ ಹೋರಾಟದ ಗಿಮಿಕ್ ಹಮ್ಮಿಕೊಂಡಿತ್ತು. ಜಿಲ್ಲೆಯ ಮುದಿ ಮಂತ್ರಿ ಉದಾಸಿ ತನ್ನಿತರ ಬಾಲಂಗೋಚಿ ಶಾಸಕರನ್ನು ಕಟ್ಟಿಕೊಂಡು ಕೇಂದ್ರ ಸರ್ಕಾರದ ವಿರುದ್ಧ ಕೆಸರೆರಚುತ್ತಿದ್ದನೇ ಹೊರತು ರೈತರ ಸಮಸ್ಯೆಯ ಬಗ್ಗೆ ತುಟಿಪಿಟಕ್ ಎನ್ನಲಿಲ್ಲ. ಒಂದು ರೀತಿಯಲ್ಲಿ ಯಡ್ಡಿ ಸರ್ಕಾರದ ವಿರುದ್ಧ ರೈತರಿಗಿದ್ದ ಸಿಟ್ಟನ್ನು ಕೇಂದ್ರದ ಕಾಂಗ್ರೆಸ್ ಸರ್ಕಾರದ ಕಡೆ ಡೈವರ್ಟ್ ಮಾಡಲು ಆತ ಪ್ರಯತ್ನಿಸುತ್ತಿದ್ದ ಎಂದರೇನೇ ಸರಿಯಾದೀತು.

ನೋಡೋ ವರೆಗೂ ನೋಡಿ ಅಲ್ಲಿಯೇ ಇದ್ದ ಕೆಲವು ರೈತರು "ನಮ್ಗೆ ಬಿತ್ತಾಕ ಬೀಜ, ಗೊಬ್ರ ಇಲ್ಲ, ನಿಮ್ದೆ ಸರ್ಕಾರ ಐತಿ. ನಮ್ಗೆ ಬೀಜ-ಗೊಬ್ರ ಕೊಡ್ರಿ. ಇಲ್ಲಾಂದ್ರ ಇಲ್ಲೇ ಉಪವಾಸ ಮಾಡ್ತೀವಿ" ಎಂದು ಬಿಜೆಪಿಯ ಚೆಡ್ಡಿಗಳನ್ನು ತರಾಟೆಗೆ ತೆಗೆದುಕೊಂಡೇ ಬಿಟ್ರು. ಯಾವಾಗ ರೈತರು ಈ ರೀತಿ ತಮ್ಮ ಮೇಲೆಯೇ ತಿರುಗಿದರೋ ಸ್ಥಳದಲ್ಲಿದ್ದ ಚೆಡ್ಡಿ ಶಾಸಕ ನೆಹರೂ ಓಲೇಕಾರ, ಜಿ.ಶಿವಣ್ಣ ಮತ್ತು ಬ್ಯಾಡಗಿಯ ಸುರೇಶ್ ಗೌಡ ರೈತರ ಮೇಲೆಯೇ ಎರಗಿ ಅರಚಾಡಿದರು. ಈ ಚೆಡ್ಡಿ ಪ್ರವೀಣರೆಲ್ಲ ಕೇಂದ್ರ ಸರ್ಕಾರದ ವಿರುದ್ಧ ರೋಡ್ ಶೋ ಮಾಡಿ ಅಲ್ಲಿ ನೆರೆದಿದ್ದ ರೈತರ ವಿರುದ್ಧ ಬಾಯ್ಚಪಲ ತೀರಿಸಿಕೊಂಡು ಅಲ್ಲಿಂದ ಕಾಲ್ತೆಗೆದರು.

ಆಮೇಲೆ ಪೊಲೀಸರು ಎರಗಿದರು!

ಯಾವಾಗ ಚೆಡ್ಡಿ ಶಾಸಕರು, ಮಂತ್ರಿಗಳು ಅಲ್ಲಿಂದ ಕಾಲ್ತೆಗೆದರೋ ಆಗ ದಿಢೀರನೆ ರೈತರ ಮೇಲೆ ಪೊಲೀಸರು ಮುಗಿಬಿದ್ದರು. ಯಾವ ಪ್ರಚೋದನೆಯೂ ಇಲ್ಲದೇ ನ್ಯಾಯಯುತವಾಗಿ ಚೆಡ್ಡಿ ಶಾಸಕರನ್ನು ಜನ ಪ್ರಶ್ನಿಸಿದ್ದು ಪ್ರಾಯಶಃ ಪೊಲೀಸರಿಗೆ ಸರಿ ಕಾಣಲಿಲ್ಲ. ಅಥವಾ ರೈತರಿಗೆ ಈ ರೀತಿ ಟ್ರೀಟ್‌ಮೆಂಟ್ ನೀಡುವುದಕ್ಕೆ ಚೆಡ್ಡಿ ಶಾಸಕರೇ ಆರ್ಡರ್ ಮಾಡಿ ಹೋಗಿದ್ದರೂ ಹೋಗಿರಬಹುದು. ಪೊಲೀಸರು ಸುಖಾಸುಮ್ಮನೇ ಲಾಠಿ ಹಿಡಿದು ಅಮಾಯಕ ರೈತರ ಮೇಲೆರಗಿ ಅವರನ್ನು ಮನಬಂದಂತೆ ಥಳಿಸಲಾರಂಭಿಸಿದರು.

ಅಷ್ಟು ಹೊತ್ತಿಗಾಗಲೇ ತಾಳ್ಮೆ ಕಳೆದುಕೊಂಡು ಕಂಗೆಟ್ಟಿದ್ದ ರೈತ ಸಮುದಾಯ ರೊಚ್ಚಿಗೆದ್ದು ಪೊಲೀಸರ ಕಡೆಗೆ ಕಲ್ಲು, ಮಣ್ಣು ತೂರಲಾರಂಭಿಸಿತು. ಪೊಲೀಸರು ಇದನ್ನೇ ಕಾಯುತ್ತಿದ್ದರೋ ಏನೋ, ಅಲ್ಲಿಯೇ ನಿಂತಿದ್ದ ಪೊಲೀಸ್ ವ್ಯಾನಿನ ಕಿಟಕಿಗಳಿಂದ ಗುಂಡಿನ ಮಳೆಗರೆದು ಸುಮಾರು ಹದಿಮೂರು ರೈತರನ್ನು ಗಾಯಗೊಳಿಸಿಬಿಟ್ಟರು. ಅದರಲ್ಲಿ ಸ್ಥಳೀಯ ಸಹಕಾರಿ ಸೇವಾ ಸಂಘದ ಅಧ್ಯಕ್ಷ ಸಿದ್ದಲಿಂಗಪ್ಪ ಚೂರಿ ಕೂಡ ಒಬ್ಬ. ತಮ್ಮ ಮೇಲೆ ಗುಂಡುಗಳ ಸುರಿಮಳೆ ಬೀಳುತ್ತಿದ್ದಂತೆ ನಿಶ್ಶಸ್ತ್ರಧಾರಿ ಅಮಾಯಕ ರೈತರು ಚೆಲ್ಲಾಪಿಲ್ಲಿಯಾದರು. ಸಾವಿನ ದವಡೆಯಲ್ಲಿದ್ದ ಸಿದ್ದಲಿಂಗಪ್ಪ ಚೂರಿ ಬದುಕು ಸಾವಿನ ಮಧ್ಯೆ ನರಳಾಡುತ್ತಿದ್ದಾಗ ಆತನಿಗೆ ಒಂದು ಗ್ಲಾಸು ನೀರು ಕುಡಿಸಲೂ ಕೂಡ ಪೊಲೀಸರು ಮುಂದಾಗಲಿಲ್ಲ.

▶▶▶ 12ನೇ ಪುಟಕ್ಕೆ

ಅಪ್ಪನ ಸೊತ್ತು ಒಡಹುಟ್ಟಿದವರಿಗೆ ಕುತ್ತು

ಇದೊಂದು ಆಸ್ತಿ ವಂಚನೆಯೇ? ತನ್ನಿಬ್ಬರು ತಂಗಿಯರಿಗೆ ಅಪ್ಪನ ಆಸ್ತಿ ಕೊಡದೇ ವಂಚಿಸುವುದು ಕಿಶೋರ್‌ನ ಹುನ್ನಾರವೆ? ಆ ಕಾರಣಕ್ಕೇ ರತ್ನಂ ಕಾಂಪ್ಲೆಕ್ಸ್‌ನ ಮೇಲೆ ಸಾಲ ಎತ್ತುತ್ತಿರಬಹುದೆ?

ಏಕೆಂದರೆ ಇಷ್ಟೆಲ್ಲ ಸಾಲ ಎತ್ತಲು ಕಿಶೋರ್‌ಗೆ ಬೇರೆ ಕಾರಣಗಳೇ ಇಲ್ಲ. ಜ್ಯುವೆಲ್ ದಿ ಪ್ಯಾರಗಾನ್ ನಷ್ಟಕ್ಕೀಡಾಗಿಲ್ಲ. ತಂದ ಚಿನ್ನವೇನೂ ಕೊಳೆತು ಹೋಗಿಲ್ಲ. ಎಲ್ಲವೂ ಮಾರಾಟಗೊಂಡಿದೆ. ಮಾರಾಟವಾಗದೇ ಹೋದರೂ ಅದಕ್ಕಿದ್ದ ಬೆಲೆ ಇದ್ದೇ ಇರುತ್ತದೆ. ಇನ್ನು ಬೇರೆ ಯಾವುದೇ ವ್ಯವಹಾರಕ್ಕೂ ಕಿಶೋರ್ ದುಡ್ಡು ಹಾಕಿಲ್ಲ, ಹಾಕಿದ್ದರೆ ಅದರ ಲೆಕ್ಕ ಕೊಡಬೇಕಿತ್ತು. ಇದರರ್ಥ ವ್ಯವಸ್ಥಿತವಾಗಿ ರತ್ನಂ ಕಾಂಪ್ಲೆಕ್ಸ್ ಅನ್ನು ತನ್ನಿಬ್ಬರು ತಂಗಿಯರಿಗೆ ಪಾಲು ಕೊಡದಂತೆ ಇಡೀ ಸೊತ್ತಿನ ಮೊತ್ತವನ್ನು ಲಪಟಾಯಿಸುವುದು ಆತನ ಉದ್ದೇಶ. ಹೇಗೂ ರಾಜೇಶ್ ಎಕ್ಸ್‌ಪೋರ್ಟ್ಸ್ ಧಣಿ ರಾಜೇಶ್ ಮೆಹತಾಗೆ ಖಂಡಿತಾ ರತ್ನಂ ಕಾಂಪ್ಲೆಕ್ಸ್ ವಶಪಡಿಸಿಕೊಳ್ಳುವ ತಾಕತ್ತಿದೆ.

ಅಪ್ಪ ಕೆ.ಆರ್.ವಿ. ರತ್ನಂ ವಿಲ್ ಬರೆದಿಟ್ಟೇ ಸತ್ತಿದ್ದಾರೆ. ಆ ಪ್ರಕಾರ ಪ್ರತಿಷ್ಠಿತ ರತ್ನಂ ಕಾಂಪ್ಲೆಕ್ಸ್‌ನ ಬಾಡಿಗೆಯನ್ನು ಕಿಶೋರ್ ಮತ್ತು ಆತನ ತಂಗಿಯರಾದ ಶೋಭಾ ರತ್ನಂ ಮತ್ತು ರೂಪಾ ನರೇಂದ್ರ ಮೂವರೂ ಹಂಚಿಕೊಳ್ಳಬೇಕು. ಆಸ್ತಿಗೆ ಮೂವರೂ ಸಮಾನ ಭಾಗೀದಾರರು. ಆದರೆ ಕಿಶೋರ್ ದುರಾಶೆಯೇ ಬೇರೆ. ತನ್ನಿಬ್ಬರು ತಂಗಿಯರಿಂದ ಇಡೀ ಆಸ್ತಿ ಕಿತ್ತುಕೊಳ್ಳಲು ಬೇರಾವುದೇ ದಾರಿಯಿಲ್ಲವಾದ್ದರಿಂದ ಆಸ್ತಿಯ ಹೆಸರಲ್ಲಿ ಸಿಕ್ಕಾಪಟ್ಟೆ ಸಾಲ ಮಾಡಿಬಿಟ್ಟರೆ ಸಹಜವಾಗೇ ಅದು ಸಾಲಗಾರರ ಕೈ ಸೇರುತ್ತದೆ. ಮಾಡಿದ ಸಾಲವನ್ನೆಲ್ಲ ಬಚ್ಚಿಟ್ಟುಕೊಂಡು ಆಸ್ತಿ ಪರಭಾರೆಯಾದ ಕೂಡಲೇ ಬೇರೊಂದು ವ್ಯವಹಾರದಲ್ಲಿ ತೊಡಗಿಸಿಬಿಟ್ಟರೆ ಅಲ್ಲಿಗೆ ತಾನು ಬಚಾವಾದಂತೆಯೇ. ಆಸ್ತಿಯ ಮೊತ್ತ ತನ್ನ ಪಾಲಾದರೆ ಉದ್ದೇಶ ಈಡೇರಿದಂತೆ ತಾನೇ?

ದುಡ್ಡು, ಆಸ್ತಿ, ಶ್ರೀಮಂತಿಕೆ, ಸುಖ ಎಲ್ಲಾ ಇದೆ ನಿಜ. ಇಲ್ಲದ್ದು ಮನುಷ್ಯತ್ವ ಮಾತ್ರ. ಒಡಹುಟ್ಟಿದ ತಂಗಿಯರನ್ನೇ ಬೀದಿಗೆ ಹಾಕಲು ಹೊರಟವನಿಗೆ, ಹೆತ್ತ ತಾಯನ್ನೇ ಕಸಕ್ಕಿಂತ ಕೀಳಾಗಿ ಇಟ್ಟವನಿಗೆ ಮಾನ ಮರ್ಯಾದೆ ಯಾವ ಲೆಕ್ಕ?

ವಿನಿವಿಂಕ್ ಶಾಸ್ತ್ರಿಗಾದ ಗತಿ ಈತನಿಗೂ ಬರಬೇಕು. ಈ ನಿಟ್ಟಿನಲ್ಲಿ ಪೊಲೀಸರು ಮೈ ಕೊಡವಿ ನಿಲ್ಲಬೇಕು.


ಜ್ಯುವೆಲ್ಸ್‌ಡಿ ಪ್ಯಾರಗಾನ್ ಮತ್ತೊಂದು ವಿನಿವಿಂಕ್!



ಒಬ್ಬ ಧನಿಕ, ಅವನದೊಂದು ಆಭರಣ ಮಳಿಗೆ ಮತ್ತು ಆತನ ಐವತ್ತು ಕೋಟಿಯ ಆಸ್ತಿಯ ಸುತ್ತ ಕಚ್ಚಾಡುತ್ತಿರುವ ಸಾಲಗಾರರ ಕತೆ ಕೊನೆಗೆ ಎಲ್ಲಿಗೆ ಬಂದು ನಿಲ್ಲುತ್ತೋ?

ಬೆಂಗಳೂರಿನ ಅರ್ಧ ಡಜನ್ ಬ್ಯಾಂಕುಗಳಿಗೆ ಟೋಪಿ ಹಾಕಿ, ಆರು ನೂರಕ್ಕೂ ಹೆಚ್ಚುಮಂದಿ ಠೇವಣಿದಾರರ ಮುಂಡಾಮೋಚಿ, ದೇಶದ ಅತೀದೊಡ್ಡ ಆಭರಣ ರಫ್ತುದಾರರಾದ ರಾಜೇಶ್ ಎಕ್ಸ್‌ಪೋರ್ಟ್ಸ್ ಕಂಪೆನಿಗೆ ಹದಿನೇಳು ಕೋಟಿಯಷ್ಟು ಬೋಳಿಸಿ ಕಣ್ಣಾಮುಚ್ಚಾಲೆ ಆಡುತ್ತಿರುವ ಕೆ.ವಿ. ಕಿಶೋರ್ ಬೆಂಗಳೂರಿನ ಹೆಸರಾಂತ ಜ್ಯುವೆಲ್ಸ್ ದಿ ಪ್ಯಾರಗಾನ್‌ನ ಮಾಲೀಕ!

ಈ ಪಾಟಿ ಸಾಲ ಮಾಡುವ ಹರಕತ್ತಾಗಲಿ, ಕೈಯಿಟ್ಟ ವ್ಯವಹಾರದಲ್ಲಿ ಲುಕ್ಸಾನಾಗಲಿ ಆತನಿಗಿರಲಿಲ್ಲ. ಎಂ.ಜಿ. ರಸ್ತೆಯ ಕ್ರಿಕೆಟ್ ಸ್ಟೇಡಿಯಂ ಮತ್ತು ಗಾಂಧಿ ಪ್ರತಿಮೆ ಮುಂದೆ ನಿಂತರೆ ಎದುರಿಗೆ ಕಾಣುವ ಜ್ಯುವೆಲ್ಸ್ ದಿ ಪ್ಯಾರಗಾನ್ ಎಂಬ ಆಭರಣ ಮಳಿಗೆ ಮತ್ತು ಅದರ ಆರಂತಸ್ತಿನ ಭಾರೀ ಕಟ್ಟಡದ ಮಾಲೀಕ ಕಿಶೋರ್ ಬೆಂಗಳೂರಿನ ಪ್ರಖ್ಯಾತ ಜ್ಯುವೆಲ್ಲರ್ ಎಂಬುದರಲ್ಲಿ ಎರಡು ಮಾತಿಲ್ಲ. ಈತನ ತಂದೆ ಕೆ.ಆರ್.ವಿ. ರತ್ನಂ ಆ ಕಾಲಕ್ಕೇ ಬೆಂಗಳೂರಿನ ಚಿನ್ನಾಭರಣ ದಂಧೆಯ ಮಹಾರಥಿಯಾಗಿದ್ದ. ಅಂಥವನ ಏಕಮಾತ್ರ ಪುತ್ರ ಕಿಶೋರ್ ಜ್ಯುವೆಲ್ಸ್ ದಿ ಪ್ಯಾರಗಾನ್ ಕಂಪೆನಿಯನ್ನು ಕಟ್ಟಿದ್ದು, ಬೆಳೆಸಿದ್ದು, ದಿನಂಪ್ರತಿ ಒಂದಲ್ಲಾ ಒಂದು ಪತ್ರಿಕೆಯಲ್ಲಿ ಅಚ್ಚಾಗುವ ಅದರ ಜಾಹೀರಾತು, ಅದಕ್ಕಿರುವ ಹೆಸರು, ಎಲ್ಲವೂ ಆತನ ಸಾಲದ ಮೂಲಕ ಕೊಚ್ಚಿ ಹೋಗಿದೆ. ಸಾಲಗಾರರು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯ ಬಾಗಿಲು ಬಡಿದದ್ದು ತೀರ ಇತ್ತೀಚೆಗಾದರೂ ದೂರು ಕೊಡಲಾಗದೇ ವಸೂಲಿ ಮಾಡಲೂ ಆಗದೇ ಎದೆಬಡಿದು ಕೊಳ್ಳುತ್ತಿರುವವರ ದೊಡ್ಡ ಹಿಂಡೇ ರತ್ನಂ ಕಾಂಪ್ಲೆಕ್ಸ್‌ನ ಮುಂದೆ ಜಮೆಗೊಂಡಿದೆ.



ರಾಜೇಶ್ ಮೆಹತಾ

ವಿಕಟ ಹೇಗಿದೆಯೆಂದರೆ ಜ್ಯುವೆಲ್ಸ್ ಡಿ ಪ್ಯಾರಗಾನ್ ಮಳಿಗೆಯಿರುವ ರತ್ನಂ ಕಾಂಪ್ಲೆಕ್ಸ್‌ನ ಮೇಲೆ ಆತ ಮಾಡಿದ ಸಾಲವೇ ಐವತ್ತು ಕೋಟಿಯನ್ನು ಮೀರಿದೆ. ತನ್ನ ಜ್ಯುವೆಲ್ಸ್ ಡಿ ಪ್ಯಾರಗಾನ್ ಮಳಿಗೆಯ ಹೆಸರಲ್ಲಿ ಆತ ಎತ್ತಿದ ಠೇವಣಿಗಳು, ಗೆಳೆಯರಿಂದ ಮಾಡಿದ ಕೈಸಾಲ, ವಿವಿಧ ಬ್ಯಾಂಕುಗಳನ್ನು ಯಾಮಾರಿಸಿ ಮಾಡಿದ ಸಾಲ ಮತ್ತು ಅಪ್ಪನ ರತ್ನಂ ಕಾಂಪ್ಲೆಕ್ಸ್‌ನ ಮೂಲಪತ್ರವನ್ನು ಅಡವಿಟ್ಟು ಪಡೆದ ಸಾಲ ಎಲ್ಲವನ್ನೂ ಲೆಕ್ಕಹಾಕಿದರೆ ಕಿಶೋರ್ ಎಪ್ಪತ್ತು ಕೋಟಿಗೂ ದೊಡ್ಡ ಮೊತ್ತದ ಸಾಲಗಾರ!

ಈ ಪಾಟಿ ದುಡ್ಡನ್ನು ಏನು ಮಾಡಿದ? ಯಾರಿಗೆ ಕೊಟ್ಟ? ಎಂಬುದೂ ಚಿದಂಬರ ರಹಸ್ಯವೆ. ಕಿಶೋರ್ ಬೇರೆಲ್ಲ ಶ್ರೀಮಂತರ ಮಕ್ಕಳಂತೆ ಶೋಕಿಲಾಲನಲ್ಲ, ಡಿಸ್ಕೋ ಥೆಕ್, ಕ್ಲಬ್ಬು, ರೆಸಾರ್ಟುಗಳಿಗೆಂದು ಅಲೆಯುತ್ತಿರಲಿಲ್ಲ, ಬೇರೆ ಏನಾದರೂ ವ್ಯವಹಾರಕ್ಕೆ ಕೈಹಾಕಿ ಲುಕ್ಸಾನಾಯಿತಾ ಎಂದರೆ ಅದನ್ನೂ ಬಾಯಿಬಿಡುತ್ತಿಲ್ಲ. ಆತನ ತಂದೆ ಕೆ.ಆರ್.ವಿ. ರತ್ನಂ ತೀರಿಕೊಂಡಿದ್ದು 2000ರಲ್ಲಿ, ತಾಯಿ ಸರಸ್ವತಿ ರತ್ನಂ ಸದ್ಯ ಹಣ್ಣು ಮುದುಕಿ. ಶೋಭಾ ರತ್ನಂ ಮತ್ತು ರೂಪಾ ನರೇಂದ್ರ ಎಂಬಿಬ್ಬರು ಆತನ ತಂಗಿಯರನ್ನು ಅನುಕೂಲಸ್ಥ ಕುಟುಂಬಕ್ಕೆ ಕೊಟ್ಟು ಮದುವೆ ಮಾಡಾಗಿತ್ತು. ಎಂ.ಜಿ. ರಸ್ತೆಯ ಕ್ರಿಕೆಟ್ ಸ್ಟೇಡಿಯಂ ಮತ್ತು ಗಾಂಧಿ ಪ್ರತಿಮೆ ಎದುರಿನ 8650 ಚದುರ ಅಡಿಗಳ ರತ್ನಂ ಕಾಂಪ್ಲೆಕ್ಸ್ ಹೇಳಿಕೇಳಿ ಆ ಭಾಗದ ಪ್ರತಿಷ್ಠಿತ ಕಟ್ಟಡ. ಅದರ ಕೆಳಮಹಡಿಯಲ್ಲಿರುವ ಜ್ಯುವೆಲ್ಸ್ ಡಿ ಪ್ಯಾರಗಾನ್ ಮಳಿಗೆಯಲ್ಲದೇ ಮೇಲ್ಭಾಗದ ಐದೂ ಅಂತಸ್ತುಗಳ ಬಾಡಿಗೆಯಿಂದೇ ತಿಂಗಳಿಗೆ ಮೂರೂವರೆ ಲಕ್ಷದಷ್ಟು ಆದಾಯವಿತ್ತು.

ಹೀಗಿದ್ದೂ ಕಿಶೋರ್ ಸಾಲ ಮಾಡುತ್ತಲೇ ಬಂದ. 2000ದ ಸೆಪ್ಟೆಂಬರ್ ತಿಂಗಳಲ್ಲಿ ರತ್ನಂ ಕಾಂಪ್ಲೆಕ್ಸ್ ಅನ್ನೇ ರಾಜೇಶ್ ಎಕ್ಸ್‌ಪೋರ್ಟ್ಸ್ ಕಂಪೆನಿಗೆ ಒತ್ತೆಯಿಟ್ಟು ಅದಕ್ಕೆ ಪ್ರತಿಯಾಗಿ ಐವತ್ತು ಕೆ.ಜಿ.ಯಷ್ಟು ಚಿನ್ನವನ್ನು ಸಾಲ ಪಡೆದ. ಹೀಗೆ ರತ್ನಂ ಕಾಂಪ್ಲೆಕ್ಸ್‌ನ ಮೂಲಪತ್ರವನ್ನು ಅಡಮಾನ ಮಾಡಿ ಅರ್ಧ ಕ್ವಿಂಟಾಲಿನಷ್ಟು ಚಿನ್ನ ತಂದವನು ಅದಾದನಂತರ ಪಂಜಾಬ್ ನ್ಯಾಷನಲ್ ಬ್ಯಾಂಕಿನಿಂದ ಇದೇ ರತ್ನಂ ಕಾಂಪ್ಲೆಕ್ಸಿನ ಮೇಲೆ ಮತ್ತೆ 16 ಕೋಟಿ ರೂಪಾಯಿ ಸಾಲ ಎತ್ತಿದ. ಕೆನರಾ ಬ್ಯಾಂಕ್ ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಎಸ್‌ಬಿಸಿ ಬ್ಯಾಂಕ್, ಕೋಟಕ್ ಮಹೀಂದ್ರಾ ಫೈನಾನ್ಸ್ ಗಳಿಂದಲೂ ಕೋಟಿಕೋಟಿ ಸಾಲ ಮಾಡಿ ಕೊಂಡ.

ಜ್ಯುವೆಲ್ಸ್ ಡಿ ಪ್ಯಾರಗಾನ್‌ನ ಮಹಿವಾಟಿಗೂ ಈತ ಮಾಡಿದ ಸಾಲಕ್ಕೂ ತಾಳೆಯೇ ಹೊಂದುತ್ತಿರಲಿಲ್ಲ. ಹೀಗೆ ರಾಜೇಶ್ ಎಕ್ಸಪೋರ್ಟ್ಸ್‌ನಿಂದ 16 ಕೋಟಿಯ ಚಿನ್ನ ಮತ್ತು ವಿವಿಧ ಬ್ಯಾಂಕ್‌ಗಳಿಂದ 22ಕೋಟಿಯಷ್ಟು ಸಾಲ ಪಡೆದ ಕಿಶೋರ್ ಬರುಬರುತ್ತ ತನ್ನ ಪರಿಚಿತರಿಂದ ಸಿಕ್ಕಾಪಟ್ಟೆ ಕೈ ಸಾಲ ಪಡೆದ. ಅದಕ್ಕೊಂದು ಬೇಕಾಬಿಟ್ಟಿ ಚೆಕ್ಕುಗಳನ್ನು ಕೊಟ್ಟಿದ್ದ. ಜೊತೆಗೆ ತನ್ನ ಗ್ರಾಹಕರಿಗೆ ಆಕರ್ಷಕ ಬಡ್ಡಿಯ ಆಮಿಷವೊಡ್ಡಿ ಠೇವಣಿಗಳನ್ನು ಎತ್ತಲಾರಂಭಿಸಿದ. ಅದೂ ಯಾವ ಮಟ್ಟಕ್ಕೆಂದರೆ ಆತನ ಮಳಿಗೆಯಲ್ಲಿ ಕೆಲಸಕ್ಕಿದ್ದ ಯುವತಿಯೊಬ್ಬಳು ತನ್ನ ಮದುವೆಗೆಂದು ಖರೀದಿಸಿಟ್ಟುಕೊಂಡಿದ್ದ ಇಪ್ಪತ್ತು ಲಕ್ಷ ರೂಪಾಯಿ ಮೊತ್ತದ ಚಿನ್ನಾಭರಣಗಳನ್ನೇ ಠೇವಣಿಯಾಗಿ ಪಡೆದ ಕಿಶೋರ್ ಅದಕ್ಕೆ ಬಡ್ಡಿ ಸೇರಿಸಿ ಕೊಟ್ಟಿದ್ದ ಚೆಕ್ಕುಗಳೆಲ್ಲ ಗಿರಕಿ ಹೊಡೆದುಬಿದ್ದಿದ್ದವು!

ಭೀಮಾ ತೀರದಲ್ಲಿ ಮತ್ತೆರಡು ಹೆಣ!



ಬಾಗಪ್ಪ ಹರಿಜನ

ಭೀಮಾ ತೀರದಲ್ಲಿ ಮತ್ತೆರಡು ಹೆಣಗಳು ಉರುಳುವ ಮೂಲಕ ಅಲ್ಲಿ ಹರಿಯುತ್ತಿರುವ ರಕ್ತ ಮತ್ತಷ್ಟು ಹೆಚ್ಚಾಗಿದೆ. ಯಾವಾಗ ಬಾಗಪ್ಪ ಹರಿಜನ, ಮುತ್ತು ಮಾಸ್ತರ್‌ನನ್ನು ತುಂಡು ತುಂಡಾಗಿ ಕತ್ತರಿಸಿ ಕೊಂದನೋ ಆಗಲೇ ಇಂತಹದ್ದೊಂದು ರಕ್ತಸಿಕ್ತ ಅಧ್ಯಾಯಕ್ಕೆ ಮುನ್ನುಡಿ ಬರೆದಾಗಿತ್ತು. ಮೊನ್ನೆ ಜೂನ್ 11ರಂದು ಬಾಗಪ್ಪ ಹರಿಜನನ ಇಬ್ಬರು ಅಳಿಯಂದಿರನ್ನು ಕೊಂದದ್ದು ಈ ಸರಣಿ ಹತ್ಯೆಗಳ ಮುಂದುವರಿದ ಭಾಗವಷ್ಟೆ.

ಕೊಲೆಯಾದವರಲ್ಲಿ ಒಬ್ಬ ಬಾಗಪ್ಪ ಹರಿಜನನ ಹೆಂಡತಿಯ ತಮ್ಮ ಪರಶ್ಯಾ ಹಾಗು ಇನ್ನೊಬ್ಬ ಬಾಗಪ್ಪನ ಮಗಳ ಗಂಡ ರಾಜಶೇಖರ್ ಸುಖದೇವ್ ಮೇಲಿನಕೇರಿ. ಮುತ್ತು ಮಾಸ್ತರ್‌ನನ್ನು ಕೊಂದಿದ್ದಕ್ಕೆ ಪ್ರತೀಕಾರವಾಗಿಯೇ ಬಾಗಪ್ಪನ ಫ್ಯಾಮಿಲಿಯ ಮೇಲೆ ಅಟ್ಯಾಕ್ ಮಾಡಲಾಗಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿರುವ ವಿಚಾರ.

ಮೊನ್ನೆ ನಡೆದ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಪುತ್ರಪ್ಪ ಧಣಿಯ ಮೇಲೆ ಗುಂಡಿನ ಮಳೆಗರೆಯಲಾಗಿತ್ತು. ಈ ಹತ್ಯಾಯತ್ನವನ್ನು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಖಜುರಿ ಮತ್ತು ಕಂಬಾರಿ ಗ್ರಾಮದ ಸುಪಾರಿ ಹಂತಕರು ಮಾಡಿರಬಹುದೆಂಬ ಅನುಮಾನವಿತ್ತು, ಪೊಲೀಸರು ಆಗಲೇ ಒಂದಿಷ್ಟು ಎಚ್ಚರವಾಗಿದ್ದಿದ್ದರೆ ಇವತ್ತು ಇಂತಹ ಒಂದು ಘಟನೆಯನ್ನು ತಪ್ಪಿಸಬಹುದಿತ್ತು, ಆದರೆ ಪೊಲೀಸರಿಗೆ ಅಂತಹದ್ದೊಂದು ಹರಕತ್ತು ಬೇಕಿರಲಿಲ್ಲ.

ಈ ಖಜುರಿ ಮತ್ತು ಕಂಬಾರಿ ಗ್ರಾಮಗಳ ಕಥೆಯೇ ಒಂದು ರೀತಿಯಲ್ಲಿ ವಿಚಿತ್ರವಾಗಿದೆ. ಇಂದಿಗೂ ಆ ಗ್ರಾಮಗಳಿಗೆ ಕಾಲಿಡುವುದಕ್ಕೆ ಪೊಲೀಸರು ಹಿಂದು ಮುಂದು ನೋಡುತ್ತಾರೆ. ಅಲ್ಲಿನ ಹೆಚ್ಚೂಕಡಿಮೆ ಪ್ರತೀ ಕುಟುಂಬದ ಉದ್ಯೋಗವೇ ಮನುಷ್ಯರನ್ನು ಕತ್ತರಿಸುವುದು, ಶೂಟ್ ಮಾಡುವುದು. ಅದಕ್ಕೆ ಅವರು ಬೇಡುವ ಸುಪಾರಿ ಎಷ್ಟು ಗೊತ್ತೆ? ಕೇವಲ ಐದರಿಂದ ಹತ್ತು ಸಾವಿರ ರೂಪಾಯಿ ಮಾತ್ರ. ಕೊಲೆಯಾಗಬೇಕಾದವನ ಒಂದು ಫೋಟೋ ಮತ್ತು ಆತನ ಬಗ್ಗೆ ಒಂದಿಷ್ಟು ಮಾಹಿತಿ ಕೊಟ್ಟು ಕೈಗೆ ಐದ್ಹತ್ತು ಸಾವಿರ ಇಟ್ಟರೆ ಸಾಕು ಕೆಲಸ ಮುಗಿಸಿಯೇ ತಮ್ಮ ಮನೆಕಡೆ ಹೋಗುವ ಜನ ಅವರು.


ಬಿಜಾಪುರ ಭೂಗತ ಜಗತ್ತಿನಲ್ಲಿ ಈಗ ಚಂದಪ್ಪ ಹರಿಜನ ಎಂಬ ಡಾನ್ ಇಲ್ಲ. ಆದ್ದರಿಂದ ಖಜುರಿ ಮತ್ತು ಕಂಬಾರಿ ಗ್ರಾಮಗಳ ಗುಂಪು ಈಗ ಬಿಜಾಪುರದತ್ತ ಲಗ್ಗೆ ಇಟ್ಟಿದೆ. ಇದನ್ನು ನಿಗ್ರಹಿಸಬೇಕಾದ ಪೊಲೀಸರು ಕೈಕಟ್ಟಿ ಕುಳಿತಿದ್ದಾರೆ. ಅದರಲ್ಲೂ ವಿಠಲ್ ಜಗಲಿ ಎಂಬ ಪೊಲೀಸ್ ಅಧಿಕಾರಿ ಸಿಂಧಗಿಗೆ ಅಮರಿಕೊಂಡ ಮೇಲಂತೂ ಪೊಲೀಸರಿಗೆ ಇಂತಹ ಕೃತ್ಯಗಳು ಸರ್ವೇ ಸಾಮಾನ್ಯ ಬಿಡಿ. ಏಕೆಂದರೆ ಜಗಲಿ ಡ್ಯೂಟಿ ಮಾಡಿದ ಪ್ರತೀ ಸ್ಟೇಶನ್‌ನ ವ್ಯಾಪ್ತಿಯಲ್ಲಿ ನಡೆದ ಅಪರಾಧಗಳ ಸಂಖ್ಯೆಯನ್ನು ನೋಡಿದರೆ ಈತ ಅಪರಾಧಗಳನ್ನು ತಡೆಯುವುದಕ್ಕೆ ಇದ್ದಾನೋ ಅಥವಾ ಅವುಗಳನ್ನು ನಡೆಸುವುದಕ್ಕೆ ಇದ್ದಾನೋ ಎಂಬ ಅನುಮಾನ ಬಾರದಿರದು. ಇವನ ಸಾರಥ್ಯದಲ್ಲಿ ಬಾದಾಮಿ ಸ್ಟೇಶನ್‌ನಲ್ಲಿ 23 ಕೊಲೆಗಳು, 16 ಕಳ್ಳತನಗಳು, ನಾಲ್ಕಾರು ರಾಬರಿಗಳು; ಹುನಗುಂದ ಸ್ಟೇಶನ್‌ನಲ್ಲಿ 28 ದರೋಡೆ, ಹತ್ತಾರು ಕೊಲೆಗಳು – ಹೀಗೆ ಸಾಗುತ್ತದೆ ಜಗಲಿಯ ಸಾಧನೆ. ಈತ ಸಿಂಧಗಿಗೆ ವಕ್ಕರಿಸಿದ ಮೇಲೆ ಮೊದಲೇ ಭೂಗತ ಜಗತ್ತಿನ ಗ್ಯಾಂಗ್‌ವಾರ್‌ಗಳಿಗೆ ಹೆಸರುವಾಸಿಯಾದ ಭೀಮಾ ತೀರದಲ್ಲಿ ಮತ್ತಷ್ಟು ರಕ್ತ ಹರಿಯುವುದಕ್ಕೆ ಅವಕಾಶ ಸಿಕ್ಕಂತಾಗಿದೆ.

ಚಂದಪ್ಪ ಹರಿಜನನಿಂದ ಆರಂಭ!

ಭೀಮಾ ತೀರದಲ್ಲಿ ಇಂದು ಹರಿಯುತ್ತಿರುವ ರಕ್ತಕ್ಕೆ ನಾಂದಿ ಹಾಡಿದವನೇ ಚಂದಪ್ಪ ಹರಿಜನ. ಉದರ ನಿಮಿತ್ತ ಸೊನ್ನ ಗ್ರಾಮದಿಂದ ಅಫಜಲ್‌ಪುರಕ್ಕೆ ಕೆಲಸ ಹುಡಿಕಿಕೊಂಡು ಬಂದಿದ್ದ ಈತ ಕೆಲವೇ ದಿನಗಳಲ್ಲಿ ಪಾತಕಿ ಪ್ರಪಂಚವನ್ನು ಪ್ರವೇಶಿಸಿ ಇಡೀ ಬಿಜಾಪುರ ಜಿಲ್ಲೆಯ ಭೂಗತ ಜಗತ್ತಿನ ಡಾನ್ ಆಗಿ ಬೆಳೆದ.

ಅಸಲಿಗೆ ಚಂದಪ್ಪ ಹರಿಜನನಿಗೆ ಭೂಗತ ಜಗತ್ತಿನ ಡಾನ್ ಆಗಬೇಕೆಂಬ ಆಕಾಂಕ್ಷೆಯಿದ್ದವನಲ್ಲ. ಅಂದು





ಶಾಂತಪ್ಪ ಚಡಚಣಿ ಮತ್ತು ಭೈರಗೊಂಡ ಎಂಬ ಇಬ್ಬರು ಶ್ರೀಮಂತ ಒಕ್ಕಲುತನದ ಲಿಂಗಾಯತ ಕುಟುಂಬಗಳಲ್ಲಿ ದೊಡ್ಡ ಮಟ್ಟದ ವೈರತ್ವ ಹುಟ್ಟಿಕೊಂಡಿತ್ತು. ಈ ಇಬ್ಬರಿಗೂ ಒಂದು ಹೆಣ್ಣಿನ ವಿಚಾರದಲ್ಲಿ ಸಣ್ಣಮಟ್ಟ ಕಲಹವೇರ್ಪಟ್ಟು ಕೊನೆಗೆ ಅದು ದೊಡ್ಡ ಪ್ರಮಾಣದ ವೈರತ್ವವಾಗಿ ಮಾರ್ಪಟ್ಟಿತ್ತು. ಇಬ್ಬರೂ ಪೈಲ್ವಾನರೇ. ಜೊತೆಗೆ ಇಬ್ಬರಿಗೂ ದುಡ್ಡಿನ ಬಲವಿತ್ತು. ಇಂತಹ ಸಂದರ್ಭದಲ್ಲಿ ಬಾಡಿಗೆ ಕಿಲ್ಲರ್ ಆಗಿ ಬಳಕೆ ಯಾದವನೇ ಚಂದಪ್ಪ ಹರಿಜನ್.

ಇಲ್ಲಿಂದ ಪಾತಕ ಲೋಕಕ್ಕೆ ಎಂಟ್ರಿ ಪಡೆದ ಹರಿಜನ ನಂತರ ತನ್ನದೇ ಕ್ರಿಮಿನಲ್ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು ಬರೋಬ್ಬರಿ ನಲವತ್ತೆರಡು ಹೆಣಗಳನ್ನು ಉರುಳಿಸಿ ಸುಮಾರು ಆರು ಕೋಟಿಗೂ ಹೆಚ್ಚು ದುಡ್ಡು ಮಾಡಿದ. ಅದೆಲ್ಲ ಮಹಾರಾಷ್ಟ್ರದ ರಖವಾಲಿಗಳ ಮತ್ತು ಅವನ ಸಂಬಂಧಿಕರ ಹೆಸರಿನಲ್ಲಿದೆ. ಯಾವಾಗ ಚಂದಪ್ಪ ಹರಿಜನ ಅಂತಿಮವಾಗಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದನೋ ಅವನ ಆಸ್ತಿಯ ಮೇಲೆ ಕಣ್ಣಿಟ್ಟವನೇ ಇವನ ಇನ್ನೊಬ್ಬ ಸಂಬಂಧಿ ಮುತ್ತು ಮಾಸ್ತರ್. ಆಸ್ತಿಯಲ್ಲಿ ಒಂದಿಷ್ಟು ಪಾಲನ್ನು ಚಂದಪ್ಪ ಹರಿಜನನ ಹೆಂಡತಿಗೆ ಕೊಟ್ಟು ಉಳಿದದ್ದನ್ನು ಪೂರ್ತಿಯಾಗಿ ಈತ ನುಂಗಿಹಾಕಿದ. ಈ ಕೆಲಸದಲ್ಲಿ ಚಂದಪ್ಪ ಹರಿಜನನ ಖಾಸಾ ತಮ್ಮ ಬಸವರಾಜ ಹರಿಜನ ಕೂಡ ಮುತ್ತು ಮಾಸ್ತರ್‌ನ ಬೆಂಬಲಕ್ಕಿದ್ದ.

ಮುತ್ತು ಮಾಸ್ತರ್ ಫಿನಿಷ್!

ಈಗಿನ ಜೋಡಿ ಕೊಲೆಗೆ ಒಂದು ಪುಟ್ಟ ಇತಿಹಾಸವಿದೆ. ಮಡ್ನೊಳ್ಳಿ ಗ್ರಾಮದ ಪತ್ರುಮ್ ಸಾಬ್ ಎಂಬುವವನು ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ಮುತ್ತು ಮಾಸ್ತರ್‌ನ ತಂದೆಯನ್ನು ಹತ್ಯೆ ಮಾಡಿದ್ದನಂತೆ. ಅದಕ್ಕಾಗಿಯೇ ಪತ್ರುಮ್ ಸಾಬ್ ಜೀವಾವಧಿ ಶಿಕ್ಷೆ ಅನುಭವಿಸಿ ಬಂದಿದ್ದ. ತಂದೆಯ ಕೊಲೆಯ ಸೇಡನ್ನು ತೀರಿಸಿಕೊಳ್ಳುವುದಕ್ಕೆ ಮುಂದಾದ ಮುತ್ತು ಮಾಸ್ತರ್ ಚಂದಪ್ಪ ಹರಿಜನನ ತಮ್ಮ ಬಸವರಾಜ್ ಹರಿಜನನೊಂದಿಗೆ ಸೇರಿಕೊಂಡು ಪತ್ರುಮ್ ಸಾಬ್‌ನನ್ನು ಮುಗಿಸಿಯೇ ಬಿಟ್ಟ.

ಆದರೆ ಈ ಕೊಲೆ ಕೇಸಿನಲ್ಲಿ ತಾನು ಬಚಾವಾಗಿದ್ದು ಮಾತ್ರವಲ್ಲದೇ ಈ ಕೊಲೆಗೆ ಏನೇನೂ ಸಂಬಂಧವಿರದಿದ್ದ ಬಾಗಪ್ಪ ಹರಿಜನನ ಹೆಂಡತಿಯ ತಮ್ಮ ಪರಿಶ್ಯಾನನ್ನು ಫಿಟ್ ಮಾಡಿಸಿಬಿಟ್ಟ. ಇದಕ್ಕಾಗಿ ಪೊಲೀಸರಿಗೆ ಯಥೇಚ್ಛವಾಗಿ ಮೇಯಿಸಿದ್ದ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮುತ್ತು ಮಾಸ್ತರ್‌ನ ಕುತಂತ್ರಕ್ಕೆ


ಗೆ ಜ್ಯುವೆಲ್ಸ್ ದಿ ಪ್ಯಾರಗಾನ್‌ನ
ವೊಂದನ್ನೇ ಮಾರಾಟಕ್ಕಿಟ್ಟು ಸುಮಾರು
ನೂರಕ್ಕೂ ಹೆಚ್ಚು ಗ್ರಾಹಕರಿಂದ ಕಿಶೋರ್
ಳು ಕೋಟಿ ರೂಪಾಯಿ ಮೊತ್ತದ
ತ್ತಿದ್ದ.



ರವಿಶಂಕರ್

ರುಬರುತ್ತ ಠೇವಣಿದಾರರಿಗೆ ಕೊಟ್ಟ
ಗಳೆಲ್ಲ ಬೌನ್ಸ್ ಹೊಡೆಯತೊಡಗಿದವು.
ಸರಿಯಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್
ರಿಗಳು ರತ್ನಂ ಕಾಂಪ್ಲೆಕ್ಸ್‌ನ ವಶಕ್ಕೊಂದು ಬಂದರೆ
ದ ಮೂಲ ಪತ್ರಗಳಾಗಲೇ ರಾಜೇಶ್ ಎಕ್ಸ್‌ಪೋರ್ಟ್ಸ್
ಗಿ ಹೋಗಿತ್ತು, ಉಳಿದಂತೆ ಕೊಟಕ್ ಮಹೀಂದ್ರಾ,
ಎಸ್‌ಬಿಐ ಇತ್ಯಾದಿ ಬ್ಯಾಂಕಿನ ಅಧಿಕಾರಿಗಳು ಬಂದು
ಗಿ ಪೀಡಿಸುತ್ತಿದ್ದರೆ, ಕಿಶೋರ್ ವಸೂಲಿಗೆ ಬಂದ
ರಿಗಳ ವಿರುದ್ಧವೇ ಕಬ್ಬನ್‌ಪಾರ್ಕ್ ಪೊಲೀಸರಿಗೆ
ಕೊಡುತ್ತಿದ್ದ. ಪೊಲೀಸರಾದರೂ ಏನು ತಾನೇ
ಯಾರು? ಒಬ್ಬರಾ ಇಬ್ಬರಾ?

ಮಧ್ಯೆ ಕಿಶೋರ್
ಅನಾಹುತಕ್ಕೆ
ಟ್ಟ ನೆಂದರೆ
ಗಲೇ ರತ್ನಂ
ಕ್ಸನ್ನು ಒತ್ತೆಯಿಟ್ಟು
ರ್
ಪೋರ್ಟ್ಸ್‌ನಿಂದ 16
ಮೊತ್ತದ ಚಿನ್ನ ಸಾಲ
ದ್ದನಲ್ಲ; ಅದರ ಮೇಲಿ
ಹನ್ನೊಂದುಕಾಲು
ಮಷ್ಟು ಚಿನ್ನ ಕೊಡಿ
ಂದು ವಾರದಲ್ಲಿ ಇಡೀ
ಕ್ಸನ್ನೇ ನಿಮ್ಮ ಹೆಸರಿಗೆ
ರ್
ಸಿಕೊಡುತ್ತೇನೆ
ದ್ದಾನೆ. ಹೇಗೂ
ಪತ್ರ ಇದೆಯಲ್ಲ;
ಗೆ ತಾನೇ ಹೋಗುತ್ತಾನೆ? ಎಂದು ರಾಜೇಶ್
ಪೋರ್ಟ್ಸ್ ಕಂಪೆನಿಯವರು 2008ರ ಏಪ್ರಿಲ್
ಂದು ಮತ್ತೆ ಹನ್ನೆರಡು ಕಾಲು ಕೆ.ಜಿ. ಚಿನ್ನ
ದ್ದಾರೆ.



ಂದು ಕೈಗೆ ಬಂದಿದ್ದೆಷ್ಟೋ ಅಷ್ಟೇ, ಇದಾಗಿ
ವರೆ ತಿಂಗಳಾದರೂ ಕಿಶೋರ್ ಪತ್ತೆಯಿಲ್ಲ.
ದಂತೆ ಅಷ್ಟೇ ಮೊತ್ತದ ಚಿನ್ನ ಕೊಡಬೇಕು. ಅಥವಾ
ಮೊತ್ತದ ಹಣ ತೆರಬೇಕು. ಇದ್ಯಾವುದನ್ನೂ ಮಾಡದೇ

ಆಸ್ತಿಯನ್ನೂ ರಿಜಿಸ್ಟರ್ ಮಾಡಿಕೊಡದೇ ತಲೆ ಮರೆಸಿಕೊಂಡ ಕಿಶೋರ್ ವಿರುದ್ಧ ರಾಜೇಶ್ ಎಕ್ಸ್‌ಪೋರ್ಟ್ಸ್‌ನ ಮ್ಯಾನೇಜರ್ ಪ್ರಕಾಶ್ ಕಬ್ಬನ್ ಪಾರ್ಕ್ ಪೊಲೀಸರಿಗೆ ದೂರು ಕೊಟ್ಟಿದ್ದಾರೆ.

ತನ್ನ ವಿರುದ್ಧ ದೂರು ದಾಖಲಾಗಿದ್ದೇ ಕಂಗಾಲಾದ ಕಿಶೋರ್ ಒಂದೇ ವಾರದಲ್ಲಿ ಒಂದಷ್ಟು ಚಿನ್ನ ಮತ್ತು ದುಡ್ಡು ಹೊಂದಿಸಿ ಕೊಟ್ಟು ರಾಜೇಶ್ ಎಕ್ಸ್‌ಪೋರ್ಟ್ಸ್‌ನವರೊಂದಿಗೆ ರಾಜಿ ಮಾಡಿಕೊಂಡು ಉಳಿಕೆ ಐವತ್ತು ಕೆ.ಜಿ. ಚಿನ್ನದ ಬದಲಿಗೆ ರತ್ನಂ ಕಾಂಪ್ಲೆಕ್ಸನ್ನು ರಿಜಿಸ್ಟರ್ ಮಾಡಿಸಿಕೊಡುತ್ತೇನೆಂದು ಜಾರಿಕೊಂಡವನು ಈತನಕ ನಾಪತ್ತೆ!

ಹಾಗೊಮ್ಮೆ ರಾಜೇಶ್ ಎಕ್ಸ್‌ಪೋರ್ಟ್ಸ್ ಕಂಪೆನಿಯ ಧಣಿ ರಾಜೇಶ್ ಮೆಹತಾನಿಗೆ ತನ್ನ ಆಸ್ತಿ ಬರೆಕೊಟ್ಟರೆ ಪಂಜಾಬ್ ನ್ಯಾಷನಲ್ ಬ್ಯಾಂಕ್ ಸುಮ್ಮನಿರುತ್ತಾ? ಪಂಜಾಬ್ ಬ್ಯಾಂಕ್‌ಗೆ ದುಡ್ಡು ಕೊಡಹೊರಟರೆ ಉಳಿಕೆ ಬ್ಯಾಂಕುಗಳು ಕೈಕಟ್ಟಿ ಕೂರುವುದುಂಟಾ? ಈ ಎಲ್ಲಾ ಬ್ಯಾಂಕುಗಳಿಗೆ ಸಾಲ ಚುಕ್ತಾ ಮಾಡುವ ಹೊತ್ತಿಗೆ ಆರು ನೂರಕ್ಕೂ ಹೆಚ್ಚಿರುವ ಠೇವಣಿದಾರರು ಸುಮ್ಮನಿರುತ್ತಾರಾ? ಇನ್ನು ಕೈಸಾಲ ಕೊಟ್ಟು ಸ್ನೇಹಿತರ ಗತಿಯೇನು?

ಪ್ರತಿಷ್ಠಿತ ಜ್ಯುವೆಲ್ಸ್ ದಿ ಪ್ಯಾರಗಾನ್ ಸದ್ಯ ದಿವಾಳಿಯೆದ್ದಿದೆ. ತನ್ನ ಅಪ್ಪನ ಇಡೀ ಆಸ್ತಿಯ ಮೇಲೆ ಕಿಶೋರ್ ಮಾಡಿದ ಸಾಲ ಈ ಕಾಲಕ್ಕೆ ತೀರುವ ಲಕ್ಷಣಗಳಿಲ್ಲ. ಹಾಗಾದರೆ ಎತ್ತಿದ ಇಷ್ಟೆಲ್ಲ ಸಾಲ ಏನಾಯಿತು? ಯಾರಿಗೆ ಕೊಟ್ಟ? ಯಾಕೆ ಅಗತ್ಯವಿಲ್ಲದೇ ಈಪಾಟಿ ಸಾಲ ಮಾಡಿಕೊಂಡ? ಅದನ್ನೆಲ್ಲ ಎಲ್ಲಿಟ್ಟಿದ್ದಾನೆ?

ಪ್ರಶ್ನೆ ನಿಗೂಢವೇ. ಒಂದಂತೂ ಸತ್ಯ. ವಿನಿವಿಂಕ್ ಶಾಸ್ತ್ರಿ ಖಾಲಿ ಚೆಕ್ ಕೊಟ್ಟು ಮುಂಡಾಮೋಚಿದ್ದನ್ನು ಕಿಶೋರ್ ತನ್ನ ಕಾಂಪ್ಲೆಕ್ಸ್ ತೋರಿಸಿ ದೋಚಿದ್ದಾನೆ. ಸಾಲಗಾರರಿಗೆ ವಾಪಸ್ಸು ಮಾಡದೇ ಹೋದರೆ ಖಂಡಿತಾ ಜೈಲುಪಾಲಾಗುತ್ತಾನೆ. ಆದರೆ ನಂಬಿ ತಮ್ಮ ಚಿನ್ನಾಭರಣಗಳನ್ನೆಲ್ಲ ಠೇವಣಿಯಾಗಿಟ್ಟ ಅಮಾಯಕರ ಗತಿಯೇನು?

ಕಬ್ಬನ್‌ಪಾರ್ಕ್ ಇನ್ಸ್‌ಪೆಕ್ಟರ್ ರವಿಶಂಕರ್ ಯಾವುದಕ್ಕೂ ಹುಷಾರಾಗಿರಬೇಕು.

■ ರಾ. ಸೋಮನಾಥ್

ಶುವಾದ ಪರಿಶ್ಯಾ ತಾನು ಮಾಡಿರದ ತಪ್ಪಿಗಾಗಿ
ಪಾಲಾದ.

ತೂವಾಗ ಮುತ್ತು ಮಾಸ್ತರ್ ತನ್ನ ಅಳಿಯ
ನನ್ನು ಅನಗತ್ಯವಾಗಿ ಜೈಲು ಪಾಲು ಮಾಡಿದನೋ
ಮುತ್ತುವನ್ನು ಎತ್ತುವುದಕ್ಕಾಗಿ ಬಾಗಪ್ಪ ಹರಿಜನ್
ಹಾಕಿಬಿಟ್ಟಿದ್ದ. ಅಂತೆಯೇ 2007ರ ಜೂನ್ ಕೊನೆಯ
ಲ್ಲಿ ಮುತ್ತು ಮಾಸ್ತರ್‌ಗೆ ಮುಹೂರ್ತ ಫಿಕ್ಸ್
ಫಿನಿಷ್ ಮಾಡಿಯೇ ಬಿಟ್ಟ. ಅದೆಂಥ ಭೀಕರ
ವೆಂದರೆ ಮುತ್ತು ಮಾಸ್ತರ್ ದೇಹವನ್ನು ಅಕ್ಷರಶಃ
ತುಂಡಾಗಿ ಕತ್ತರಿಸಿ ಹಾಕಿದ್ದ ಬಾಗಪ್ಪ ಹರಿಜನ್.
ಕೊಲೆ ಕೇಸಿನಲ್ಲಿ ಬಂಧಿತನಾದ ಬಾಗಪ್ಪ ಬಳ್ಳಾರಿ
ಸೇರಿಕೊಂಡ.

ಪರಿಶ್ಯಾ ಮತ್ತು ರಾಜಶೇಖರ್ ಮಟ್ಯಾಶ್!

ಸರಣಿ ಕೊಲೆಗಳ ಮುಂದುವರಿದ ಭಾಗದಲ್ಲಿ
ಶುಗಳಾದವರು ಬಾಗಪ್ಪ ಹರಿಜನನ ಇಬ್ಬರು
ಂದಿರಾದ ಪರಿಶ್ಯಾ ಮತ್ತು ರಾಜಶೇಖರ್
ಸೇರಿ. ಮುತ್ತು ಮಾಸ್ತರ್‌ನ ಚಿತಾವಣೆಯಿಂದ
ರ್ ಸಾಬ್ ಕೇಸಿನಲ್ಲಿ ಜೈಲು ಪಾಲಾಗಿದ್ದ ಪರಿಶ್ಯಾ
ತಾನೆ ಜಾಮೀನಿನ ಮೇಲೆ ಹೊರಗೆ ಬಂದಿದ್ದ.
ಕೇಸಿಗೆ ಸಂಬಂಧಪಟ್ಟಂತೆ ಆತ ಜೂನ್ 11ರಂದು
ಲಯಕ್ಕೆ ಹಾಜರಾಗಬೇಕಿತ್ತು, ಪ್ರಾಯಶಃ ಅವನಿಗೆ
ದ ಅಪಾಯವನ್ನರಿತೇ ಆತ ತಾನೊಬ್ಬನೇ ಹೋಗದೇ
ಸ ಹೆಂಡತಿಯ ತಮ್ಮ ರಾಜಶೇಖರ್‌ನನ್ನೂ ಜೊತೆಗೆ
ಕೊಂಡು ಹೋಗಿದ್ದಾನೆ.
ವರಿಬ್ಬರೂ ಪಲ್ಸರ್ ಬೈಕೇರಿ ಬ್ಯಾಡಗೀಹಾಳ
ದಿಂದ ಹೊರಟು ನ್ಯಾಯಾಲಯ ತಲುಪುವ
ಲೇ ಅಲಮೇಲ ರಸ್ತೆಯ ಮಧ್ಯದಲ್ಲಿಯೇ ಇವರನ್ನು
ರ ತಂಡ ಅಟಕಾಯಿಸಿಕೊಂಡಿದೆ. ರಿವಾಲ್ವಾರ್
ಡಬಲ್ ಬ್ಯಾರಲ್ ಗನ್‌ಗಳಿಂದ ಮನಸೋ ಇಚ್ಛೆ
ಹಾರಿಸಿ ಮಟ್ಯಾಶ್ ಮಾಡಿದ್ದಾರೆ.
ಹಾಗ ಮುತ್ತು ಮಾಸ್ತರ್‌ನನ್ನು ಬಾಗಪ್ಪ ಹರಿಜನ
ಹಾಕಿದನೋ ಆಗಲೇ ಮುತ್ತು ಮಾಸ್ತರ್‌ನ ದೋಸ್ತ್,

ಹಾಗೂ ಚಂದಪ್ಪ ಹರಿಜನನ ತಮ್ಮ ಬಸವರಾಜ್ ಹರಿಜನ್‌ಗೆ ಚಳಿಜ್ವರ ಶುರುವಾಗಿತ್ತು. ಬಾಗಪ್ಪನನ್ನು ಹೀಗೇ ಬೆಳೆಯಲು ಬಿಟ್ಟರೆ ಮುಂದೊಂದು ದಿನ ತನ್ನನ್ನೂ ಕತ್ತರಿಸಿ ಹಾಕಲು ಬಾಗಪ್ಪ ಹಿಂಜರಿಯುವುದಿಲ್ಲ ಎಂಬ ಅಂಶ ಅವನಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿಯೇ ಬಾಗಪ್ಪ ಜೈಲಿನಿಂದ ಹೊರಬರುವ ಮೊದಲೇ ಅವನ ಇಬ್ಬರು ಭಂಟರಂತಿದ್ದ ಇಬ್ಬರೂ ಅಳಿಯಂದಿ ರನ್ನು ಬಸವರಾಜ್ ಹರಿಜನ್ ಮುಗಿಸಿಬಿಟ್ಟಿದ್ದಾನೆ.

ಅಸಲಿಗೆ ಇವರಿಬ್ಬರನ್ನು ಮುಗಿಸುವುದಕ್ಕೆ ಮುತ್ತು ಮಾಸ್ತರ್‌ನ ಕೊಲೆಯ ಸೇಡು ಮಾತ್ರವೇ ಕೆಲಸ ಮಾಡಿಲ್ಲ, ಜೊತೆಗೆ ಚಂದಪ್ಪ ಹರಿಜನ ಬಿಟ್ಟು ಹೋದ ದುಡ್ಡಿನ ಆಶೆಯೂ ಸೇರಿಕೊಂಡಿದೆ. ಚಂದಪ್ಪ ಹರಿಜನನ ದುಡ್ಡು ಅವನ ಹೆಂಡತಿ ಶಾರವ್ವ, ತಮ್ಮ ಬಸವರಾಜ್ ಮತ್ತು ಮುತ್ತು ಮಾಸ್ತರ್‌ನ ಪಾಲಾಗಿತ್ತು. ಅದನ್ನು ಹೇಗಾದರೂ ಮಾಡಿ ಕಿತ್ತುಕೊಳ್ಳಬೇಕೆಂದು ಬಾಗಪ್ಪ ಹರಿಜನ್ ಬಹಳ ದಿನದಿಂದ ಯೋಚಿಸುತ್ತಿದ್ದ. ಅದಕ್ಕೆ ಅವನ ಇಬ್ಬರು ಅಳಿಯಂದಿರರೂ ತಲೆ ಕೆಡಿಸಿಕೊಂಡಿದ್ದರು.

ಬಾಗಪ್ಪನಿಂದ ತಮ್ಮ ದುಡ್ಡನ್ನು ರಕ್ಷಿಸಿಕೊಳ್ಳಬೇಕೆಂದರೆ, ಅವನಿಂದ ತಮಗೆ ಆಗಲಿರುವ ಪ್ರಾಣಾಪಾಯದಿಂದ ಪಾರಾಗಬೇಕೆಂದರೆ ಬಾಗಪ್ಪನ ಗ್ಯಾಂಗನ್ನು ಸರ್ವನಾಶ ಮಾಡುವುದೊಂದೇ ದಾರಿ ಎಂದು ಶಾರವ್ವ ಮತ್ತು ಬಸವರಾಜ್ ಹರಿಜನ್‌ಗೆ ಅರ್ಥವಾಗಿಹೋಗಿತ್ತು. ಅದಕ್ಕಾಗಿಯೇ ಕಂಬಾಲಿ ಗ್ರಾಮದ ಸುಪಾರಿ ಹಂತಕನನ್ನು ಕರೆಸಿ ಬಾಗಪ್ಪನ ಅಳಿಯಂದಿರರನ್ನು ಫಿನಿಷ್ ಮಾಡಿಸಿದ್ದಾರೆ.

ಅಳಿಯಂದಿರಿಬ್ಬರ ಹೆಣ ಒಂದೇ ದಿನದಲ್ಲಿ ಉರುಳಿದ್ದನ್ನು ಕಂಡು ಅತ್ತ ಬಳ್ಳಾರಿ ಜೈಲಿನಲ್ಲಿರುವ ಬಾಗಪ್ಪ ಹರಿಜನ್ ಕೊತಕೊತ ಕುದಿಯುತ್ತಿದ್ದಾನೆ. ಆತ ಹೊರಬಂದ ತಕ್ಷಣವೇ ಬಸವರಾಜ್ ಹರಿಜನನನ್ನು ಮುಗಿಸುವುದೇ ತನ್ನ ಮೊದಲ ಕೆಲಸ ಎಂದಿದ್ದಾನೆ.

ಹೊರಬಂದ ಮೇಲೆ ಹೆಣಗಳನ್ನು ಉರುಳಿಸುತ್ತಾನೋ ಅಥವಾ ತಾನೇ ಹೆಣವಾಗುತ್ತಾನೋ ಗೊತ್ತಿಲ್ಲ, ಅವೆರಡರಲ್ಲಿ ಏನೇ ನಡೆದರೂ ಭೀಮಾ ತೀರದಲ್ಲಿ ಹರಿಯುತ್ತಿರುವ ರಕ್ತ ಮತ್ತಷ್ಟು ರಭಸವಾಗುವುದಂತೂ ಸತ್ಯ

■ ಮೇಘರಾಜ್

ಕಕ್ಕಸ್ ಕೀಗಳನ್ನು ಆರೆಸೆಸ್ಸಿಗರ ಕೈಗೆ ಕೊಡ್ತೇವೆ!

ಥೂತ್ತೇರಿ

■ ಯಾಹೂ

ಮೋಟುಮರ ಗಾಳಿಮಿಂಡ ಎನ್ನುವಂತೆ, ನಮ್ಮ ದಂಬಾಯ ಕವಿ ಸಿದ್ದಲಿಂಗಯ್ಯನವರು ಬಿಜೆಪಿಯೊಳಕ್ಕೂ ನುಸುಳಿ ಪುಸ್ತಕ ಪ್ರಾಧಿಕಾರದ ಕುರ್ಚಿ ಹಿಡಿದು ಕೂತರಂತಲ್ಲಾ, ತಮ್ಮ ದಂಬಾಯದ ಸಾಲುಗಳನ್ನು ರಾಮಕೃಷ್ಣ ಹೆಗಡೆ ಪದತಲಕ್ಕರ್ಪಿಸಿ ಕೃತಾರ್ಥರಾಗಿದ್ದ ಸಿದ್ದಲಿಂಗಯ್ಯ ನಂತರ ಊರುಕೇರಿಯ ಉಪಕತೆಗಳನ್ನು ಕುಮಾರಸ್ವಾಮಿ ಎಂಬ ಅಕ್ಷರವಿರೋಧಿಗರ್ಪಿಸಿ, ಈಗ ಎಡೂರಪ್ಪನಿಗೂ ಏನನ್ನಾದರೂ ಅರ್ಪಿಸಬೇಕೆಂದು ಪ್ರಾಧಿಕಾರದ ಕುರ್ಚಿಯಲ್ಲಿ ಕುಳಿತು ಯೋಚಿಸುತ್ತಿದ್ದಾರಂತಲ್ಲಾ, ಈ ನಡುವೆ ಅವರ ಸೃಜನಶೀಲತೆ ಬತ್ತಿಹೋಗಿ, ಭಟ್ಟಂಗಿತನದ ಪದಗಳೇ ತಲೆತುಂಬ ತುಂಬಿರುವುದರಿಂದ, ಹೊಲೆಮಾದಿಗರ ಹಾಡನ್ನೇ ಬದಲಿಸಿ,

ಇಕ್ಕೆರ್ಲ, ಈ ನನ ಮಕ್ಕಳ ತ ಇಕ್ಕಿಸಿಗಂಡು ಉಣ್ಣೆರ್ಲ
ನಮಿಗು ಬಾಡಿನ ಸಾರು ತಿಂದು ಬಾಯಿಕೆಟ್ಟದೆ
ಅದ್ಕೆ ಬೇಳೆ ತೊವ್ವೆ ಕಡ್ಲೆಪಾಯಸ ಕಂಡ್ರೆ
ಕಟಬಾಯಿಲಿ ನೀರು ಕಿತ್ತಗತದೆ
ಸುಮ್ಮನಿರಬ್ಯಾಡಿ
ಈ ನನ ಮಕ್ಕಳ ಕೈಲಿರದ ಕಿತಗಳಿ
ಕೊಡ್ಲಿಲ್ಲ ಅಂದ್ರೆ ಕೊಡವರಿಗೂ ಬುಡಬ್ಯಾಡಿ
ಮನಿಗೆ ನುಗ್ಗಿ, ಗುಡಿಗೆ ನುಗ್ಗಿ, ಸಾಧ್ಯವಾದರೆ ನಡ ಬಗ್ಗಿಸಿ ಹಲ್ಕಿರಿರಿ

ಎಂದು ಹೊಸ ಕವನ ಹೊಸೆಯಲಿದ್ದಾರಂತಲ್ಲಾ, ಥೂತ್ತೇರಿ!

****

ಎಡೂರಪ್ಪನ ಸರ್ಕಾರಕ್ಕೆ ಶೋಭೆ ತಂದಿರುವ ನಮ್ಮ ಶೋಭಕ್ಕನನ್ನು ಮಾತನಾಡಿಸಿ, ಮನಸ್ಸಿಗೆ ಒಂದಿಷ್ಟು ಆಹ್ಲಾದವುಂಟುಮಾಡಿಕೊಳ್ಳಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಿದೆ.



ರಿಂಗ್‌ಟೋನ್ : "ನಿನ್ನ ರೂಪ ಕಣ್ಣಲಿ, ನಿನ್ನ ದನಿಯು ಕಿವಿಯಲಿ, ನಿನ್ನ ಧ್ಯಾನ ಮನದಲಿ, ನಾನು ನಿನ್ನ ಬಳಿಯಲೀ.."

"ಹಲೋ, ಯಾರು?"

"ಶೋಭಕ್ಕ, ನಾನು ಯಾಹೂ"

"ಯಾಹೂ ಅಂದರೆ ಯಾರು? ಭಟ್ಕಳದ ಯಾಹ್ಯಾ ಕಡೆಯವರಾ?"

"ನಾನು ಪತ್ರಕರ್ತ ಕಣಕ್ಕ. ನಿಮ್ಮ ಮಾತನಾಡಿಸ ಬೇಕಾಗಿತ್ತು."

"ಯಂತ ಹೇಳಿ?"

"ಅಭಿನಂದನೆ ಕಣಕ್ಕ. ನಿಮ್ಮ ಅಭ್ಯುದಯ ನೋಡಿ ನನಿಗೆ ಬಹಳ ಸಂತೋಷ ಆಯ್ತು."

"ಥೇಂಕ್ಸ್. ನಿಮ್ಮ ಪತ್ರಿಕೆಗೆ ಜಾಹೀರಾತು ಬೇಕೆ?"

"ನಮ್ಮದು ಜಾಹೀರಾತು ತಗಳೋ ಪತ್ರಿಕೆ ಅಲ್ಲ ಕಣಕ್ಕ. ಬೇಕಿದ್ರೆ ನಾವೆ ಬೇರೆ ಪತ್ರಿಕೆಗೂ ಕೊಡ್ತೀವಿ."

"ಮತ್ತೆ ನಮ್ಮಿಂದ ಏನಾಗಬೇಕು ಹೇಳಿ."

"ಬಹಳ ಒಳ್ಳೆ ಖಾತೆ ಪಡೆದಿದ್ದೀರಿ. ಪಂಚಾಯ್ತಿ ಮತ್ತು ಗ್ರಾಮೀಣಾಭಿವೃದ್ಧಿ ಇಡೀ ರಾಜ್ಯನ ಉದ್ಧಾರ ಮಾಡಬಹುದು ಕಣಕ್ಕ."

"ಅದು ನನ್ನಿಂದ ಸಾಧ್ಯ ಅಂತ ಹೇಳಿ ಯಡ್ಯೂರಪ್ಪನವರು ನನಗೆ ಈ ಖಾತೆಯನ್ನ ಕೊಟ್ಟಿದ್ದಾರೆ."

"ಎಡೂರಪ್ಪ ನಿಜಕ್ಕೂ ಆಧುನಿಕ ಅರಸು ಕಣಕ್ಕ. ಅಂದು ಅರಸು ಸಂಪುಟದಲ್ಲಿ ಮನೋರಮ ಮಧ್ವರಾಜ್ ಅನ್ನೋ ಮನಮೋಹಕ ಸಚಿವರಿದ್ದರು. ಈಗ ನೀವು ಎಡೂರಪ್ಪನ ಸಂಪುಟದ ಸಂಘಕ್ಕೆ ಶೋಭಾಯಮಾನವಾಗಿದ್ದೀರಿ."

"ನಿಮ್ಮ ಹೊಗಳಿಕೆ ಜಾಸ್ತಿಯಾಗ್ತವುಂಟು!"

"ಹೊಗಳೋ ಅಂತ ಸಾಹಸನೇ ನಿಮ್ಮದು. ಮುಂದೇನು ಮಾಡ್ತೀರಿ?"

"ಮುಂದೆ ನನ್ನ ಮೇಲೆ ತುಂಬ ಜವಾಬ್ದಾರಿಯುಂಟು. ನಮ್ಮ ಯಡ್ಯೂರಪ್ಪನವರ ನಂಬಿಕೆಯನ್ನು ನಾನು ಉಳಿಸಿಕೊಳ್ಳಬೇಕು. ಅವರು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ತಕ್ಕನಾಗಿ ನಾನು ನಡೆದುಕೊಳ್ಳಬೇಕು."

"ನೀವು ಮಂಗಳೂರು ಅಥವಾ ಉಡುಪಿ ಉಸ್ತುವಾರಿ ಸಚಿವರಾಗೋದು ಬಿಟ್ಟು ಮೈಸೂರಿಗೇಕೆ ಬಂದ್ರಿ?"

"ಮಂಗಳೂರು ಕಡೆ ಕೆಲವರು ನನ್ನ ಬಗ್ಗೆ ಹೇಯವಾಗಿ ಮಾತನಾಡುವುದುಂಟು. ಅದಕ್ಕೆ ನಾನು ಕ್ಷೇತ್ರವನ್ನು ಬದಲಿಸಿ ಬೆಂಗಳೂರಿಗೆ ಬಂದೆ. ಮೈಸೂರನ್ನು ಒಮ್ಮೆ ಚಾಮುಂಡಿ ಆಳಿದ್ದು ಗೊತ್ತುಂಟಲ್ಲ, ಆ ಹಿನ್ನೆಲೆಯನ್ನು ನೋಡಿ ನಾನು ಈಗ ಮೈಸೂರಿಗೆ ಬಂದು ಜಿಲ್ಲಾ ಉಸ್ತುವಾರಿ ಸಚಿವೆಯಾಗಿರುವುದು."

"ಸರಿ, ಈಗ ಮಹಿಷಾಸುರ ಯಾರಲ್ಲಿ?"

"ಅವ ಇನ್ನ ಉದ್ಭವಿಸಿಲ್ಲ, ಮುಂದೆ ಬರಬಹುದು."

"ಗ್ರಾಮೀಣಾಭಿವೃದ್ಧಿ ಖಾತೆ ತಗೊಂಡಿದ್ದೀರಿ, ಗ್ರಾಮವಾಸ್ತವ್ಯ ಮಾಡ್ತೀರೋ ಹೇಗೆ?"

"ನಾನೊಬ್ಬ ಮಹಿಳೆ. ಗ್ರಾಮ ವಾಸ್ತವ್ಯ ಸರಿಬರುವುದಿಲ್ಲ. ಯಡ್ಯೂರಪ್ಪನವರೂ ಕೂಡ ಅಲ್ಲಿ ಇಲ್ಲಿ ಮಲಗಬೇಡ ಅಂತ ಹೇಳಿದ್ದಾರೆ. ಆದ್ದರಿಂದ ಗ್ರಾಮಕ್ಕೆ ಭೇಟಿಕೊಟ್ಟ ನಂತರ ಎಷ್ಟು ಸಮಯವಾದರೂ ವಾಪಸ್ಸು ಬೆಂಗಳೂರಿಗೆ ಬರ್ತೇನೆ."

"ಹಾಗಿದ್ರೆ ಗ್ರಾಮವಾಸ್ತವ್ಯದಿಂದ ಯಾವ ಪ್ರಯೋಜನವೂ ಇಲ್ಲವೆ?"

"ಗ್ರಾಮಗಳ ಉದ್ಧಾರಕ್ಕೆ ನಾವು ಕಾರ್ಯಕ್ರಮ ರೂಪಿಸಬೇಕಾಗ್ತದೆ. ಅದಕ್ಕಾಗಿ ಗ್ರಾಮದಲ್ಲೇ ಉಳಿದು ಸಮಯ ಹಾಳುಮಾಡುವುದಕ್ಕಿಂತ, ಯಡ್ಯೂರಪ್ಪನವರ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡಿದರೆ, ಗ್ರಾಮಗಳ ಸಮಸ್ಯೆಗೆ, ಅದರಲ್ಲೂ ಮಹಿಳಾ ಸಮಸ್ಯೆಗೆ ಏನಾದರೂ ಪರಿಹಾರ ಸಿಗುವ ಸಂಭವವುಂಟು."

"ಗ್ರಾಮಗಳು ಉದ್ಧಾರವಾದರೆ ಪಟ್ಟಣಗಳು ತಾವಾಗಿಯೇ ಮುಂದುವರಿಯುತ್ತವೆ ಅಂತ ಗಾಂಧಿ ಹೇಳಿದ್ರು ಮೇಡಂ."

"ಆ ಮಾತನ್ನ ಯಡ್ಯೂರಪ್ಪನವರು ಹೇಳಿದ್ದು ಗೊತ್ತುಂಟ? ಅವರ ಶಿಕಾರಿಪುರ ಉದ್ಧಾರವಾದನಂತರ ಶಿವಮೊಗ್ಗ ಉದ್ಧಾರವಾಗ್ತವುಂಟು. ಅವರ ಅನುಭವದ ಮಾತನ್ನ ನಾನು ಕಣ್ಣಾರೆ ನೋಡಿದ್ದುಂಟು."

"ನಿಮ್ಮ ಮಾತು ನಿಜ ಮೇಡಂ, ಶಿಕಾರಿಪುರದಲ್ಲಿ ಎಲ್ಲಿ ನೋಡಿದ್ರು ಎಡೂರಪ್ಪನ ಕಟ್ಟಡಗಳೇ ಕಾಣ್ತಾವೆ. ಹಾಗೆ ಶಿವಮೊಗ್ಗದಲ್ಲೂ ಕಾಣ್ತಾಯಿದೆ. ಮುಂದೆ ಬೆಂಗಳೂರಲ್ಲೂ ಪ್ರಾರಂಭ ಆಗಬಹುದು. ಅವರ ಅನುಭವದ ಮಾತನ್ನ ನಾನು ಅಲ್ಲಗಳೆಯಲ್ಲ. ಆದರೆ ಗಾಂಧಿ ಹೇಳಿದ್ದು ಇಡೀ ದೇಶದ ಹಳ್ಳಿಗಳ ಬಗ್ಗೆ."

"ಇರಬಹುದು, ಆದರೆ ಈಗ ನಮ್ಮ ನಮ್ಮ ಹಳ್ಳಿ ಬಗ್ಗೆ ಯೋಚನೆ ಮಾಡಬೇಕಿದೆ ಅಲ್ಲವಾ."

"ಆಯ್ತು, ನಿಮ್ಮ ಹಳ್ಳಿ ಬಗ್ಗೆ ಏನು ಯೋಚನೆ ಮಾಡಿದ್ದೀರಿ?"

"ನಾನು ಆ ಸಮಸ್ಯೆಯಿಂದ ಪಾರಾಗಿ ಬಂದೆ. ಸದ್ಯಕ್ಕೆ ನನಗೀಗ ಹಳ್ಳಿ ಇಲ್ಲ. ಬೆಂಗಳೂರು ನನ್ನ ಕ್ಷೇತ್ರವಾದ ಕಾರಣ ಇಲ್ಲಿ ಹಳ್ಳಿ ಇಲ್ಲ."

"ದಕ್ಷಿಣಕನ್ನಡದ ಲೆಕ್ಕಾಚಾರದ ಮಾತಾಡ್ತೀರಲ್ಲ ಮೇಡಂ?"

"ನಮ್ಮ ಮಾತಿನಲ್ಲಿ ನಿಮಗೆ ಲೆಕ್ಕಾಚಾರ ಕಾಣಿಸಿದರೆ ನಾನು ಯಂತ ಮಾಡುವುದು?"

"ಹಳ್ಳಿ ಶೌಚಾಲಯದ ಬಗ್ಗೆ ಹೇಳಿ?"

"ಹಳ್ಳಿಯಲ್ಲಿ ಶೌಚಾಲಯ ಕಟ್ಟಿಸುತ್ತೇವೆ. ಸಾಲಾಗಿ ಕಟ್ಟಿಸಿ ಅದಕ್ಕೆ ಬೀಗ ಹಾಕ್ತೇವೆ. ಬೀಗದ ಕೀಗಳನ್ನ ಆರೆಸ್ಸೆಸ್ಸಿಗರ ಕೈಗೆ ಕೊಡ್ತೇವೆ. ಅವರ ಬಳಿ ತೆಕ್ಕೊಂಡು ಹೋಗಬಹುದು."

"ಹಾಗಾದ್ರೆ, ಪಾಪ, ದಲಿತ ಹೆಂಗಸರಿಗೆ ಕೀ ಸಿಗೋದು ಕಷ್ಟ?"

"ಹಾಗೇನಾಗುವುದಿಲ್ಲ. ಬೀಗ ಮಾರುವವರೆಲ್ಲ ಪಾಪ. ಅವರ ಬಳಿ ಡೂಪ್ಲಿಕೇಟ್ ಕೀಗಳು ಇರ್ತವೆ. ದಲಿತರು ಬಯಲ ಕಡೆ ಹೋಗುವುದುಂಟು."

"ಥೂತ್ತೇರಿ!!!" ■

ಶಿವಯೋಗಿ - ಶಿವಶಂಕರ್ ಹಣಾಹಣಿ


ಆಗ್ನೇಯ ಪದವೀಧರ ಕ್ಷೇತ್ರಕ್ಕೆ ನಡೆಯಲಿರುವ ಚುನಾವಣೆ ನಿಧಾನವಾಗಿ ಕಾವು ಪಡೆದುಕೊಳ್ಳುತ್ತಿದೆ. ಜೆಡಿಎಸ್‌ನಿಂದ ಎಚ್.ಎಸ್. ಶಿವಶಂಕರ್, ಬಿಜೆಪಿಯಿಂದ ಡಾ. ಶಿವಯೋಗಿ ಸ್ವಾಮಿ, ಕಾಂಗ್ರೆಸ್‌ನಿಂದ ಎಸ್.ಲೋಕೇಶ್ವರಪ್ಪ ಕಣದಲ್ಲಿದ್ದಾರೆ. ಸ್ವತಂತ್ರ ಅಭ್ಯರ್ಥಿಗಳಾಗಿ ಮಾದನಾಯಕನಹಳ್ಳಿ ರಾಜಣ್ಣ ಮಲ್ಲಿಕಾರ್ಜುನಯ್ಯ ಚೌಡಾರೆಡ್ಡಿ ಬಿ.ವಿ. ವಸಂತಕುಮಾರ್, ಧನಪಾಲ್‌ರವರುಗಳು ಕಣದಲ್ಲಿದ್ದಾರೆ.

ಪ್ರಸ್ತುತ ಸನ್ನಿವೇಶದಲ್ಲಿ ಜೆಡಿಎಸ್‌ನ ಶಿವಶಂಕರ್ ಹಾಗೂ ಬಿಜೆಪಿಯ ಡಾ. ಶಿವಯೋಗಿ ಸ್ವಾಮಿ ನಡುವೆ ನೇರ ಪೈಪೋಟಿ ಇರುವಂತೆ ಕಂಡುಬರುತ್ತಿದ್ದರೂ ಕಾಂಗ್ರೆಸ್‌ನ ಲೋಕೇಶ್ವರಪ್ಪ ಕೂಡಾ ತೀವ್ರ ಸ್ಪರ್ಧೆ ನೀಡುವ ಸಾಧ್ಯತೆಗಳಿವೆ.

ಹಿಂದೆಲ್ಲಾ ಪದವೀಧರ ಚುನಾವಣೆಯೆಂದರೆ ಅದೊಂದು ಅಜ್ಞಾತ ಪ್ರಕ್ರಿಯೆ ಎಂಬಂತಿತ್ತು, ಈಗ ಪದವೀಧರ ಚುನಾವಣೆಯೂ ಮಾಮೂಲಿ ಚುನಾವಣೆಯ ಆಯಾಮ ಪಡೆದುಕೊಂಡಿದೆ. ಇನ್ನೊಂದು ದುರಂತವೆಂದರೆ ಈ ಪದವೀಧರ ಕ್ಷೇತ್ರಗಳಾಗಿರುವ ಪ್ರಾತಿನಿಧ್ಯದ ಮಹತ್ವವನ್ನು ಅರಿತವರು ಕಣದಲ್ಲಿರದೇ ಅದೇ ಹಣ-ಜಾತಿ ಬಲಗಳ ಸಮೀಕರಣಗಳನ್ನೇ ನಂಬಿಕೊಂಡವರು ಅಖಾಡಕ್ಕಿಳಿದಿರುವುದು.

ಹೊಸ ಬದಲಾವಣೆಯೇನೆಂದರೆ ಈ ಬಾರಿ ಪದವೀಧರ ಮತದಾರರು ಒಂದಷ್ಟು ಪ್ರಬುದ್ಧ ಪ್ರಶ್ನೆಗಳನ್ನೆತ್ತುತ್ತಿರುವುದು. ವಿಧಾನಪರಿಷತ್ ಸದಸ್ಯರಾಗಿ ಆಯ್ಕೆಯಾದವರು ಪದವೀಧರರ ಸಮಸ್ಯೆಗಳಿಗೆ, ಆಗುಹೋಗುಗಳಿಗೆ ಸ್ಪಂದಿಸದೇ ಅದೊಂದು ಲಾಭದಾಯಕ ಹುದ್ದೆ ಎಂಬಂತೆ ಮಾಡಿಕೊಂಡು ವೃತ್ತಿನಿರತ ರಾಜಕಾರಣಿಗಳಿಗೆ ಯಾವ ರೀತಿಯಲ್ಲೂ ಕಡಿಮೆ ಇಲ್ಲವೆಂಬಂತೆ ನಡೆದುಕೊಳ್ಳುತ್ತಿರುವುದು ಪದವೀಧರ ಮತದಾರರ ಆಕ್ರೋಶಕ್ಕೆ ಕಾರಣವಾಗಿದೆ. ಇಂತಹ ಅಸಮಾಧಾನಗಳಿಗೆ ಉತ್ತರಿಸುವುದೇ ಅಭ್ಯರ್ಥಿಗಳಿಗೆ ದೊಡ್ಡ ಸವಾಲಾಗಿದೆ.

ಬಿಜೆಪಿ ಸರ್ಕಾರ ಪೀಠಸ್ಥವಾಗಿರುವುದರಿಂದ ನನ್ನ ಆಯ್ಕೆಗೆ ತಾನೇ ತಾನಾಗಿ ಸುಗಮ ಹಾದಿ ನಿರ್ಮಾಣವಾಗಿದೆಯೆಂಬ ಅಭಿಪ್ರಾಯ ಹೊಂದಿರುವ ಶಿವಯೋಗಿಸ್ವಾಮಿ ತಮ್ಮ ಗೆಲುವಿನ ಕುರಿತು ಅತಿಯಾದ ಭರವಸೆ ಇಟ್ಟುಕೊಂಡಿದ್ದಾರೆ. ಈ ಅತಿಯಾದ ಭರವಸೆಯಿಂದಾಗಿಯೇ ಇನ್ನೂ ಮತದಾರರನ್ನು ತಲುಪಲಿಕ್ಕೆ ಆಗಿಲ್ಲ. ಹಿಂದೆ ಈತ ಎಂಎಲ್‌ಸಿಯಾಗಿದ್ದಾಗ ಹತ್ತರಲ್ಲಿ ಹನ್ನೊಂದು ಎಂಬಂತಿದ್ದರೆ ವಿನಃ ತಾವೇತಾವಾಗಿ ತಾವು ಪ್ರತಿನಿಧಿಸುವ ಪದವೀಧರ ಸಮುದಾಯಕ್ಕೆ ಏನನ್ನಾದರೂ ಮಾಡಿದ ನಿದರ್ಶನಗಳಿಲ್ಲ. ಹಾಗೆಂದೂ ಎಂಎಲ್‌ಸಿಗಿರಿಯನ್ನು ತನ್ನ ಸ್ವಾರ್ಥ ಸಾಧನೆಗೂ ಬಳಸಿಕೊಂಡ ನಿದರ್ಶನಗಳೂ ಇಲ್ಲ ಎಂಬಂತ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಆದರೆ ಸ್ವತಃ ಕೆಲ ಬಿಜೆಪಿಯ ನಾಯಕಮಣಿಗಳೇ ಒಳಗಿನಿಂದ ಶಿವಯೋಗಿ ಸ್ವಾಮಿಯ ಕಾಲೆಳೆಯುವ ಪ್ರಯತ್ನ ಮಾಡುತ್ತಿದ್ದಾರೆಂಬುದು ಮಾತ್ರ ಸುಳ್ಳಲ್ಲ.



ಜೆಡಿಎಸ್‌ನ ಎಚ್.ಎಸ್. ಶಿವಶಂಕರ್ ಶಿಕ್ಷಕರಿಗೆ ಐದನೇ ವೇತನ ಆಯೋಗದಿಂದ ವಿಶೇಷ ಭತ್ಯೆ ಸೇರಿದಂತೆ ಖಾಸಗಿ ಅನುದಾನಿತ ಶಾಲಾ-ಕಾಲೇಜುಗಳಿಗೆ ಅನುದಾನ ಕೊಡಿಸುವುದು, ಕೃಪಾಂಕ ಆಧಾರಿತ ನೌಕರರ ಪುನರ್ ನೇಮಕಾತಿಗೆ ಒತ್ತಾಯ, ಪದವಿ ಪೂರ್ವ ಅರೆಕಾಲಿಕ ಉಪನ್ಯಾಸಕರ ಕಾಯಮಾತಿಗೆ ಸಕ್ರಿಯ ಹೋರಾಟ-ಬೆಂಬಲ ನೀಡಿದ್ದಾರೆಂಬ ಅಭಿಪ್ರಾಯ ಗಳಿವೆ. ವಿಪರ್ಯಾಸವೆಂದರೆ ಶಿವಶಂಕರ್ ಕಡೆಯಿಂದ ಆಗಿದೆಯೆನ್ನಲಾದ ಕೆಲಸಗಳಿಗಿಂತ ಎಂಎಲ್‌ಗಿರಿಯಿಂದ ಆತ ನಡೆಸಿದ ರಾಜಕಾರಣವೇ ಮುಖ್ಯವಾಗಿಬಿಟ್ಟಿದೆ.

ಪದವೀಧರರ ಸಮಸ್ಯೆಗಳ ಬಗ್ಗೆ ಸರಿಯಾ… ಪ್ರತಿನಿಧಿಸಿಲ್ಲವೆಂಬ ಆರೋಪ ಒಂದು ಕಡೆಯಾದರೆ ಕ… ಬಾರಿ ಚುನಾಯಿತರಾದ ವಿಧಾನಪರಿಷತ್ ಸದಸ್ಯರ… ಅತಿಹೆಚ್ಚು ವರ್ಗಾವಣೆ ದಂಧೆ ನಡೆಸಿ ದುಡ್ಡು ಎಣಿಸಿಕೊಂ… ಅಪಖ್ಯಾತಿ ಶಿವಶಂಕರ್ ಮೇಲಿದೆ. ತನಗಾಗದವರ… ಮಟ್ಟಹಾಕುವ ಕೆಲಸವನ್ನು ಶಿವಶಂಕ… ತಮ್ಮದೇ ಶೈಲಿಯಲ್ಲಿ ಮಾಡುತ್ತಾರೆ. ಒ… ಹರಿಹರ ತಾಲ್ಲೂಕಿನಲ್ಲಿ ಮಹಿಳಾ ಶಿಕ್ಷಕರ… ಒಳಗೊಂಡಂತೆ ಹದಿನಾಲ್ಕು ಜನರನ… ಗುಲ್ಬರ್ಗಾಕ್ಕೆ ವರ್ಗಾವಣೆ ಮಾಡಿಸಿ ಸೇ… ತೀರಿಸಿಕೊಂಡಿದ್ದರೆನ್ನಲಾಗಿದೆ. ಆ… ಮುಖ್ಯಮಂತ್ರಿ ಕುಮಾರಸ್ವಾಮಿ ಬಳಿ ತ… ತಮ್ಮ ಗೋಳನ್ನು ಹೇಳಿಕೊಂಡು ವರ್ಗಾ… ರದ್ದು ಮಾಡಿಸಿಕೊಂಡು ಬಂದಿದ್ದರು.

ಇಂತಹ ಆರೋಪಗಳ ನಡುವೆಯ… ಎಚ್.ಎಸ್. ಶಿವಶಂಕರ್ ಕಣದಲ್ಲಿರುವ ಪ್ರಬಲ ಅಭ್ಯರ್ಥಿ… ಪದವೀಧರ ಮತದಾರರನ್ನು ನೋಂದಣಿ ಮಾಡುವ… ಶಿವಶಂಕರ್‌ದೇ ಸಿಂಹಪಾಲು. ಜೊತೆಗೆ ಲಿಂಗಾಯ… ಸಮುದಾಯದ ಓಟುಗಳೂ ಶಿವಶಂಕರ್… ಅನಾಯಾಸವಾಗಿ ಸಿಗಲಿದೆ ಎಂದು ವಿಶ್ಲೇಷಿಸಲಾಗುತ್ತಿ…

ಅಳಿದ ಊರಿಗೆ ನಮೋಶಿಯೆ ಎಂಎಲ್‌ಸಿ

ರಾಜ್ಯ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಚುನಾವಣೆ ಘೋಷಣೆಯಾಗಿದ್ದರೂ ಇಲ್ಲಿನ್ನೂ ನೀರವ ಮೌನ ಆವರಿಸಿದೆ. ಇದಕ್ಕೆ ಬಹುಮುಖ್ಯ ಕಾರಣ ರಾಜ್ಯದ ಕಾಂಗ್ರೆಸ್ ನಾಯಕರ ನಡುವೆ ಇರದ ಒಮ್ಮತ. ಹನ್ನೆರಡು ಜನ ಸೇರಿ ತೊಗಲು ಹದಗೆಡಿಸಿದರು ಎಂಬಂತೆ ಬರೀ ನಾಯಕರಿಂದಲೆ ತುಂಬಿರುವ ಕಾಂಗ್ರೆಸ್ ನಾವಿಕನಿಲ್ಲದ ಹಡಗಿನಂತೆ ದಿಕ್ಕುತಪ್ಪಿ ಹೊರಟಿದೆ. ಈ ಹಡಗು ಯಾವಾಗ ಮುಳುಗಿಹೋಗುತ್ತದೋ ಆ ಸೋನಿಯಾಳೂ ಅರಿಯಳು.



ಮೊನ್ನಿನ ವಿಧಾನಸಭೆಯ ಚುನಾವಣೆಯಲ್ಲಿ ತಾವೇ ಬಹುಮತ ಪಡೆದು ಅಧಿಕಾರದ ಗದ್ದುಗೆ ಏರುತ್ತೇವೆ ಎಂದು ಕನಸು ಕಂಡಿದ್ದ ಸೋಂಭೇರಿಗಳನ್ನು ಜನ ಈಗ ವಿರೋಧ ಪಕ್ಷದ ಸ್ಥಾನದಲ್ಲಿ ಕುಳ್ಳಿರಿಸಿದ್ದಾರೆ. ಅಧಿಕಾರದ ಗದ್ದುಗೆಯನ್ನೇರಿ ಹರಿಹಾಯುವುದನ್ನು ಸುಲಭವಾಗಿ ಕಲಿತುಕೊಂಡಿರುವ ಕಾಂಗೈಗಳು ಇಂದು ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುವುದು ತುಸು ಕಷ್ಟವೆಂದೆ ಹೇಳಬೇಕು. ಅಲ್ಲದೆ ಆ ಪಕ್ಷದಲ್ಲಿಯ ಒಳಜಗಳಗಳ, ಈರ್ಷ್ಯೆ, ನಾಯಕತ್ವದ ಪೈಪೋಟಿಗಳೆಲ್ಲವೂ ಅದಕ್ಕೆ ಮುಳುವಾಗುವ ಸಾಧ್ಯತೆಗಳು ಸಾಕಷ್ಟಿವೆ.

ಇದನ್ನು ಚೆನ್ನಾಗಿ ಉಪಯೋಗಿಸಿಕೊಂಡ ಚೆಡ್ಡಿಗಳು ಮಾತ್ರ ಗೆಲುವಿನ ರಹದಾರಿಯಲ್ಲಿ ಕೇಕೇ ಹಾಕುತ್ತ ಸದ್ಯ ಮುನ್ನಡೆಯುತ್ತಿದ್ದಾರೆ. ರೈತರ ಹೆಸರಿನ ಮೇಲೆ ಪ್ರಮಾಣ ವಚನ ಪಡೆದ, ರೈತರ ಹಸಿರು ಟವಲನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ವಿಜೃಂಭಿಸಿದ ಯಡ್ಡಿ, ನಾಲ್ಕಾರು ದಿನಗಳಲ್ಲಿಯೆ ತನ್ನ ರೈತ ಪ್ರೇಮವನ್ನು ಹಾವೇರಿಯಲ್ಲಿ ತೋರಿಸಿಕೊಂಡಿದ್ದಾನೆ.

ಇದೇನೇ ಇದ್ದರೂ ಈ ಚೆಡ್ಡಿಗಳ ನೆಟ್‌ವರ್ಕ್ ಮಾತ್ರ ಕಾಂಗೈಗಳನ್ನು ಹಾಗೂ ಜೆಡಿಎಸ್‌ನವರನ್ನೂ ಮೀರಿಸುವಂತೆ ನಡೆದಿರುತ್ತದೆ. ಈಶಾನ್ಯ ಕರ್ನಾಟಕದ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ತಿನ ವ್ಯಾಪ್ತಿಗೆ ಒಳಪಡುವ ಬೀದರ್, ಕಲಬುರ್ಗಿ, ಬಳ್ಳಾರಿ, ರಾಯಚೂರು, ದಾವಣಗೆರೆ, ಕೊಪ್ಪಳಗಳ ತುಂಬೆಲ್ಲ ಈಗ ಕೇಸರಿ ಬಾವುಟಗಳ ಠೇಂಕಾರವೆ ಎದ್ದು ಕಾಣುತ್ತಿದೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಎಮ್‌ಎಲ್‌ಸಿ ಚುನಾವಣೆಯ ದಿನಾಂಕ ಇನ್ನೂ ದೂರ ಇರುವಾಗಲೆ ಬಿಜೆಪಿ ತನ್ನ ಅಭ್ಯರ್ಥಿಯ ಹೆಸರನ್ನು ಘೋಷಿಸಿದ್ದು. ಈ ಮೊದಲೆ ಎರಡು ಬಾರಿ ಇದೇ ಕ್ಷೇತ್ರದ ಮೂಲಕ ಚುನಾಯಿತನಾಗಿರುವ ಶಶಿಲ ನಮೋಶಿ ಮತ್ತೆ ತನ್ನ ಅದೃಷ್ಟ ಪರೀಕ್ಷಿಸಲು ಅಖಾಡಕ್ಕೆ ಇಳಿದಾಗಿದೆ.

ಆದರೆ ವಿಧಾನಸಭೆಯ ಚುನಾವಣೆಯಲ್ಲಿ ತನ್ನ ಅಸಮರ್ಥ ನಾಯಕತ್ವ ಹಾಗೂ ಟಿಕೇಟ್ ಹಂಚಿಕೆಯಲ್ಲಾದ ಗೊಂದಲಗಳಿಂದ ಹಿಂದೆ ಸರಿದು ನಿಂತಿರುವ ಕಾಂಗ್ರೆಸ್ ಪಕ್ಷದ ದಂಡನಾಯಕರು ತಮ್ಮ ಸೋಲಿನ ಕಾರಣಗಳ ವಿಶ್ಲೇಷಣೆಯಲ್ಲಿ ತೊಡಗಿ ವಿಧಾನ ಪರಿಷತ್ತಿನ ಚುನಾವಣೆಗಳನ್ನೆ ಮರೆತಿರುವಂತಿದೆ. ಆದ್ದರಿಂದಲೆ ಏಕ್‌ದಂ ಅಫಜಲಪುರದ ನಿವೃತ್ತ ಶಿಕ್ಷಕ ಅಣ್ಣಾರಾವ್ ಅಜಗೊಂಡನನ್ನು ತನ್ನ ಪಕ್ಷದ ಉಮೇದುವಾರನನ್ನಾಗಿ ನಿಲ್ಲಿಸಿ ತನ್ನ ಕೈ ತೊಳೆದುಕೊಂಡಿದೆ. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಪಕ್ಷದ ಶಾಸಕರು ಆಯ್ಕೆಯಾಗಿ ಬಂದಿದ್ದರೂ ಅವರೆಲ್ಲರ ಒಗ್ಗಟ್ಟಿನ ಕೊರತೆಯಿಂದ ಅಥವಾ ರಾಜ್ಯ ಹೈಕಮಾಂಡನವರ ಅಸಮರ್ಪಕ ಧೋರಣೆಗಳಿಂದ ಪಕ್ಷದ ಅಭ್ಯರ್ಥಿ ಅಜಗೊಂಡ ಕುತ್ತುಸಿರು ಬಿಡುತ್ತಿದ್ದಾನೆ. ವಿಧಾನ ಪರಿಷತ್ತಿನ ಚುನಾವಣೆಗೆ ನಾಮಿನೇಷನ್ ಮಾಡುವ ದಿನ ಕೂಡ ಹೆಚ್ಚಿನ ಸಂಖ್ಯೆಯ ಕಾಂಗೈ ಶಾಸಕರು ಹಾಜರಿದ್ದು ತಮ್ಮ ಬೆಂಬಲ, ಬಹುಮತ ತೋರಿಸಬೇಕಿತ್ತು, ಆದರೆ ಈ ಮುಂದಾಲೋಚನೆಗಳು ಕಾಂಗೈಗಳ ತಲೆಯಲ್ಲಿ ಇರಲು ಸಾಧ್ಯವಿಲ್ಲವಲ್ಲ!

ಇನ್ನು ಜೆಡಿಎಸ್ ಎಂಬ ಅಪ್ಪ ಮಕ್ಕಳ ಪಾರ್ಟಿಯ… ಮಕಾಡೆ ಮಲಗಿದವರು ಇನ್ನೂ ಎದ್ದಿರುವಂತೆ ಕಾಣುತ್ತಿ… ಬಿಜೆಪಿಯ ಭದ್ರಕೋಟೆಯಾಗಿರುವ ಈ ಕ್ಷೇತ್ರದಲ್ಲಿ ತಾನ… ಜಯಗಳಿಸುವುದು ಅಷ್ಟು ಸುಲಭ ಸಾಧ್ಯವಲ್ಲ ಎಂದ… ಆ ಪಕ್ಷ ತಿಳಿದುಕೊಂಡಂತಿದೆ. ಆದ್ದರಿಂದಲೇ ಚುನಾವಣೆ… ದಿನಾಂಕ ಮೊದಲೆ ಘೋಷಣೆಯಾಗಿದ್ದರೂ ಆ ಕ… ಹೊರಳಿಯೂ ನೋಡಲಿಲ್ಲ. ಕೊನೆಗೆ ಅವರ್ ಬಿಟ… ಇವರ್ ಬಿಟ್ಟು, ಇವರ‍್ಯಾರು ಎಂಬಂತೆ ಎಸ್.ಕೆ.ಕಾಂತ… ಮತ್ತು ಡೇವಿಡ್ ಸಿಮೇಯೋನ್‌ರತ್ತ ಕಣ್ಣು ಹಾಸಿತು.

ಆದರೆ ಗುಲಬರ್ಗಾದಿಂದ ಮೊನ್ನೆತಾನೆ ವಿಧಾನಸಭೆಯ… ಚುನಾವಣೆಯಲ್ಲಿ ಸೋಲಿನ ಕಹಿ ಉಂಡಿದ್ದ ಕಾಂತ… ಒಲವು ತೋರಲಿಲ್ಲ. ಡೇವಿಡ್ ಕೂಡ ಈ ಚುನಾವಣೆಗ… ಪಥ್ಯ ಆಗಲಾರವು ಎಂದು ಬಗೆದದ್ದರಿಂದ ಎಲ್ಲರು… ನಿರ್ಲಿಪ್ತರಾದರು. ಹಿಂದೊಮ್ಮೆ (2002 ರಲ್ಲಿ) ಎಸ್.… ಕಾಂತಾ ಜೆಡಿಯು ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಅ… ಗಣನೀಯ ರೀತಿಯಲ್ಲಿ ಮತ ಪಡೆದು ತಮ್ಮ ವರ್ಚಸ್ಸನ… ಸಾರಿದ್ದರು. ಇಂಥವರೂ ಈ ಸಲ ಗಪ್‌ಚುಪ್ ಕುಳಿತದ… ಜೆಡಿಎಸ್‌ನ ಕಾರ್ಯಕರ್ತರಲ್ಲಿ ತಳಮಳ ಉಂಟುಮಾಡಿ…

ಎಚ್ಕೆ ಗೆಲ್ಲುವ ಕುದುರೆಯಾಗಬಲ್ಲರೆ?

ಸತತವಾಗಿ ನಾಲ್ಕು ಬಾರಿ ಪಶ್ಚಿಮ ಪದವೀಧರ ಕ್ಷೇತ್ರದಿಂದ ಆಯ್ಕೆಗೊಂಡಿರುವ ಎಚ್ಕೆ ಪಾಟೀಲ್ ಐದನೇ ಬಾರಿ ಗೆಲುವು ಸಾಧಿಸಲು ಮತ್ತೆ ಕಣಕ್ಕಿಳಿದಿದ್ದಾರೆ. ಇವರ ವಿರುದ್ಧ ಲಿಂಗಾಯತ ಕೋಮಿನ ರಾಜ್ಯ ಬಾರ್ ಅಸೋಸಿಯೇಶನ್‌ನ ಸದಸ್ಯ ಮೋಹನ್ ಲಿಂಬಿಕಾಯಿ ಬಿಜೆಪಿಯಿಂದ ಸ್ಪರ್ಧಿಸುತ್ತಿದ್ದು ಎಚ್ಕೆಗೆ ತೊಡರುಗಾಲಾಗಲಿದ್ದಾರೆ.

ಈ ಕ್ಷೇತ್ರದಲ್ಲಿ ಒಟ್ಟು 67,000 ಮತದಾರರಿದ್ದು ಇನ್ನೂ ಏಳು ಸಾವಿರ ಮತಗಳು ಸೇರ್ಪಡೆಗೊಳ್ಳಲಿವೆ. ಇದರಲ್ಲಿ ಶೇ. 40 ಬ್ರಾಹ್ಮಣ, ಶೇ. 28 ಲಿಂಗಾಯತ, ಶೇ. 18 ಕುರುಬ ಹಾಗೂ ಶೇ. 14 ದಲಿತ ಮತಗಳಿದ್ದು ಬ್ರಾಹ್ಮಣ ಮತ್ತು ಲಿಂಗಾಯತ ಮತಗಳೇ ಇಲ್ಲಿ ನಿರ್ಣಾಯಕವಾಗಲಿವೆ.


ಈ ಕ್ಷೇತ್ರದಲ್ಲಿ ಧಾರವಾಡ ಜಿಲ್ಲೆಯ 27,000, ಕಾರವಾರ ಜಿಲ್ಲೆಯ 13,500, ಹಾವೇರಿ ಜಿಲ್ಲೆಯ 12,000, ಗದಗ ಜಿಲ್ಲೆಯ 14,000 ಮತಗಳು ಚಲಾವಣೆಯಾಗಲಿವೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 23 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ 17 ಜನ ಶಾಸಕರು ಹಾಗೂ ಮೂವರು ಸಂಸದರು ಇರುವುದು ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗಲಿದೆ.

ಕ್ಷೇತ್ರದಲ್ಲಿ ಅತ್ಯಧಿಕ ಮತದಾರರನ್ನು ಹೊಂದಿರುವ ಧಾರವಾಡ ಕ್ಷೇತ್ರದ ಪದವೀಧರರ ಒಲವು ಯಾರ ಕಡೆಗಿದೆ ಎಂಬುದು ಅಭ್ಯರ್ಥಿಗಳ ಹಣೆಬರಹವನ್ನು ಬರೆಯಲಿದೆ. "ಅತ್ಯಧಿಕ ಮತದಾರರನ್ನು ಹೊಂದಿರುವ ನಾವು ನಮ್ಮ ಜಿಲ್ಲೆಯವರನ್ನೇ ಆರಿಸಿ ಕಳಿಸೋಣ, ಎಚ್ಕೆ ಹೊರಗಿನ ಗದಗ ಜಿಲ್ಲೆಯವರು. ಧಾರವಾಡಕ್ಕೇನು ಮಾಡಿದ್ದಾರೆ? ಅದೂಅಲ್ಲದೇ ಅವರು ಲಿಂಗಾಯತ ಸಮುದಾಯದಲ್ಲಿಯೇ ರೆಡ್ಡಿ ಪಂಗಡಕ್ಕೆ ಸೇರಿದವರು" ಎಂಬ ಸೆಂಟಿಮೆಂಟುಗಳನ್ನು, ಜಾತಿಸಮೀಕರಣಗಳನ್ನು ಈಗಾಗಲೇ ಬಿಜೆಪಿ ಹರಿಬಿಟ್ಟಿದೆ. ಜೊತೆಗೆ ಮೊನ್ನೆ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಎಚ್ಕೆ ಸೋತಿರುವುದನ್ನೆ ನೆಪ ಮಾಡಿಕೊಂಡು 'ಅವರಿಗೆ ಜನಬೆಂಬಲವೇ ಇಲ್ಲ, ಈಗ ಹಿಂಬಾಗಿಲಿನ ದಾರಿ ಹಿಡಿದಿದ್ದಾರೆ' ಎಂದು ಬೆರಳು ಮಾಡಿ ತೋರಿಸುತ್ತಿದ್ದಾರೆ. ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಗಳನ್ನು ಗೆಲ್ಲಿಸುವುದಕ್ಕೆ ಹಣ ಸುರಿದಂತೆ ಈ ಬಾರಿ ಹಣ ವಿತರಣೆಗಾಗಿ ಎಬಿವಿಪಿ ಸಂಘಟನೆಯನ್ನು ಬಳಸಿಕೊಳ್ಳಲು ಬಿಜೆಪಿ ಮುಂದಾಗಿದೆ.

ಎಂದಿನಂತೆ ಕಾಂಗ್ರೆಸ್‌ನೊಳಗೆ ಆಂತರಿಕ ಕಚ್ಚಾಟ, ಕಾಲೆಳೆಯುವ ಸಂಪ್ರದಾಯ ಮುಂತಾದವುಗಳು ಈ ಚುನಾವಣೆಯಲ್ಲೂ ಮುಂದುವರೆಯಲಿವೆ. ಅಖಂಡ ಧಾರವಾಡ ಜಿಲ್ಲೆಗೆ ಎಚ್ಕೆ ಕೊಡುಗೆ ದೊಡ್ಡ ಪ್ರಮಾಣದಲ್ಲಿದ್ದರೂ, ಮುಂದಿನ ಸಿಎಂ ಎಂದು ಗುರುತಿಸಿಕೊಳ್ಳುತ್ತಿದ್ದರೂ ಕಾಂಗ್ರೆಸ್‌ನೊಳಗೆ ಒಂದು ಬಣ ಅವರಿಗೆ ಎದುರಾಗಿ ನಿಂತಿರುವುದು ಸುಳ್ಳೇನಲ್ಲ.

ಎಚ್ಕೆ ಏಕೆ ಅವಶ್ಯ?

ಎಚ್ಕೆ ಒಬ್ಬ ಸಜ್ಜನ ರಾಜಕಾರಣಿ. ಸಮಸ್ಯೆಗಳ ಬಗೆಹರಿಕೆಯಲ್ಲಿ ಪ್ರಾಮಾಣಿಕತೆ ಪ್ರದರ್ಶಿಸಬಲ್ಲ ವ್ಯಕ್ತಿ. ಕೇವಲ ಪದವೀಧರರಿಗೆ, ಧಾರವಾಡ ಜಿಲ್ಲೆಗೆ ಏನು ಮಾಡಿದ್ದಾರೆ ಎಂಬ ಪ್ರಶ್ನೆಗಿಂತ ಇಡೀ ರಾಜ್ಯಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆಂಬುದನ್ನು ಮತದಾರ ನೋಡಬೇಕು. ನೀರಾವರಿ, ಕಂದಾಯ, ಕಾನೂನು ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಬಲ್ಲ ಇಂತವರ ಆವಶ್ಯಕತೆ ನಾಡಿಗಿದೆ.



ಗ್ರಾಮೀಣ ಕೃಪಾಂಕ ಆಧಾರದಲ್ಲಿ 16,000 ಯುವಕರಿಗೆ ಉದ್ಯೋಗ ಒದಗಿಸಿದ ಎಚ್ಕೆ ವಿರುದ್ಧ ಮೇಲ್ಜಾತಿ ಯುವಕರಿಂದ ಕೋರ್ಟಿನಲ್ಲಿ ಕೇಸು ದಾಖಲಿಸಿದ್ದು ಇದೇ ಸಂಘಪರಿವಾರವೆ. ಆ ಸಮಯದಲ್ಲಿ ವಿಶೇಷ ಕಾನೂನು ರೂಪಿಸಿ ಉದ್ಯೋಗ ಪಡೆದುಕೊಂಡಿದ್ದ 16000 ಗ್ರಾಮೀಣ ಯುವಕರ ಜೊತೆಗೆ ಅರ್ಜಿ ಹಾಕಿದ್ದ 52 ಯುವಕರಿಗೆ ಉದ್ಯೋಗ ಕಾಯಂ ಮಾಡಿದ್ದು ಇದೇ ಎಚ್ಕೆ.

ಎಚ್ಕೆ ನಿರಾವರಿ ಇಲಾಖೆಯಲ್ಲಿದ್ದಾಗ ಭ್ರಷ್ಟ ಅಧಿಕಾರಿಗಳನ್ನು ವಜಾ ಮಾಡಿದಷ್ಟು ಬೇರಾವ ಮಂತ್ರಿಯೂ ಈತನಕ ಮಾಡಿಲ್ಲ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯ ಅಪರಾತಪರಾ ಬಯಲಿಗೆಳೆದಿದ್ದು, ಎಸ್.ಎಂ.ಕೃಷ್ಣ ಸಿಎಂ ಆಗಿದ್ದಾಗ ಕಳಸಾ ಬಂಡೂರಿ ನಾಲಾ ಯೋಜನೆಗೆ ಚಾಲನೆ ನೀಡಿದ್ದು, ಹುಬ್ಬಳ್ಳಿಯಲ್ಲಿ ಪ್ರತ್ಯೇಕ ಕಾನೂನು ವಿಶ್ವವಿದ್ಯಾಲಯ, ಧಾರವಾಡದಲ್ಲಿ ಹೈಕೋರ್ಟ್ ಪೀಠ, ಬೆಳಗಾಂನಲ್ಲಿ ಮಿನಿ ವಿಧಾನಸೌಧ ಜಾರಿ ಮಾಡಿದ್ದು, ನಂಜುಂಡಪ್ಪ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಶ್ರಮಿಸಿದ್ದು, 50 ಲಕ್ಷ ಜಮೀನನ್ನು ನೀರಾವರಿಮಯ ಮಾಡಿದ್ದು - ಹೀಗೆ ಹತ್ತು ಹಲವು ಪ್ರಗತಿಪರ ಕೆಲಸಗಳನ್ನು ಎಚ್ಕೆ ಮಾಡಿದ್ದು ಪದವೀಧರ ಕ್ಷೇತ್ರದಿಂದ ಆಯ್ಕೆಗೊಂಡಿದ್ದರಿಂದಲೇ.

ಇನ್ನೊಂದೆಡೆ ಸಂಘಪರಿವಾರವು ವಕೀಲರ ಸಂಘಗಳನ್ನು ಬಳಸಿಕೊಂಡು ಕುಂದಗೋಳ… ಹಾವೇರಿ, ಶಿಗ್ಗಾಂವ, ಸವಣೂರು ಮುಂತಾದೆಡೆಗಳಲ್ಲಿ ಸುತ್ತಾಡಿ ಹುಬ್ಬಳ್ಳಿ-ಧಾರವಾಡಗಳ ಮಧ್ಯದಲ್ಲಿ ಬರಬೇಕಿದ್ದ ಹೈಕೋರ್ಟ್ ಪೀಠವನ್ನು ಧಾರವಾಡಕ್ಕೆ ವರ್ಗಾಯಿಸಿದರು. ಅದಕ್ಕೆ ಎಚ್ಕೆಯೇ ಕಾರಣ ಎಂಬ ಗಾಳಿ ಸುದ್ದಿಗಳನ್ನು ಈಗ ಹಬ್ಬಿಸುತ್ತಿದ್ದಾರೆ.

ಈ ಮೊದಲೆಲ್ಲಾ ಎಚ್ಕೆಯನ್ನು ಬೆಂಬಲಿಸುತ್ತಿದ್ದ ಸುಮಾರು 600 ಮತದಾರರನ್ನು ಒಳಗೊಂಡಿರುವ ಹುಬ್ಬಳ್ಳಿ ಬಾರ್ ಅಸೋಸಿಯೇಶನ್ ಈಗ ಚೆಡ್ಡಿಗಳ ವಶಕ್ಕೆ ಹೋಗಿದೆ. ಎಚ್.ಆರ್.ಪಾಟೀಲ್ ಎಂಬ ಇದರ ಅಧ್ಯಕ್ಷ ಎಚ್ಕೆ ಮಾಡಿದ ಎಲ್ಲಾ ಉಪಕಾರಗಳನ್ನು ಮರೆತು ಈಗ ಪಕ್ಕಾ ಚೆಡ್ಡಿಯಂತಾಗಿರುವುದು ಮೋಹನ್ ಲಿಂಬಿಕಾಯಿ ಮೊಗದಲ್ಲಿ ನಗು ತಂದಿದೆ.

ಎಚ್ಕೆಯನ್ನು ಸೋಲಿಸಲು ಮತ್ತೆ ಗಣಿ ದುಡ… ಇಲ್ಲಿ ಹರಿದಾಡಲಾರಂಭಿಸಿದೆ. ಜಾತಿ ರಾಜಕಾರಣದ ಬದಲ… ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿಯಬೇಕಾದ ಕರ್ತ… ಪದವೀಧರರ ಮೇಲಿದೆ.

■ ವರದಿಗಾ…

ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಎಸ್.ಲೋಕೇಶ್ವರಪ್ಪ ಆತ್ಮವಿಶ್ವಾಸದಿಂದಲೇ ಪ್ರಚಾರ ನಡೆಸುತ್ತಿದ್ದು ಅಹಿಂದ ಸಮೀಕರಣದಲ್ಲಿ ವಿಶ್ವಾಸವಿಟ್ಟಿದ್ದಾರೆ. ಹೋದಲ್ಲಿ-ಬಂದಲ್ಲಿ ಪದವೀಧರರಲ್ಲಿ ಭರವಸೆ ಹುಟ್ಟಿಸುವ ರೀತಿಯಲ್ಲೇ ಮಾತನಾಡುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆಯವರಾದ ಲೋಕೇಶ್ವರಪ್ಪ ತಮ್ಮನ್ನು ಹಿಂದುಳಿದ ವರ್ಗಗಳ ಪ್ರಾತಿನಿಧ್ಯತ್ವಕ್ಕೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಡಾ. ಶಿವಯೋಗಿ ಸ್ವಾಮಿ, ಎಚ್.ಎಸ್. ಶಿವಶಂಕರ್ ಇಬ್ಬರನ್ನೂ ಬಲ್ಲವರು ಲೋಕೇಶ್ವರಪ್ಪ ಯಾಕಾಗಬಾರದು? ಎಂಬಂತಹ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದಾರೆ.

ಇದೇ ಚಿತ್ರದುರ್ಗ ತಾಲ್ಲೂಕಿನ ಮಾದನಾಯಕನಹಳ್ಳಿ ರಾಜಣ್ಣ ವೃತ್ತಿಯಲ್ಲೂ ಹೈಕೋರ್ಟ್ ವಕೀಲ. ಸಜ್ಜನಿಕೆಯೇ ಮೈವೆತ್ತಿರುವ ಈತ ನಿಜಕ್ಕೂ ಅರ್ಹ ಅಭ್ಯರ್ಥಿ. ಆದರೆ ರಾಜಣ್ಣನನ್ನು ಯಾಮಾರಿಸುವಂತಹವರೇ ಹೆಚ್ಚಾಗಿ ಆತನ ಹಿಂದೆ ತಿರುಗುತ್ತಿರುವುದು ಒಂದಿಷ್ಟು ಮುಜುಗರ ತರುವಂತದ್ದೇ.

ಉಳಿದಂತೆ ಚೌಡರೆಡ್ಡಿ, ಧನಪಾಲ್, ಮಲ್ಲಿಕಾರ್ಜುನ ತಂತಮ್ಮ ಶಕ್ತ್ಯಾನುಸಾರ ಮತ ಪಡೆಯಲಿದ್ದಾರೆ. , ಬಿ.ವಿ. ವಸಂತ್‌ಕುಮಾರ್ ಆಟಕ್ಕುಂಟು ಲೆಕ್ಕಕ್ಕಿಲ್ಲ. ನಿಜವಾದ ಸ್ಪರ್ಧೆ ಬಿಜೆಪಿ-ಜೆಡಿಎಸ್-ಕಾಂಗ್ರೆಸ್ ನಡುವೆ ಮಾತ್ರ. ■

ಈ ಎರಡೂ ಪಕ್ಷಗಳ ಆಂತರ್ಯದ ಗೊಂದಲವನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಿರುವ ಬಿಜೆಪಿಯ ಶಶೀಲ ನಮೋಶಿ ಮೂರನೆ ಬಾರಿ ವಿಧಾನ ಪರಿಷತ್ತಿನ ಶಿಕ್ಷಕರ ಮತಕ್ಷೇತ್ರದಲ್ಲಿ ಮಿಂಚಿನಂತೆ ಸಂಚರಿಸುತ್ತಿದ್ದಾರೆ. ಲಿಂಗಾಯತರೆ ಬಹುಸಂಖ್ಯಾತರಿರುವ (32 ತಾಲೂಕುಗಳನ್ನು ಒಳಗೊಂಡಿರುವ) ಈ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಲಿಂಗಾಯತರೆ ಆಗಿರುವ ಶಶಿಲ್ ನಮೋಶಿ ಅನಿವಾರ್ಯ ಆಯ್ಕೆಯಾಗುವ ಸಾಧ್ಯತೆಗಳು ಬಹಳಷ್ಟಿವೆ.

ಏಕೆಂದರೆ ಕಾಂಗ್ರೆಸ್‌ಗಳು ಅಣ್ಣಾರಾವ್ ಆಜಗೊಂಡ ಪರವಾಗಿ ಕೆಲಸ ಮಾಡಬೇಕೆಂದರೆ ಅದಕ್ಕೂ ದಿನಗಳಿಲ್ಲ. ಜೆಡಿಎಸ್ ಅಂತೂ ಚುನಾವಣೆಗೆ ಮೊದಲೆ ತನ್ನ ಸೋಲನ್ನು ಒಪ್ಪಿಕೊಂಡು ಕುಳಿತುಕೊಂಡಿದೆ. ಇದೆಲ್ಲದರಿಂದಾಗಿ ನಮೋಶಿ ಮತ್ತೆ ಆಯ್ಕೆಯಾಗುವ ಸಂಭವ ಇದೆ. ಬಿಜೆಪಿಯ ಅಜಂಡಾಗಳೇನೆ ಇದ್ದರೂ ಅದಕ್ಕೆ ಸಂಪೂರ್ಣ ಅಂಟಿಕೊಳ್ಳದ ನಮೋಶಿ ತನ್ನ ಹಿಂದಿನ ವರ್ಷಗಳ ಅವಧಿಯಲ್ಲಿ ಶಿಕ್ಷಕರ ಪರವಾಗಿ ಸರಕಾರದೊಂದಿಗೆ ವಾದಿಸಿ, ಹೋರಾಟ ಮಾಡಿ ಹಲವಾರು ಕಾರ್ಯಗಳನ್ನು ಕೈಗೊಂಡಿದ್ದಾರೆ. ಮತದಾರನಿಗೂ ಈಗ ಶಶಿಲ್ ನಮೋಶಿಯನ್ನು ಕೈ ಹಿಡಿಯಲೇ ಬೇಕಾಗಿರುವುದು ಅನಿವಾರ್ಯವಾಗಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ


ಯಾರು ಈ ಮೋಹನ್ ಲಿಂಬಿಕಾಯಿ?

ಈತ ಮೂಲತಃ ನವಲಗುಂದ ತಾಲ್ಲೂಕಿನ ಅಣ್ಣಿಗೇರಿ ಗ್ರಾಮದವನು. ದಿನಗೂಲಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರೊ.ಕೆ.ಎಸ್.ಶರ್ಮ ಅವರ ಶಿಷ್ಯ. ಶರ್ಮ ಕಟ್ಟಿದ ಸಂಘಗಳಿಗೆಲ್ಲ ಲಿಂಬಿಕಾಯಿಯೇ ವಕೀಲ. ಇವರಿಬ್ಬರೂ ಸೇರಿ ದಿನಗೂಲಿ ನೌಕರರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಿಂತ ದುಡ್ಡು ಮಾಡಿದ್ದೇ ಹೆಚ್ಚು. ಮಾಲಿಕರೊಂದಿಗೆ ಒಳಒಪ್ಪಂದಗಳನ್ನು ಮಾಡಿಕೊಂಡು ಅವರಿಂದ ದುಡ್ಡು ಕಿತ್ತು ಕಾರ್ಮಿಕರಿಗೆ ದ್ರೋಹವೆಸಗಿದ ಚರಿತ್ರೆಯೇ ಇವರಿಗಿದೆ.

ಯಾವಾಗ ದುಡ್ಡು ಬಂತೋ ತಾನೊಬ್ಬ ಕಾರ್ಮಿಕರ ಲಾಯರ್ ಎಂಬ ಬೋರ್ಡನ್ನು ಕೊರಳಿಗೆ ತಗುಲಿಹಾಕಿಕೊಂಡು ಹುಬ್ಬಳ್ಳಿ ಬಾರ್ ಅಸೋಸಿಯೇಶನ್‌ಗೆ ಲಗ್ಗೆಯಿಟ್ಟ. ಆಗ ಇದೇ ಬಾರ್ ಅಸೋಸಿಯೇಶನ್‌ನಲ್ಲಿ ಎನ್.ಆರ್.ಧಾರವಾಡಕರ್ ಎಂಬುವವರು ಅಧ್ಯಕ್ಷರಾಗಿದ್ದಾಗ ಇವನೇ ಕಾರ್ಯದರ್ಶಿಯಾಗಿ ಅಲ್ಲಿಯೂ ಬೇಕಾಬಿಟ್ಟಿ ಮೇಯ್ದು ದುಡ್ಡು ಕೈ ಹೊಲಸು ಮಾಡಿಕೊಂಡು ಅಲ್ಲಿಂದಲೂ ಹೊರದಬ್ಬಿಸಿಕೊಂಡಿದ್ದ. ಇದಾದಮೇಲೆ ಒಮ್ಮೆ ಕುಂದಗೋಳ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆಯಲು ಯತ್ನಿಸಿ ವಿಫಲನಾಗಿದ್ದ. ಈಗ ಅದೇ ಬಿಜೆಪಿ ಅವನಿಗೆ ಎಮ್ಮೆಲ್ಸಿಗಿರಿಗೆ ಮಣೆ ಹಾಕಿದೆ.

ಧಾರವಾಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಮೆಂಬರ್ ಆಗಿರುವ ಈತ ಅಲ್ಲಿ ಗೆಬರುತ್ತಿರುವ ಹಣ, ರಾಜ್ಯ ಬಾರ್ ಅಸೋಸಿಯೇಶನ್ ಸದಸ್ಯನಾಗಿ ಮೇಯುತ್ತಿರುವ ಹಣ ಎಲ್ಲವನ್ನೂ ಈ ಬಾರಿ ಚುನಾವಣೆಯಲ್ಲಿ ಚೆಲ್ಲಲಿದ್ದಾನೆ. ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಶಿಯಂಥವರು ಈತನ ಬೆನ್ನಿಗಿದ್ದಾರೆ. ■

ಅನಂತುಗೆ ಮತ್ತೊಂದು ಗೂಸ



ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಿದೆ. ಯಡ್ಡಿಯ ಗೆಲುವಿನ ಚೈತ್ರಯಾತ್ರೆಯನ್ನು ನೋಡಿ ಹೊಟ್ಟೆ ಉರಿದುಕೊಳ್ಳುತ್ತಿದ್ದ ಅನಂತು ಬಣ, "ನಾವಿನ್ನು ಹೀಗೆ ಸುಮ್ಮನಿದ್ದರೆ ನಾಶವಾದಂತೆ" ಎಂಬ ಸತ್ಯವನ್ನು ಅರಿತು ಧ್ವನಿ ಎತ್ತಲಾರಂಭಿಸಿದೆ.

ಟಿಕೆಟ್ ನೀಡುವಾಗ, ಸಚಿವರನ್ನು ನೇಮಿಸುವಾಗ, ಖಾತೆ ಹಂಚುವಾಗ ಅನಂತು ಬಣಕ್ಕೆ ಗೂಸಾ ನೀಡಿ, ಗೆದ್ದು ಬಂದಿದ್ದ ಯಡ್ಡಿ ರಾಜ್ಯಸಭಾ ಮತ್ತು ವಿಧಾನ ಪರಿಷತ್‌ಗೆ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗಲೂ ಅನಂತು ಮಾತನ್ನು ಕೇಳಿಲ್ಲ. ರಾಜ್ಯಾಧ್ಯಕ್ಷ ಸದಾನಂದ ಗೌಡನನ್ನು ಬಗಲಲ್ಲಿಟ್ಟುಕೊಂಡಿರುವ ಯಡ್ಡಿ ತಮ್ಮ ಬೆಂಬಲಿಗರನ್ನೇ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡುವ ಮೂಲಕ ಪಕ್ಷದಲ್ಲಿ ಮತ್ತೊಂದು 'ಜಯ'ಸಾಧಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆಗಾಗಿ ಶುಕ್ರವಾರ ತಮ್ಮ ನಿವಾಸದಲ್ಲಿ ಸಭೆ ನಡೆಸಿದ ಯಡ್ಡಿ, ಅನಂತುವನ್ನೂ ಕರೆದಿದ್ದರು. ಆದರೆ ಅವರ ಒಂದು ಮಾತನ್ನೂ ಯಡ್ಡಿ ಗ್ಯಾಂಗ್ ಕೇಳಲಿಲ್ಲ. ಅದಕ್ಕೆ ಬದಲಾಗಿ ಅವರ ದಿಕ್ಕು ತಪ್ಪಿಸುವ ಕೆಲಸವನ್ನೇ ಮಾಡಿತು. ಇದರಿಂದ ಸಿಟ್ಟಿಗೆದ್ದ ಅನಂತು "ನೀವು ಹೀಗೆ ಮಾಡುತ್ತಿರಿ, ನನಗೂ ಗೊತ್ತಿದೆ ನಿಮಗೆ ಹೇಗೆ ಪಾಠ ಕಲಿಸಬೇಕೆಂದು" ಎಂದು ಸದಾನಂದ ಗೌಡಗೆ ಬಹಿರಂಗವಾಗಿಯೇ ಆವಾಜ್ ಹಾಕಿ ಕಾರುಹತ್ತಿಕೊಂಡು ಹೋಗಿದ್ದಾರೆ. ಅನಂತುಗೆ ಈಗ ಎಷ್ಟು ಸಿಟ್ಟು ಬಂದಿದೆ ಎಂದರೆ ಯಡ್ಡಿಯ ವಿರುದ್ಧ ಇದ್ದ ಎಲ್ಲ ಶಾಸಕರನ್ನು ಸಂಪರ್ಕಿಸಿ, ಅವರನ್ನು ಸಂಘಟಿಸಲು ಆರಂಭಿಸಿದ್ದಾರೆ.

ರಾಜ್ಯಸಭೆಗೆ ತಮ್ಮ ಶಿವಮೊಗ್ಗೆಯವರೇ ಆದ ರಾಮಾ ಜೋಯ್ಸ್ ಎಂಬ ಪಕ್ಷದ ವಕೀಲನ ಹೆಸರನ್ನು ಯಡ್ಡಿ ಮೊದಲಿಗೆ ತೇಲಿ ಬಿಟ್ಟರು. ರಾಷ್ಟ್ರಮಟ್ಟದಲ್ಲಿಯೂ ಈ ಮನುಷ್ಯ ಚಿರಪರಿಚಿತನಾಗಿದ್ದರಿಂದ ಈತನ ಹೆಸರನ್ನು ವಿರೋಧಿಸಿ, ರಗಳೆ ಮಾಡಿಕೊಳ್ಳುವುದು ಬೇಡ ಎಂದು ಅನಂತು ಬಣ ಸುಮ್ಮನಾಯಿತು. ಇದಕ್ಕೆ ಪ್ರತಿಯಾಗಿ ಇನ್ನೊಂದು ಸ್ಥಾನಕ್ಕೆ ಆರ್‌ಎಸ್‌ಎಸ್‌ನಲ್ಲಿ ದುಡಿಯುತ್ತಿದ್ದ ಡಾ. ವಾಮನಾಚಾರ್ಯರ ಹೆಸರನ್ನು ಅದು ತೇಲಿಬಿಟ್ಟಿತು. ಆಚಾರ್ಯರನ್ನು ಬಿಟ್ಟು ಬೇರೆಯವರಿಗೆ ಟಿಕೆಟ್ ನೀಡುವುದು ಯಡ್ಡಿಗೆ ಕಷ್ಟವಾಗಬಹುದು ಎಂಬುದು ಅನಂತು ಬಣದ ಯೋಚನೆಯಾಗಿತ್ತು.

ಆದರೆ ಯಡ್ಡಿ ಬಣ ಅಂತಿಮ ಕ್ಷಣದಲ್ಲಿ ಇದಕ್ಕೆ ಪ್ರತಿತಂತ್ರವಾಗಿ ಬೆಳಗಾವಿಯ ಪ್ರಭಾಕರ ಕೋರೆಯ ಹೆಸರನ್ನು ಪ್ರಸ್ತಾಪಿಸಿದಾಗ ಸಹಜವಾಗಿಯೇ ಅನಂತುಗೆ ಬಾಯಿ ಇಲ್ಲದಂತಾಗಿಹೋಯಿತು. ತಮ್ಮ ಮಾತಿಗೆ ಸ್ವಲ್ಪವೂ ಬೆಲೆ ಸಿಗುತ್ತಿಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಸಿಟ್ಟು ನೆತ್ತಿಗೇರಿ, ಕೂಗಾಡಿಯೇ ಬಿಟ್ಟರು. ಆದರೆ ಆಗ ಕೂಲಾಗಿಯೇ ಇದ್ದ ಯಡ್ಡಿ ಇದ್ದ ಕೆಲಸವನ್ನೆಲ್ಲಾ ಬಿಟ್ಟು ಡೆಲ್ಲಿಗೆ ಹೋಗಿ, ಹೈಕಮಾಂಡ್ ಮುಂದೆ ಕಾರ್ಯಕ್ಕೆ ಬಾರದ ಆಚಾರ್ಯರನ್ನು ಬಿಟ್ಟು, ಉತ್ತರ ಕರ್ನಾಟಕದಲ್ಲಿ ಪಕ್ಷಕ್ಕೆ ಲಾಭ ತಂದುಕೊಡುವ ಕೋರೆಗೆ ಏಕೆ ಟಿಕೆಟ್ ನೀಡಬೇಕೆಂದು ವಿವರಿಸಿದರು. ಆಗ ಅನಂತುಗೆ ಎಣ್ಣೆ ಮುಖಮಾಡಿಕೊಂಡು 'ಹ್ಞುಂ' ಗುಡುವುದು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಆದರೆ ಪದೇ, ಪದೇ ಯಡ್ಡಿಯಿಂದ 'ಗೂಸ' ತಿನ್ನುತ್ತಿರುವ ತಾನು ಇನ್ನು ಮುಂದೆ ಸುಮ್ಮನಿದ್ದರೆ ದುರ್ಬಲ ನಾಯಕನಾಗಿ, ಯಡ್ಡಿ ಹೇಳಿದ ಮಾತನ್ನು ಕೇಳಿಕೊಂಡು ಬದುಕಬೇಕಾಗುತ್ತದೆ ಎಂದು ಅನಂತು ಇದ್ದ ನಾಲ್ಕು ಕೂದಲನ್ನು ಬಾಚಿಕೊಂಡು ಬಂಡಾಯದ ಕಹಳೆ ಊದಿದ್ದಾರೆ.

ಯಡ್ಡಿ ಬರೀ ಅನಂತು ಬಣಕ್ಕೆ ಮಾತ್ರವಲ್ಲ, ತಮ್ಮ ಹಿಂದೆ-ಮುಂದೆ ಓಡಾಡಿಕೊಂಡಿದ್ದ ಕೆಲವರಿಗೂ ಮೂಗಿನ ಮೇಲೆ ತುಪ್ಪಸವರಿ ಕೆಲಸಮಾಡಿಸಿಕೊಂಡು ದೂರ ತಳ್ಳಿದ್ದಾರೆ. ಉದ್ಯಮಿ ಕುಮಾರ್ ಮತ್ತು ಶಿಕ್ಷಣ ಸಂಸ್ಥೆಗಳ ರೂವಾರಿ ದೊರೆಸ್ವಾಮಿ ರಾಜ್ಯಸಭೆಯ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ದೊರೆಸ್ವಾಮಿಗಂತೂ ಟಿಕೆಟ್ ಕೊಡಿಸಿಯೇ ಸಿದ್ಧ ಎಂದು ಓಡಾಡಿಕೊಂಡಿದ್ದ ಸಚಿವ ಕಟ್ಟಾಗೆ ಯಡ್ಡಿ ಸರಿಯಾಗಿಯೇ ಕೈ ಕೊಟ್ಟಿದ್ದಾರೆ.

ವಿಧಾನಪರಿಷತ್ ಟಿಕೆಟ್ ಹಂಚುವಾಗಲೂ ಯಡ್ಡಿ ತಮ್ಮ ಬೆಂಬಲಿಗರನ್ನು ಹುಡುಕೀ, ಹುಡುಕೀ ಸೆಲೆಕ್ಟ್ ಮಾಡಿದ್ದಾರೆ. ಶೋಭಕ್ಕನ ಆತ್ಮೀಯಳೆಂಬ ಕಾರಣಕ್ಕೆ, ತಮ್ಮ ಜೊತೆಯೂ ಓಡಾಡಿಕೊಂಡಿದ್ದ ಭಾರತಿ ಶೆಟ್ಟಿಗೆ ಟಿಕೆಟ್ ನೀಡಲಾಗಿದೆ. ಕೇಂದ್ರದಲ್ಲಿ ಎನ್‌ಡಿಎ ಅಧಿಕಾರದಲ್ಲಿದ್ದಾಗ ಇದೇ ಭಾರತಿಗೆ ಕಾನೂನುಬಾಹಿರವಾಗಿ ನೀಡಲಾಗಿದ್ದ ಪೆಟ್ರೋಲ್ ಬಂಕ್‌ಅನ್ನು ಯಡ್ಡಿ ಕೊಡಿಸಿದ್ದರು. ಸೊರಬದಲ್ಲಿ ಪೆಟ್ರೋಲ್‌ಬಂಕ್ ಹೊಂದಿರುವ ಭಾರತಿ ಶೆಟ್ಟಿ, ಚುನಾವಣೆಯಲ್ಲಿ ಸಾಗರದಿಂದ ಕಣಕ್ಕಿಳಿಯಬೇಕೆಂದು ಹಪಹಪಿಸುತಿದ್ದರು. ಅವರಿಗೆ ಟಿಕೆಟ್ ಕೊಟ್ಟರೆ ವಿರೋಧ ಜಾಸ್ತಿಯಾಗುತ್ತದೆ ಎಂಬ ಕಾರಣಕ್ಕೆ ಸುಮ್ಮನಾಗಿದ್ದ ಯಡ್ಡಿ ಈಗ ಧೈರ್ಯಮಾಡಿದ್ದಾರೆ, ವಿಧಾನ ಪರಿಷತ್‌ನ ದಾರಿ ತೋರಿಸಿದ್ದಾರೆ.

ಅಭ್ಯರ್ಥಿಗಳ ಆಯ್ಕೆಮಾಡುವಾಗ ಆರ್‌ಎಸ್‌ಎಸ್ ಮಾತನ್ನೂ ತಳ್ಳಿ ಹಾಕಿ, ಅನಂತು ಬಣಕ್ಕೆ ಬೆಲೆ ನೀಡದ ಯಡ್ಡಿ ಗುಜರಾತ್‌ನ ಮೋದಿಯಂತೆ ಸರ್ವಾಧಿಕಾರಿಯಾಗಿ ಹೊರಟದ್ದಾರೆ.

ಅನಂತು ಕೇಶುಬಾಯ್ ಪಟೇಲ್ ಆಗಲಿದ್ದಾರೆಯೇ ಕಾದು ನೋಡಬೇಕು. ■

60 ಕೋಟಿ ತಿಂದೂ ಹೀಗೆಲ್ಲಾ ಬರೆಯೋದಾ!

ರೈತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ, ಇದಕ್ಕೆ ಪಶ್ಚಾತ್ತಾಪವೆಂಬಂತೆ ಹಾವೇರಿಯಲ್ಲಿ ರೈತನನ್ನೇ ಗುಂಡಿಟ್ಟು ಕೊಂದ ಮುಖ್ಯಮಂತ್ರಿ ಯಡ್ಡಿ ಕೊನೆಗೆ ರಾತ್ರಿಯಿಡೀ ನಿದ್ರೆ ಮಾಡಿಲ್ಲ ಎಂದಿದ್ದು, ಮೃತ ರೈತನ ಮನೆಗೆ ಹೋಗಿ ಗಳಗಳನೆ ಅತ್ತಿದ್ದು ಎಲ್ಲ ನೋಡಿ ನಿಮಗೆ ಪಾಪ ಅನ್ನಿಸಿರಲಿಕ್ಕೆ ಸಾಕು.


ಆದರೆ ಇದು ಯಡ್ಡಿಯ ನಿಜವಾದ ಮುಖವಲ್ಲ. ಆತನಿಗೆ ಇನ್ನೊಂದು ಮುಖವಿದೆ. ಇದರ ದರ್ಶನ ಮಾಡಿಕೊಂಡಿರುವ ಬಿಜೆಪಿಯ ಅನಂತು ಬಣ ಈಗ ಕುಂಡಿ ಸುಟ್ಟ ಬೆಕ್ಕಿನಂತೆ ವಿಲವಿಲ ಒದ್ದಾಡುತ್ತಿದೆ. ಹೊಸ ವಿಷಯವೇನೆಂದರೆ ಯಡ್ಡಿಯ ಈ ಮುಖದ ದರ್ಶನ ಈಗ ಕೆಲ ಪತ್ರಕರ್ತರಿಗೂ ಆಗಿದೆ.

ರೈತನ ಹತ್ಯೆ ನಡೆಸಿದ ಯಡ್ಡಿಯನ್ನು ಕೆಲ ದಿನ ಪತ್ರಿಕೆಗಳಂತೂ ಸರಿಯಾಗಿಯೇ ತರಾಟೆಗೆ ತೆಗೆದುಕೊಂಡಿವೆ. ರೈತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿ ರೈತನನ್ನೇ ಕೊಂದ ಸಿಎಂ ಎಂಬ ಅರ್ಥದಲ್ಲಿ ಒಂದಿಷ್ಟು ವರದಿಗಳನ್ನು ಪ್ರಕಟಿಸಿವೆ. ಟಿವಿ ಚಾನಲ್‌ಗಳಂತೂ ಪ್ರತಿಭಟನೆ ನಡೆಸುತ್ತಿದ್ದ ರೈತರನ್ನು ವಿನಾಕಾರಣ ಹೇಗೆ ಪೊಲೀಸರು ಥಳಿಸಿದರು, ಗುಂಡಿಟ್ಟು ಕೊಂದರು ಎಂಬುದನ್ನು ಹಸಿಹಸಿಯಾಗಿ ತೋರಿಸಿ ಸರ್ಕಾರಕ್ಕೆ ಉತ್ತರವೇ ನೀಡಲಾಗದಂತೆ ಬಾಯಿಕಟ್ಟಿವೆ. ಇದರಿಂದ ಬೆಚ್ಚಿಬಿದ್ದ ಯಡ್ಡಿ ಬಾಯಿಯಿಂದ ಸತ್ಯದ ಮಾತುಗಳು ಹೊರಬಿದ್ದಿವೆ!

ಅಂದು ಏನಾಯಿತೆಂದರೆ ರೈತನನ್ನು ಕೊಂದ ಯಡ್ಡಿ ಏನು ಹೇಳುತ್ತಾರೆ ಎಂದು ಕೇಳಲು ಪತ್ರಕರ್ತರು ಮುಗಿಬಿದ್ದಿದ್ದರು. ಇದನ್ನು ಗಮನಿಸಿದ ಯಡ್ಡಿ ತಮ್ಮ ಜೊತೆಯಲ್ಲಿದ್ದ ಅಧಿಕಾರಿಗಳಿಗೆ ಹೇಳಿದ್ದೇನು ಗೊತ್ತೇ? "ನಮ್ಮದು ಗುಜರಾತ್ ಮಾದರಿಯ ಸರ್ಕಾರ. ಬಾಯಿಗೆ ಬಂದ ಹಾಗೆ ಬರೆಯುವ ಪತ್ರಕರ್ತರು ನಮಗೆ ಬೇಡ, ಅವರನ್ನು ಹತ್ತಿರ ಸೇರಿಸಬೇಡಿ, ಕಳಿಸಿ ದೂರ..." ಎಂದರು.

ಯಡ್ಡಿ ಹೇಳಿದ ಈ ಮಾತನ್ನು ಕೇಳಿದ ಪತ್ರಕರ್ತರು ಕಂಗಾಲಾಗಿ ಹೋದರು. ಅಭಿವೃದ್ಧಿಯ ವಿಷಯದಲ್ಲಿ ಮಾತ್ರ ಗುಜರಾತ್ ಮಾದರಿ ಅನುಸರಿಸುವುದಾಗಿ ಹೇಳಿಕೊಳ್ಳುತ್ತಿದ್ದ ಯಡ್ಡಿ ಇದ್ದಕ್ಕಿದ್ದಹಾಗೆ ನರೇಂದ್ರ ಮೋದಿ ಅವತಾರವೆತ್ತಂತೆ ವರ್ತಿಸಿದ್ದನ್ನು ನೋಡಿ ಬೆಚ್ಚಿಬಿದ್ದರು.

ಇದೇ ಆಘಾತದಲ್ಲಿ ಕೆಲ ಪತ್ರಕರ್ತರು 'ಯಡಿಯೂರಪ್ಪ ಹಿಂಗಂದರಂತೆ ಸರೀನಾ?'' ಎಂದು ಯಡ್ಡಿಯ ಸುತ್ತಾಮುತ್ತಾ ಓಡಾಡಿಕೊಂಡಿರುವ ಪಕ್ಷದ ಮುಖಂಡರನ್ನು ಕೇಳಿದರು.



"ಹ್ಞುಂ ಕಂಡ್ರಿ, ಚುನಾವಣೆ ಟೈಮಲ್ಲಿ ರಾಜ್ಯಾದ್ಯಂತ ಪೇಪರ್‌ನೋರಿಗೆ ಪಕ್ಷ ಸುರಿದಿದ್ದು ಸುಮಾರು 60 ಕೋಟಿ ರೂ. ಅಷ್ಟು ದುಡ್ಡು ತಿಂದೂ ಹಿಂಗೆಲ್ಲಾ ಬರೆದ್ರೆ ಸಾಹೇಬ್ರಿಗೆ ಸಿಟ್ಟು ಬರದೇ ಇರುತ್ತಾ?'' ಎಂದು ಈ ಮುಖಂಡರು ಪತ್ರಕರ್ತರನ್ನೇ ಮರಳಿ ಪ್ರಶ್ನಿಸಿದರು. ಪ್ರಶ್ನೆ ಕೇಳಿದ ಪತ್ರಕರ್ತರು ಸುಸ್ತೋಸುಸ್ತು.

ಗುಜರಾತ್‌ನಲ್ಲಿ ನರೇಂದ್ರ ಮೋದಿ ಮಾಡುತ್ತಿರುವುದೇನು ಎಂಬುದು ಎಲ್ಲರಿಗೂ ಗೊತ್ತಿದೆ. ತಮ್ಮನ್ನು ಟೀಕಿಸುವ ಪತ್ರಿಕೆಗಳ, ಪತ್ರಕರ್ತರ ಕುತ್ತಿಗೆ ಹಿಸುಕುತ್ತಾ 'ಹಿಟ್ಲರ್' ಆಡಳಿತ ನಡೆಸುತ್ತಿರುವ ಮೋದಿ ಈಗ ಕರ್ನಾಟಕದಲ್ಲಿಯೂ 'ಜನ್ಮ' ತಾಳಿದ್ದಾನೆ ಎಂಬುದು ಕೆಲ ಪತ್ರಕರ್ತರಿಗೆ ಈಗ ಅರಿವಾಗಿದೆ. ಈಗಲೇ ಈ 'ಮೋದಿ'ಯನ್ನು ಮಟ್ಟಹಾಕದಿದ್ದಲ್ಲಿ, ಪತ್ರಕರ್ತರು ಕೆಲಸ ಬಿಟ್ಟು ಯಡ್ಡಿಯ ಹೊಗಳುಭಟರಾಗಬೇಕಾಗುತ್ತದೆ ಅಷ್ಟೇ.

ಯಾರಿಗೆ ಕೊಟ್ಟರು 60 ಕೋಟಿ?

ಈ ಬಾರಿಯ ಚುನಾವಣೆಯಲ್ಲಿ ಅದ್ದೂರಿ ಪ್ರಚಾರಕ್ಕೆ ಚುನಾವಣಾ ಆಯೋಗ ತಡೆ ಒಡ್ಡಿದ್ದರಿಂದ ರಾಜಕೀಯ ಪಕ್ಷಗಳೆಲ್ಲ ಪ್ರಚಾರ ನೀಡುವಂತೆ ಮಾಧ್ಯಮಗಳಿಗೆ ಮುಗಿಬಿದ್ದಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಬಿಜೆಪಿ ಮಾಧ್ಯಮಗಳನ್ನು ಒಲಿಸಿಕೊಳ್ಳಲು ಹೆಚ್ಚು ಕಡಿಮೆ 60 ಕೋಟಿ ರೂ. ಖರ್ಚುಮಾಡಿದೆ ಎಂಬುದನ್ನು ಪಕ್ಷದ ನಾಯಕರೇ ಒಪ್ಪಿಕೊಂಡಿದ್ದಾರೆ.

ಈ ಹಣವನ್ನು ಯಾರಿಗೆ, ಹೇಗೆ ಹಂಚಲಾಗಿದೆ? ಯಾವ ಪತ್ರಕರ್ತರು ಎಷ್ಟು ತಿಂದರು ಎಂಬೆಲ್ಲಾ ಬಗ್ಗೆ ಪತ್ರಕರ್ತರ ವಲಯದಲ್ಲಿ ಈಗ 'ಬಿಸಿಬಿಸಿ' ಚರ್ಚೆ ನಡೆಯುತ್ತಿದೆ.

ಚುನಾವಣೆಗೂ ಮುನ್ನ ರಾಜ್ಯಮಟ್ಟದ ದಿನಪತ್ರಿಕೆಗಳ ಪ್ರತಿನಿಧಿಗಳಿಗೆ, ಟಿವಿ ಚಾನಲ್‌ಗಳ ವರದಿಗಾರರಿಗೆ ದೆಹಲಿಯಾತ್ರೆ ಏರ್ಪಡಿಸಿದ್ದ ಬಿಜೆಪಿ ತಲಾ ಒಬ್ಬರಿಗೆ 2 ಲಕ್ಷ ರೂ.ನಂತೆ ಕೊಟ್ಟಿದೆಯಂತೆ. ಇದನ್ನು ಪ್ರಸಾದದಂತೆ ಸ್ವೀಕರಿಸಿದ ಪತ್ರಕರ್ತರು ಯಡ್ಡಿಯನ್ನು ಮತ್ತು ಬಿಜೆಪಿಯನ್ನು ಹಾಡಿಹೊಗಳಿದ್ದು ಕಣ್ಣಿಗೆ ರಾಚುವಂತಿತ್ತು. ಇನ್ನು ಯಡ್ಡಿಯೇ ತಮ್ಮನ್ನೇ 'ಮುಖ್ಯಮಂತ್ರಿ' ಎಂದು ಬಿಂಬಿಸುವಂತೆ ತಮಗೆ ಗೊತ್ತಿರುವ ಪತ್ರಕರ್ತರಿಗೆಲ್ಲ ಅವಲತ್ತು ಕೊಂಡು ಒಂದು, ಎರಡು ಲಕ್ಷ ರೂ. ಕೊಟ್ಟಿದ್ದರು. ಜಿಲ್ಲಾ ಮಟ್ಟದಲ್ಲಿನ ಕೆಲ ಪತ್ರಕರ್ತರಂತೂ ಚುನಾವಣೆ ಸಂದರ್ಭ ದಲ್ಲಿ 'ಹಬ್ಬ' ಆಚರಿಸಿದರು. ಯಾರು, ಯಾವ ಕೈಯಲ್ಲಿ ಕೊಟ್ಟರೂ ಬೇಡ ವೆನ್ನದೆ ಜೇಬಿಗಿಳಿಸಿಕೊಂಡರು. ಪತ್ರಕರ್ತರನ್ನು 'ಚೆನ್ನಾಗಿ ನೋಡಿಕೊಳ್ಳಿ' ಎಂದು ಬಿಜೆಪಿಯ ಚುನಾವಣಾ ಕಾರ್ಯತಂತ್ರದಲ್ಲಿಯೇ ಹೇಳಲಾಗಿದ್ದರಿಂದ ರಾಜ್ಯದ ಮೂಲೆ, ಮೂಲೆಯಲ್ಲಿಯೂ ಭ್ರಷ್ಟ ಮಾಧ್ಯಮದ ಮಂದಿಯತ್ತ ಹಣದ ಹೊಳೆಯೇ ಹರಿದಿತ್ತು.

"ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿ ದ್ದಾಗ ಪತ್ರಕರ್ತರಿಗೆ ಕಾರ್ ಮತ್ತು ಸೈಟುಗಳನ್ನು ಹಂಚಿ ಭ್ರಷ್ಟರನ್ನಾಗಿಸಿದ್ದರು. ಈ ಬಾರಿ ಚುನಾವಣೆ ಸಂದರ್ಭದಲ್ಲಿಯೇ ಆ ಕೆಲಸವನ್ನು ಬಿಜೆಪಿ ವ್ಯವಸ್ಥಿತವಾಗಿ ಮಾಡಿದೆ. ಚುನಾವಣೆಗೆ ಮುನ್ನ ಲಡಕಾಸಿ ದ್ವಿಚಕ್ರ ವಾಹನಗಳನ್ನು ಹೊಂದಿದ್ದ ಅದೆಷ್ಟೋ ಪತ್ರಕರ್ತರು ಚುನಾವಣೆಗಳು ಮುಗಿಯುವ ಮುನ್ನ ಜೂಮ್ ಅಂತ ಹೊಸ ಕಾರ್‌ಗಳಲ್ಲಿ ಓಡಾಡುತ್ತಿದ್ದರು. ಈಗ ಅದೇ ಬಿಜೆಪಿ ಎಂಜಲು ತಿಂದ ಪತ್ರಕರ್ತರಿಗೆ ಯಡ್ಡಿಯನ್ನು ಹಾಡಿ ಹೊಗಳುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲ" ಎಂದು ರಾಜಧಾನಿಯ ಕೆಲ ಪತ್ರಕರ್ತರು ಮಾತನಾಡಿಕೊಳ್ಳುತ್ತಿದ್ದಾರೆ. ದುಡ್ಡು ಕೊಟ್ಟ ಬಿಜೆಪಿ ಅಧಿಕಾರ ಹಿಡಿದಿದೆ. ಎಂಜಲು ತಿಂದ ಪತ್ರಕರ್ತರು ಯಡ್ಡಿಯಿಂದ ಬೈಸಿಕೊಂಡರೂ ತೆಪ್ಪಗಿದ್ದಾರೆ.

ಇವರ ದೃಷ್ಟಿ ಬದುಕೀಗ ನಾಯಿಪಾಡು. ಪಾಪ! ■

ನಿಮಿಶಾಂಬ ದೇವಿಯ ಆಧುನಿಕ ಅವತಾರ ಎಂದು ಹೇಳಿಕೊಳ್ಳುವ ಇವನು ಒಬ್ಬ ಜುಜುಬಿ ಸಿವಿಲ್ ಇಂಜಿನಿಯರ್. ಅಸಲಿಗೆ ಅದನ್ನು ಪೂರ್ತಿ ಮಾಡದೆ ಮೈಸೂರಿನಲ್ಲಿ ಹಡಬೆ ತಿರುಗುತ್ತಾ ಕೊನೆಗೆ ಬೆಂಗಳೂರಿನಲ್ಲಿ ತೇಲಿಕೊಂಡಿದ್ದ. ರಾಜರಾಜೇಶ್ವರಿ ನಗರದಲ್ಲಿ ಒಂದು ದೇವಸ್ಥಾನ, ಟ್ರಸ್ಟ್, ಐಷಾರಾಮಿ ಬಂಗಲೆ ಹೊಂದಿದ್ದ ಹರ್ಷ ಅಲಿಯಾಸ್ ನಿಮಿಶಾನಂದ ಗುರೂಜಿಗೆ ಈಗ ಒಂದಾದಮೇಲೊಂದರಂತೆ ಏಟುಗಳು ಬೀಳತೊಡಗಿವೆ.

ನಿಮಿಶಾನಂದ ಗುರೂಜಿಯ ನಿಗೂಢ ದಂಧೆಗಳು



ದಿಢೀರೆಂದು ಗುರೂಜಿ ಸ್ವಾಮಿಗಳಾಗುವವರ ಹಿನ್ನೆಲೆ, ಚಟುವಟಿಕೆಗಳನ್ನು ಕೆದಕುತ್ತಾ ಹೋದರೆ ನಾನಾ ತರಹದ ದಂಧೆಕೋರರ ನಂಬಲಸಾಧ್ಯ ನೆಟ್‌ವರ್ಕ್‌ಗಳು ಗೋಚರಿಸುತ್ತವೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ನಿಮಿಶಾನಂದ ಗುರೂಜಿಯೂ ಅಂಥವರಲ್ಲೊಬ್ಬ. ತಾನೇ ನಿಮಿಶಾಂಬ ದೇವಿಯ ಆಧುನಿಕ ಅವತಾರ ಎಂದು ಹೇಳಿಕೊಳ್ಳುವ ಇವನು ಒಬ್ಬ ಜುಜುಬಿ ಸಿವಿಲ್ ಇಂಜಿನಿಯರ್. ಅಸಲಿಗೆ ಅದನ್ನು ಪೂರ್ತಿ ಮಾಡದೆ ಮೈಸೂರಿನಲ್ಲಿ ಹಡಬೆ ತಿರುಗುತ್ತಾ ಕೊನೆಗೆ ಬೆಂಗಳೂರಿನಲ್ಲಿ ತೇಲಿಕೊಂಡಿದ್ದ. ರಾಜರಾಜೇಶ್ವರಿ ನಗರದಲ್ಲಿ ಒಂದು ದೇವಸ್ಥಾನ, ಟ್ರಸ್ಟ್, ಐಷಾರಾಮಿ ಬಂಗಲೆ ಹೊಂದಿದ್ದ ಹರ್ಷ ಅಲಿಯಾಸ್ ನಿಮಿಶಾನಂದ ಗುರೂಜಿಗೆ ಈಗ ಒಂದಾದಮೇಲೊಂದರಂತೆ ಏಟುಗಳು ಬೀಳತೊಡಗಿವೆ.

ಎಂದಿನಂತೆ ಹೆಣ್ಣು ಹಾಗೂ ಹಣವೇ ಈ ವಿವಾದಕ್ಕೆ ಕಾರಣ.

ಅಂದಹಾಗೆ ಈಗ ಈ ಹರ್ಷ ಗುರೂಜಿಯ ಬೆಂಬಲಕ್ಕೆ ನಿಂತಿರುವವರು ಯಾರು ಗೊತ್ತೆ?

ನಿಮಿಶಾ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ ಎಂಬ ಬಹುರಾಷ್ಟ್ರೀಯ ಕಂಪನಿ! ಆಯಿಲ್ ಅಂಡ್ ಗ್ಯಾಸ್, ಪಾಮ್ ಆಯಿಲ್ ಬ್ಯುಸಿನೆಸ್, ಕಬ್ಬಿಣ ಅದಿರು ರಫ್ತು, ಕಲ್ಲಿದ್ದಲು ಆಮದು ಹಾಗೂ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಕೋಟ್ಯಾಧೀಶರ ಗುಂಪೊಂದು ಈಗ ನಿಮಿಶಾನಂದ ಗುರುವಿನ ಬೆಂಬಲಕ್ಕೆ ನಿಂತುಬಿಟ್ಟಿದೆ.

ಈ ಗುಂಪಿನ ವಿರುದ್ಧ ಜಗಳಕ್ಕೆ ಬಿದ್ದಿರುವುದು ಕೃಷ್ಣನ್ ನಂಬೂದರಿ ಎಂಬಾತ. ಮೈಸೂರು ರಸ್ತೆಯ ಜಾನ್ ಡಿಸ್ಟಿಲ್ಲರಿ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಇದೇ ಕೃಷ್ಣನ್‌ರವರೇ ನೆಲೆಯಿರದೆ ಅಂಡಲೆಯುತ್ತಿದ್ದ ಹರ್ಷ ಗುರೂಜಿಗೆ ಒಂದು ಜಾಗ ನೀಡಿ, ದೇವಾಲಯ ಕಟ್ಟಿಸಿ ಪ್ರಮೋಟ್ ಮಾಡಿದಾತ.

ಅಂದಹಾಗೆ ಈಗ ನೂರಾರು ಕೋಟಿ ವ್ಯವಹಾರ ನಡೆಸುತ್ತಿರುವ ನಿಮಿಷಾ ಕಾರ್ಪೊರೇಷನ್‌ನಲ್ಲಿ ಈ ಕೃಷ್ಣನ್‌ರ ಮಗಳು ಸೌಮ್ಯ ಕೃಷ್ಣನ್ ಎಂಬಾಕೆ ಕೂಡ ಪಾರ್ಟ್‌ನರ್ ಆಗಿದ್ದಾಳೆ! ಜೊತೆಗೆ ಸುಂದರೇಶ್, ಎಸ್. ವಿಜಯಕುಮಾರ್ ಎಂಬ ಕೋಟ್ಯಾಧೀಶರೂ ಪಾಲುದಾರರಾಗಿದ್ದಾರೆ.

ವ್ಯವಹಾರದಲ್ಲಿ ಈ ಪಾರ್ಟ್‌ನರ್‌ಗಳ ನಡುವೆ ಶುರುವಾದ ವಿವಾದವೇ ಈಗಿನ ಹಗರಣ ಸ್ಫೋಟಗೊಳ್ಳಲು ಮೂಲಕಾರಣ.

ಹರ್ಷ ವಿ. ಶಾಸ್ತ್ರಿ ಎಂಬ ಹೆಸರಿನ ವ್ಯಕ್ತಿ ನಿಮಿಶಾನಂದ ಸ್ವಾಮಿಯಾದದ್ದೇ ಒಂದು ದೊಡ್ಡ ಕತೆ. ಇಂಜಿನಿಯರಿಂಗ್ ಓದನ್ನು ಅರ್ಧಕ್ಕೆ ನಿಲ್ಲಿಸಿ ಸಿವಿಲ್ ಕಂಟ್ರಾಕ್ಟರ್ ಆಗಿದ್ದ ಹರ್ಷ 1990 ರ ಸುಮಾರಿಗೆ ಪ್ರಭಾವತಿ ಕನಸ್ಟ್ರಕ್ಷನ್ ಎಂಬ ದಂಧೆ ಪ್ರಾರಂಭಿಸಿ ಮೈಸೂರಿನ ಹತ್ತಾರು ಜನರಿಗೆ ನಾಮಹಾಕಿ, ಸಾಲ ನೀಡಿದ್ದ ಮೈಸೂರು ಬ್ಯಾಂಕಿಗೂ ಕೈಎತ್ತಿ 2000 ಇಸವಿಯಲ್ಲಿ ಊರು ಬಿಟ್ಟು ಪರಾರಿಯಾಗಿದ್ದ.

ಕೆಲಕಾಲದ ನಂತರ ಮತ್ತೆ ಮೈಸೂರಲ್ಲಿ ಕಾಣಿಸಿಕೊಳ್ಳುವಷ್ಟರಲ್ಲಿ ತಾನು ನಿಮಿಶಾಂಬ ದೇವಿಯ ಅವತಾರ ಎಂದು ಹೇಳಿಕೊಂಡ. ಕುವೆಂಪುನಗರದ ಲಲಿತಾದ್ರಿ ರಸ್ತೆಯಲ್ಲಿ ಮನೆ ಬಾಡಿಗೆ ಪಡೆದು ತನ್ನ ವಶೀಕರಣ ವಿದ್ಯೆ ಚಾಲು ಮಾಡಿದ. ಮೈಸೂರಿನ ಪೆದ್ದು ಶ್ರೀಮಂತರು, ಬ್ಯಾಂಕ್ ನೌಕರರು, ಕೈಗಾರಿಕೋದ್ಯಮಿಗಳು ಇವನ ಗಿರಾಕಿಗಳಾದರು.

ನಂತರ ಮೈಸೂರಿನ ಒಡನಾಡಿ ಸಂಸ್ಥೆ ಹೆಸರಲ್ಲಿ ಹಣ ಎತ್ತಲು ಹೋಗಿ ಸಿಕ್ಕಿಬಿದ್ದ. ಅದು ಪೊಲೀಸ್ ಕೇಸ್ ಆದಾಗ ಮೈಸೂರು ಬಿಟ್ಟು ಬೆಂಗಳೂರಿಗೆ ಪರಾರಿಯಾಗಿದ್ದ.



ಕೃಷ್ಣನ್ ನಂಬೂದರಿ ಎಂಟ್ರಿಯಾದದ್ದು ಆಗಲೇ.

ಕೃಷ್ಣನರ ಮನೆಯ ಕೆಳ ಮಹಡಿಯಲ್ಲೇ ಝಂಡಾ ಊರಿದ ಹರ್ಷ ತನ್ನ ಹೆಸರನ್ನು ಬರೀ 'ಗುರೂಜಿ' ಮಾಡಿಕೊಂಡ. ಪ್ರವಚನ ಶುರುವಿಟ್ಟುಕೊಂಡ. ಇವನ ಪ್ರವಚನದ ಶೈಲಿ ಹೇಗಿರುತ್ತಿದ್ದೆಂದರೆ

'ಶ್ರೀರಾಮನು ಕಾಡಿಗೆ ಪೋದ'

'ಕೈಕೆಯಿ ದಶರಥನ ಸ್ಪೆಷಿ'

'ಭಾರತನು ಕಾಡಿಗೆ ಹೋಗಿ ರಾಮನ ಎಕ್ಕಡ ತಲೆ ಮೇಲೆ ಮಡೀಕೊಂಡು ಬಂದ'

ಈ ರೀತಿಯ ಪೋರ್ಕಿ ಭಾಷೆಯ ಲೆವೆಲ್ ಇವನದು.

ಆಶ್ಚರ್ಯವೆಂದರೆ ಜನ ಇದನ್ನು ತಲೆದೂಗಿ ಕೇಳುತ್ತಿದ್ದರು. ಈ ಗುರೂಜಿ ರಾಜರಾಜೇಶ್ವರಿ ನಗರದಲ್ಲಿ ನೆಲೆಯೂರಲು ಕರುನಾಡ ಹೆಸರಲ್ಲಿ ದಂಧೆ ನಡೆಸುತ್ತಿರುವ ಕೆಲವು ಸ್ಥಳೀಯ ವಂಚಕರ ಬೆಂಬಲವೂ ಸಿಕ್ಕಿತ್ತು. ನೋಡನೋಡುತ್ತಿದ್ದಂತೆ ನಿಮಿಶಾಂಬ ದೇವಿ ದೇವಸ್ಥಾನ, 6 ಜನರ ಟ್ರಸ್ಟ್, ನಿತ್ಯ ಅನ್ನದಾನಗಳೆಲ್ಲಾ ಶುರುವಾದವು. ಮತ್ತೊಂದೆಡೆ ನಿಮಿಶಾ ಕಾರ್ಪೊರೇಷನ್‌ನ ಬಹುಕೋಟಿ ವ್ಯವಹಾರವು ಮೈದುಂಬಿಕೊಳ್ಳತೊಡಗಿತು. ಗುರೂಜಿ ಆಪ್ತವಲಯದ ಜನರೇ ಇವರ ಪಾಲುದಾರರಾಗಿದ್ದು ಇವರಿಗೆ ಮಲೇಷಿಯಾದಲ್ಲೂ ಕಾರ್ಪೊರೇಟ್ ಕಚೇರಿ ಇದೆ.

ಕೌಲಾಲಂಪೂರ್‌ನ suite 17.2.16, OG Court, Jalan Awan Jawa 58200 ವಿಳಾಸದ ಈ ಶಾಖಾ ಕಚೇರಿ ಬೆಂಗಳೂರಿನ ರಾಜರಾಜೇಶ್ವರಿ ನಗರದ ಐಡಿಯಲ್ ಹೋಂ ಟೌನ್‌ಶಿಪ್‌ನ ನಂಬರ್ 466/8 15 ನೇ ಕ್ರಾಸಿನೊಂದಿಗೆ ನೇರ ಸಂಪರ್ಕ ಹೊಂದಿದೆ.

ಕಬ್ಬಿಣದ ಅದಿರು ರಫ್ತು ಕಲ್ಲಿದ್ದಲು ಆಮದಿನ ವ್ಯವಹಾರ ನಡೆಸುತ್ತಿರುವುದಾಗಿ ಇವರು ಹೇಳಿಕೊಳ್ಳುತ್ತಿದ್ದಾರಾದರೂ ಜೊತೆಗೆ ಇವರಿಗೆ ರಿಯಲ್ ಎಸ್ಟೇಟ್ ದಂಧೆಗಳಿವೆ.

ಸಿಂಪಲ್ಲಾಗಿ ಹೇಳಬೇಕೆಂದರೆ ಕಪ್ಪು ಹಣವನ್ನು ವೈಟ್ ಮಾಡಿಕೊಳ್ಳಲಿಕ್ಕೆ ಇವರಿಗೆಲ್ಲಾ ಒಂದು ಟ್ರಸ್ಟ್ ಬೇಕಿತ್ತು. ದೇವಸ್ಥಾನ ನಿರ್ಮಾಣ, ಧಾರ್ಮಿಕ ಕಾರ್ಯ, ಅನ್ನದಾನದ ಹೆಸರಿನಲ್ಲಿ ಅವೆಲ್ಲಾ ಸುಲಭ ಸಾಧ್ಯ.

ನಿಮಿಶಾನಂದ ಗುರೂಜಿಗೂ ಇಂತಹ ಕೋಟ್ಯಾಧೀಶ ಭಕ್ತರೇ ಬೇಕಿತ್ತು.

ಹಾಲಿ ನಿಮಿಶಾಂಬದೇವಿ ಟ್ರಸ್ಟ್‌ನಲ್ಲಿ ಒಟ್ಟು 6 ಸದಸ್ಯರಿದ್ದಾರೆ ಅವರ ಪೈಕಿ ನಾಲ್ವರು ಈಗ ಗುರೂಜಿ ಜೊತೆಗಿದ್ದಾರೆ. ಕೃಷ್ಣನ್ ಮತ್ತವರ ಪತ್ನಿ ಇನ್ನೊಂದು ಗುಂಪಾಗಿ ಕದನಕ್ಕಿಳಿದಿದ್ದಾರೆ.

ಇನ್‌ಕಂ ಟ್ಯಾಕ್ಸ್ ಇಲಾಖೆ ಹಾಗೂ ನಿಮಿಶಾ ಕಾರ್ಪೊರೇಷನ್ ನಡುವಿನ ಲಿಂಕ್ ಏನೆಂದು ಶೋಧಿಸಿದರೆ ಈ ವಿವಾದದ ಅಸಲಿ ಸ್ವರೂಪ ಹೊರಬೀಳುತ್ತದೆ.

■ ಬಿಳಿದಾಳೆ ಈಶ



ಗುರೂಜಿ ಕೃಷ್ಣಲೀಲೆ

ಮೊದಲಿನಿಂದಲೂ ಐಷಾರಾಮಿ ಜೀವನ ಶೈಲಿಗೆ ಒಗ್ಗಿಹೋಗಿರುವ ನಿಮಿಶಾನಂದ ಗುರೂಜಿಗೆ ತನ್ನ ಕೈಯಳತೆಯೊಳಗೆ ಕಾರ್, ಬಂಗಲೆ ಹಾಗೂ ಸುಂದರ ಹುಡುಗಿಯರು ಇರಲೇಬೇಕು.

ಒಬ್ಬ ಸ್ವಾಮೀಜಿಗೆ 'ಜೈ' ಅನ್ನುವ ಭಕ್ತರನ್ನು ನೀವು ನೋಡಿರುತ್ತೀರಿ. ಆದರೆ ಹತ್ತಾರು ಚೆಂದದ ಹುಡುಗಿಯರು ಸುತ್ತಾ ನಿಂತು `I love you' ಅನ್ನಿಸಿಕೊಳ್ಳುವ ಗುರುವನ್ನು ಖಂಡಿತಾ ನೋಡಿರಲಾರಿರಿ.

ಈ ನಿಮಿಶಾನಂದನಿಗೆ ಆ ಗೀಳೂ ಇದೆ.

ಈ ಸುಂದರಿಯರ ಪೈಕಿ ರೂಪಾ, ಮೇಘಲಾ ಹಾಗೂ ಸವಿತಾ ಗುರೂಜಿಯ ಖಾಸಾ ಸೇವಕಿಯರು. ತನ್ನ ಬಳಿಗೆ ಬಂದ ಕೆಲ ಮಹಿಳೆಯರನ್ನು ಲೈಂಗಿಕವಾಗಿಯೂ ಇವನು ಶೋಷಿಸಿದ್ದಾನೆ. ಆದರೆ ಇದನ್ನೆಲ್ಲಾ ಹೇಳಿಕೊಳ್ಳಲಾಗದೆ ಬಹುತೇಕ ಜನ ಸಂಕಟಪಡುತ್ತಿದ್ದಾರೆ.

ಅಂದಹಾಗೆ ಕೃಷ್ಣನ್ ಈಗ ತಮ್ಮ ಮನೆಯಿಂದ ಗುರೂಜಿಯನ್ನು ಒದ್ದು ಹೊರಹಾಕಿದ್ದಾರೆ.

ಗುರೂಜಿ ಈಗ ಎಲ್ಲಿದ್ದಾನೆ ಗೊತ್ತೆ? ರಾಜರಾಜೇಶ್ವರಿ ನಗರದಲ್ಲೇ ಇರುವ ನಿಮಿಶಾ ಕಾರ್ಪೊರೇಷನ್‌ನವರ ಗೆಸ್ಟ್ ಹೌಸಿನಲ್ಲಿ!

ಬ್ಯಾಂಕ್ ನೌಕರರ ನೆರವು

ಹರ್ಷ ಗುರೂಜಿ ಪದೇಪದೇ ಫಾರಿನ್ ಟೂರ್ ಹೊಡೆಯುತ್ತಿರುತ್ತಾನೆ. ಕೇಂದ್ರ ಸರ್ಕಾರದಿಂದ FERA ಕಾಯ್ದೆ ಅನುಮತಿ ಇರದಿದ್ದಾಗಲೂ ವಿದೇಶಗಳಿಂದ ಲಕ್ಷಾಂತರ ರೂಪಾಯಿ ಡೊನೇಷನ್ ತರಿಸಿ ಕ್ಯಾಷ್ ಮಾಡಿಸಿಕೊಂಡಿದ್ದಾನೆ.

ಇದು ಸಾಧ್ಯವಾಗಿದ್ದು ಮೈಸೂರಿನ ಕೆಲ ಬ್ಯಾಂಕ್ ಅಧಿಕಾರಿಗಳ ಸಹಾಯದಿಂದ.

ಉದಾಹರಣೆಗೆ ವಿಜಯ ಬ್ಯಾಂಕಿನ ಗೋಕುಲಂ ಶಾಖೆಯ ಚಂದ್ರಶೇಖರ್ ಹರ್ಷನ ಟ್ರಸ್ಟ್ ಮೆಂಬರ್ ಆಗಿದ್ದ. ಇವನ ಹೆಂಡತಿ ಹೇಮಾ ನಳಿನಿ ಜಯಲಕ್ಷ್ಮೀಪುರಂನ ಕೆನರಾ ಬ್ಯಾಂಕ್‌ನಲ್ಲಿದ್ದಾಳೆ. ಒಮ್ಮೆ ಹರ್ಷ ಇವಳ ಹೆಸರಿಗೆ 60 ಸಾವಿರ ರೂ. ಚೆಕ್ ನೀಡಿ ಕ್ಯಾಷ್ ಮಾಡಿಸಿಕೊಂಡಿದ್ದ. ಮದ್ದೂರಿನ ಸೋಮನಹಳ್ಳಿಯ ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಎನ್.ಕೆ. ಮೂರ್ತಿಯ ಹೆಂಡತಿ ಕೆ.ಎಸ್. ಜಯಶ್ರೀ ಎಂಬುವಳು ಆಗೆಲ್ಲಾ ಹರ್ಷ ಗುರೂಜಿಯ ಬಹುತೇಕ ಚೆಕ್‌ಗಳಿಗೆ ತಾನೇ ಸಹಿ ಮಾಡುತ್ತಿದ್ದಳು. ಅದೇ ರೀತಿ ಬೆಂಗಳೂರಿನ ಜೆ.ಸಿ. ರಸ್ತೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಕೆ.ಸಿ. ಕುಮಾರ್ ಎಂಬಾತನು ಅಕ್ರಮ ವಿದೇಶಿ ಹಣ ಹರ್ಷ ಗುರೂಜಿ ಕೈಗೆ ತಲುಪಿಸಲು ಅನೇಕ ರೀತಿ ನೆರವಾಗಿದ್ದಾರೆ.

ಒಡನಾಡಿಗೂ ವಂಚನೆ



ಮೈಸೂರಿನ ಜನಾದರಣೀಯ ಸ್ವಯಂಸೇವಾ ಸಂಸ್ಥೆ ಒಡನಾಡಿ, ಹೆಸರಲ್ಲೂ ಹರ್ಷ ಗುರೂಜಿ ಲಕ್ಷಾಂತರ ರೂಪಾಯಿ ದೇಣಿಗೆ ಎತ್ತಿ ನುಂಗಿ ಹಾಕಿದ್ದಾನೆ. ಒಡನಾಡಿಯ ಚಟುವಟಿಕೆಗಳನ್ನೆಲ್ಲಾ ತನ್ನ ಬೆಂಬಲದ ಕೆಲಸಗಳೆಂಬಂತೆ ವಿದೇಶಗಳಲ್ಲಿ ಬಿಂಬಿಸಿ ಲಕ್ಷಾಂತರ ರೂಪಾಯಿ ಸಂಗ್ರಹಿಸಿದ್ದ ಹರ್ಷ ಸಿಕ್ಕಿಬಿದ್ದು ಕೊನೆಗೆ ಅದೇ ಕಾರಣಕ್ಕೆ ಮೈಸೂರಿನಿಂದ ಪರಾರಿಯಾಗಿದ್ದ.

ಮಲೇಷಿಯಾದ ಬ್ಯಾಂಕ್ ಆಫ್ ಕಾಮರ್ಸ್‌ನಿಂದ 1999 ಡಿಸೆಂಬರ್ 10 ರ ದಿನಾಂಕದ 541453 ನಂಬರ್‌ನ ಚೆಕ್ ಒಂದು ಒಡನಾಡಿ ಸಂಸ್ಥೆಗೆ ದೇಣಿಗೆ ರೂಪದಲ್ಲಿ ಬಂದಿತ್ತು. ಆದರೆ 26 ಸಾವಿರ ರೂ.ನ ಆ ಚೆಕ್ ಅನ್ನು ಹರ್ಷ ಲಪಟಾಯಿಸಿ ತಾನೇ ಕ್ಯಾಷ್ ಮಾಡಿಸಿಕೊಳ್ಳಲು ಹೋಗಿ ಸಿಕ್ಕಿಹಾಕಿಕೊಂಡಿದ್ದ.

ಆದರೆ ಕೆಲ ಅವಿವೇಕಿಗಳಿಗೆ ಇದರಲ್ಲಿ ಒಡನಾಡಿಯ ಸ್ಟ್ಯಾನ್ಲಿ-ಪರಶುರಾಮರದ್ದೇ ತಪ್ಪು ಕಾಣಿಸುತ್ತಿರುವುದು ನಗು ಬರಿಸುವಂತಿದೆ.

ಮಂಗಳೂರು ಪೊಲೀಸರ ಚರಿತ್ರೆ ಗಮನಿಸಿದರೆ ಅವರಿಗೆ ಕೊಲೆ ಆರಾಮದಾಯಕ ಕೆಲಸ. ಮೂಲ್ಕಿ, ರಫೀಕ್ ಮತ್ತಿತರ ನಕಲಿ ಎನ್‌ಕೌಂಟರ್ ಘಟನೆಗಳೇ ಇದಕ್ಕೆ ಸಾಕ್ಷಿ.

ಅತುಲ್ ಸೆರೆ ಸಿಕ್ಕಿದ್ದಾನೆಂದು ಶನಿವಾರ ಹೇಳಿಕೊಂಡ ಪೊಲೀಸರು ಭಾನುವಾರ ರಾತ್ರಿಯಾದರೂ ಅವನು ಎಲ್ಲಿದ್ದಾನೆಂದು ಬಾಯಿಬಿಟ್ಟಿಲ್ಲ, ಕೋರ್ಟಿಗೂ ಹಾಜರ್ ಪಡಿಸಿಲ್ಲ.

ರಘುಪತಿ ಭಟ್ಟನ ಬ್ಯುಸಿನೆಸ್ ಪಾರ್ಟನರ್ ಆಗಿರುವ ಅತುಲ್ ಉಡುಪಿ ಜಿಲ್ಲಾ ಪಂಚಾಯತಿಯಲ್ಲಿ ಸ್ಟೋರ್‌ಕೀಪರ್ ಆಗಿದ್ದಾನೆ. ಆದರೆ ಶ್ರೀಮಂತ. ಭಟ್ಟನ ಉಡುಪಿಯ ಹಿರಣ್ಯ ಫೈನಾನ್ಸ್, ದಾವಣಗೆರೆಯ ಫೈನಾನ್ಸ್ ವ್ಯವಹಾರ, ಬೆಂಗಳೂರಿನ ಕಾರ್ಖಾನೆ ಹಾಗೂ ಮೈಸೂರಿನ ಮರಳು ಮಾರಾಟ ವ್ಯಾಪಾರದಲ್ಲೂ ಅತುಲ್ ಪಾಲುದಾರನಾಗಿದ್ದಾನೆ.

ಇವೆಲ್ಲಾ ಹತ್ತಾರು ಕೋಟಿಯ ವ್ಯವಹಾರ.

ಅತುಲ್‌ಗೆ ಪದ್ಮಪ್ರಿಯಾರ ಜೊತೆ ಪ್ರೇಮ ಸಂಬಂಧವಿದ್ದದ್ದು ಭಟ್ಟರಿಗೂ ಗೊತ್ತಿತ್ತು. ಭಟ್ಟರ ಕುಟುಂಬದ ಆಪ್ತರೇ 'ಲಂಕೇಶ್'ಗೆ ಹೇಳಿದ ಪ್ರಕಾರ ಚುನಾವಣೆಗೂ ಮುನ್ನ ಸ್ವತಃ ಪದ್ಮ ಭಟ್ಟರ ಬಳಿ ತನಗೆ ಡೈವೋರ್ಸ್ ಬೇಕೆಂದು ಕೇಳಿದ್ದರಂತೆ. ಜೊತೆಗೆ ತಾನು ಅತುಲ್ ಜೊತೆ ಬದುಕುತ್ತೇನೆಂತಲೂ ನೇರವಾಗಿ, ದಿಟ್ಟತನದಿಂದ ತಿಳಿಸಿಯೂ ಇದ್ದರಂತೆ. ಆದರೆ ಭಟ್ಟ ಮತ್ತವನ ಪಟಾಲಂ "ಈಗ ಎಲೆಕ್ಷನ್ ಬಂದಿದೆ, ಈಗ ಏನು ನಿರ್ಧಾರ ಮಾಡಬೇಡ, ಆಮೇಲೆ ಮಾತಾಡೋಣ" ಅಂದಿದ್ದಾರೆ. ತನ್ನ ಬದುಕು ಹಾಗೂ ಪ್ರೇಮಿಯ ಬಗ್ಗೆ ಪದ್ಮ ಹೀಗೆ ಪ್ರಾಮಾಣಿಕವಾಗೇ ಎಲ್ಲಾ ಹೇಳಿಕೊಂಡ ಮೇಲೆ "ಅತುಲ್‌ಗೆ ಮಾತ್ರ ಯಾವುದೇ ತೊಂದರೆ ಮಾಡಬೇಡಿ" ಅಂತಲೂ ಬೇಡಿಕೊಂಡಿದ್ದರು.

ಆದರೆ ಈಗೇನಾಗಿದೆ ನೋಡಿ. ಪದ್ಮ ನಿಗೂಢವಾಗಿ ಸತ್ತಿದ್ದಾರೆ ಅತುಲ್ ಪೊಲೀಸರ ವಶದಲ್ಲಿದ್ದರೂ ಇಲ್ಲಾ ಎನ್ನುತ್ತಿದ್ದಾರೆ ಮಂಗಳೂರು ಪೊಲೀಸರು.

ಹಾಗೆಂದರೆ ಅತುಲ್ ಬದುಕುಳಿಯುವುದು ಕಷ್ಟಸಾಧ್ಯ?

ಇದು ನಮ್ಮ ಪ್ರಾಮಾಣಿಕ ಅನುಮಾನ.



ಪದ್ಮಪ್ರಿಯಾ ಕೊಲೆಯಾಗಿದ್ದಾರೆ!

ಎರಡು ಮುದ್ದು ಮಕ್ಕಳ ತಾಯಿ, ಈಗಿನ್ನು 33 ವರ್ಷದಲ್ಲಿದ್ದ ಓರ್ವ ಅಮಾಯಕ ಗೃಹಿಣಿಯ ಬದುಕು ಹೀಗೆ ಭರ್ಬರವಾಗಿ ಅಂತ್ಯಗೊಳ್ಳುವಂತೆ ಮಂಗಳೂರು-ಉಡುಪಿ ಪೊಲೀಸರು ಹಾಗೂ ಶಾಸಕ ರಘುಪತಿ ಭಟ್ಟ ನೇರ ಕೈವಾಡ ನಡೆಸಿರುವುದು ಮೇಲ್ನೋಟಕ್ಕೆ ಗೊತ್ತಾಗುವಂತಿದೆ.

ದೂರದ ದೆಹಲಿಯ ದ್ವಾರಕಾ ಏರಿಯಾದ ಕ್ಷಮಾ ಅಪಾರ್ಟ್‌ಮೆಂಟಿನ ಮೊದಲನೇ ಮಹಡಿಯ ರೂಂ ನಂಬರ್ 20ರಲ್ಲಿ ಭಾನುವಾರ ಸಂಜೆ 6.40 ಕ್ಕೆ ಪದ್ಮಪ್ರಿಯ ದೇಹ ಸೀಲಿಂಗ್ ಫ್ಯಾನ್‌ನಿಂದ ನೇತಾಡುತ್ತಿದ್ದುದನ್ನು ನೋಡಿದೆವೆಂದು ದೆಹಲಿ ಪೊಲೀಸರು ಹೇಳುತ್ತಿದ್ದಾರೆ.



ಆದರೆ ಮತ್ತೊಂದೆಡೆ

"ಶುಕ್ರವಾರ ಬೆಳಗಿನ ಜಾವ ನಾಲ್ಕು ಗಂಟೆಗೆ ನಾನು ಪದ್ಮಪ್ರಿಯರನ್ನು ಮುರುಡೇಶ್ವರದಲ್ಲಿ ಪತ್ತೆಹಚ್ಚಿ ಐಜಿಪಿ ಪ್ರಸಾದ್ ಬಳಿಗೆ ತಲುಪಿಸಿದ್ದೇನೆ." ಎಂದು ಉಡುಪಿ ಡಿವೈಎಸ್‌ಪಿ ಎಂ.ಬಿ. ನಾಗರಾಜ್ ಕೆಲ ಪತ್ರಕರ್ತರ ಬಳಿ ಹೆಮ್ಮೆಯಿಂದ ಹೇಳಿಕೊಂಡಿದ್ದರು!

ಇದು ನಿಜವಾದರೆ ಶುಕ್ರವಾರ ಬೆಳಗಿನ ಜಾವ ಮಂಗಳೂರು ಸಮೀಪವೇ ಪತ್ತೆಯಾಗಿದ್ದ ಪದ್ಮ ಶನಿವಾರ ದೆಹಲಿಗೆ ಹೋದರೇಕೆ?

ಆಕೆಯ ಬೆನ್ನ ಹಿಂದೆಯೇ ಅಂದರೆ ಶನಿವಾರ ರಾತ್ರಿಯೇ ಶಾಸಕ ರಘುಪತಿ ಭಟ್, ಮತ್ತಿತರರೂ ರಹಸ್ಯವಾಗಿ ದೆಹಲಿಗೆ ಹೋಗಿದ್ದೇಕೆ?


ನಾಲಾಯಕ್ ಗೃಹಮಂತ್ರಿ

ಹಾಗಾದರೆ ದೆಹಲಿಯಲ್ಲಿ ಪದ್ಮ ಹಾಗೂ ಭಟ್ ನಡುವೆ ಏನು ನಡೆಯಿತು?

ಗೃಹ ಸಚಿವ ವಿ.ಎಸ್. ಆಚಾರ್ಯ ಶನಿವಾರ ಸಂಜೆ ಮಾಧ್ಯಮಗಳೊಂದಿಗೆ ಮಾತನಾಡಿ "ಪದ್ಮ ಸಿಕ್ಕಿದ್ದಾರೆ, ಎಲ್ಲವೂ ಸದ್ಯದಲ್ಲೇ ಸುಖಾಂತ್ಯ ಕಾಣುತ್ತದೆ"ಎಂದವರು ನಂತರ ಪ್ಲೇಟ್ ಬದಲಾಯಿಸಿ ಆಕೆ ತಪ್ಪಿಸಿಕೊಂಡಿದ್ದಾಳೆ. ಶೋಧನಾ ಕಾರ್ಯ ಮುಂದುವರೆದಿದೆ ಇದೊಂದು ಅರ್ಧ ಕಿಡ್ನ್ಯಾಪ್ ಪ್ರಕರಣ"ಎಂದು ಸುಳ್ಳು ಹೇಳಿದ್ದೇಕೆ?

ಈಗ ಪೊಲೀಸರ ವಶದಲ್ಲಿರುವ ಅತುಲ್ ರಾವ್ ಬಗ್ಗೆ ಪೊಲೀಸರು ಏನನ್ನೂ ಹೇಳುತ್ತಿಲ್ಲ ಏಕೆ? ಬಂಧಿಸಿ 24 ಗಂಟೆ ಕಳೆದ ಮೇಲೂ ಆತನನ್ನು ಕೋರ್ಟಿಗೆ ಹಾಜರುಪಡಿಸದಿರುವುದರ ಅರ್ಥ ಏನು?

ಅತುಲ್ ಜೀವಂತವಾಗಿದ್ದಾನಾ, ಇಲ್ಲವಾ?

-ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಬೇಕಾದ ಯಡ್ಡಿ ಸರ್ಕಾರ ಏನೇನೂ ನಡೆದಿಲ್ಲವೆಂಬಂತೆ ನಟಿಸುತ್ತಿದೆ.

ಕರ್ನಾಟಕದಲ್ಲಿ ಬಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಡೆದಿರುವ ಪ್ರಥಮ ವ್ಯವಸ್ಥಿತ ಕೊಲೆ ಇದು. ಕಳೆದ ವಾರ ಹಾವೇರಿಯಲ್ಲಿ ಮುಗ್ಧ ರೈತರ ಮೇಲೆ ಗುಂಡು ಹಾರಿಸಿ ಒಬ್ಬನನ್ನು ಬಲಿ ತೆಗೆದುಕೊಂಡ ಚಡ್ಡಿಗಳು ಇದೇ ಭಾನುವಾರ ಚಿತ್ರದುರ್ಗದಲ್ಲಿ ಇಸ್ಪೀಟ್ ಆಡುತ್ತಿದ್ದನೆಂದು ಆರೋಪಿಸಿ ಇನ್ನೊಬ್ಬನನ್ನು ಬಡಿದು ಕೊಂದಿದ್ದಾರೆ.

ಈ ಘಟನೆಗಳ ನೆನಪು ಮಾಸುವ ಮುನ್ನವೇ ಬಜೆಪಿ ಶಾಸಕನ ಪತ್ನಿಯೇ ಈಗ ನಿಗೂಢವಾಗಿ ಸತ್ತಿದ್ದಾರೆ.

ಪತ್ತೆ ಮತ್ತೆ ನಾಪತ್ತೆ

ಹೇಳಿಕೇಳಿ ಇದೊಂದು ಅಪ್ಪಟ ಕೌಟುಂಬಿಕ ಕಲಹ. ಈ ರಘುಪತಿ ಭಟ್ಟ ಓರ್ವ ಶಾಸಕನೇ ಇರಬಹುದು, ಆದರೆ ಮಹಾನ್ ಕಚ್ಚೆಹರುಕನೆಂದೇ ಕುಖ್ಯಾತಿ ಪಡೆದಿರುವನು. ಇವನ ಹರುಬೇ ಬುದ್ಧಿ ನೋಡಿ, ಜಗಳಾಡಿ ರೋಸಿ ಹೋಗಿದ್ದ ಪದ್ಮಪ್ರಿಯ ಕೊನೆಗೊಂದು ಅಂತಿಮ ತೀರ್ಮಾನ ಮಾಡಿ ಜೂನ್ 11 ರಂದು ಮನೆ ತ್ಯಜಿಸಿದರು.

ತಾನು ಖಾಯಂ ಆಗಿ ಕಣ್ಮರೆಯಾಗಿದ್ದೇನೆಂದೇ ಪ್ರಚಾರವಾಗಿಬಿಡಲಿ, ನಂತರ ಹೊಸ ಬದುಕೊಂದನ್ನು ಕಟ್ಟಿಕೊಂಡರಾಯಿತೆಂಬ ಆಕೆಯ ನಿರ್ಧಾರ ಈ ನಾಪತ್ತೆ ಪ್ರಕರಣದ ಮುಖ್ಯ ತಿರುಳಾಗಿದೆ. ಆದರೆ ಅಂತಹ ಕಿಡ್ನ್ಯಾಪ್ ಅಥವಾ ಮಿಸ್ಸಿಂಗ್ ಸೀನ್ ಸೃಷ್ಟಿಸುವಲ್ಲಿ ಆಕೆ ವಿಫಲರಾದರು. ಇದಾದ ನಾಲ್ಕು ದಿನಗಳ ನಂತರ ಪದ್ಮ ಪತ್ತೆಯಾಗಿ ಪೊಲೀಸರು 'ಅಬ್ಬಾ' ಎನ್ನುವಷ್ಟರಲ್ಲೇ ಅವರಿಗೆ ಮತ್ತೊಂದು ತಲೆನೋವು ಕಾದಿತ್ತು.

"ನಾನು ಕಿಡ್ನ್ಯಾಪ್ ಆಗಲಿಲ್ಲ, ನಾನು ಗಂಡನ ಮನೆಗೆ ಹಿಂದಿರುಗುವುದಿಲ್ಲ, ನನಗೆ ಡೈವೋರ್ಸ್ ಬೇಕು. ನಾನೀ ಅತುಲ್ ರಾವ್ ಇದ್ದೇನೆ" ಎಂದು ಪೊಲೀಸರಿಗೆ ಹೇಳಿದ್ದಾರೆ ಈಕೆ. ಮತ್ತೊಂದೆಡೆ ಈ ಭಟ್ಟ "ಪದ್ಮ ಮನೆಗೆ ಬರೋದು ಬೇಡ, ಡೈವೋರ್ಸ್ ಕೊಟ್ಟುಬಿಡ್ತಿನಿ" ಅಂತ ಸಂದೇಶ ಕಳಿಸಿದ್ದಾನೆ.

ಅವರಿಗೆ ಪದ್ಮ ಎಲ್ಲಿದ್ದಾರೆಂಬುದು ಶುಕ್ರವಾರದ ವೇಳೆಗೆ ಖಚಿತವಾಗಿ ಗೊತ್ತಾಗಿತ್ತು. 'ಲಂಕೇಶ್'ಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ ಬುಧವಾರ ಮನೆಯಿಂದ ಹೊರಟ ಪದ್ಮ ಕಾರನ್ನು ಕುಂಜಾರುಗಿರಿ ಬಳಿ ಬಿಟ್ಟು ಬೇರೊಂದು ಗಾಡಿಯಲ್ಲಿ ಕುಮಟಾಗೆ ಹೋಗಿ ಅಲ್ಲಿಂದ ಗೋವಾ ಸೇರಿ ಸೀದಾ ದೆಹಲಿಗೆ ವಿಮಾನ ಹತ್ತಿದ್ದಾರೆ. ಆಕೆ ಹೀಗೆ ಮನೆ ಬಿಡುವ ತೀರ್ಮಾನ ಮಾಡುವ ಮೊದಲು ಕೇವಲ 10 ದಿನಗಳ ಹಿಂದೆ ಭಟ್ಟನ ಮನೆಯಲ್ಲಿ ಅವನ ಹಾದರದ ಬಗ್ಗೆ ಜಗಳವಾಗಿತ್ತು, ಆಗ ಸ್ಥಳೀಯ ಹಿರಿಯ RSS ನಾಯಕ ವಿ.ಎಸ್. ಕೂಡಗಿ ಮಧ್ಯಸ್ಥಿಕೆವಹಿಸಿ ರಾಜಿ ಮಾಡಿಸಿದ್ದರು. ಅದಾದ ಮೇಲೂ ಪದ್ಮರ ನೋವು ಶಮಾನವಾಗಲಿಲ್ಲ. ಆಕೆ ಮನೆ ಬಿಡುವ ನಿರ್ಧಾರ ಮಾಡೇಬಿಟ್ಟರು.

ಮೊದಮೊದಲು ಪೊಲೀಸರು ಇದು ನಕ್ಸಲರ ಕೃತ್ಯ, ಅಪಹರಣ ಸಂಚು ಕೊಲೆ ಎಂದೆಲ್ಲಾ ಬೇಜವಾಬ್ದಾರಿ ಹೇಳಿಕೆ ಕೊಟ್ಟು ಕೊನೆಗೆ ಪದ್ಮರ ಇರುವಿಕೆ ತಿಳಿದಮೇಲೂ ಆಕೆಯನ್ನು ಜೀವಂತವಾಗಿ ಕರೆತರುವಲ್ಲಿ ವಿಫಲರಾಗಿದ್ದಾರೆ.

ಈ ಪ್ರಕರಣದ ಸಾರಾಂಶ ಇಷ್ಟೆ. ಭಟ್ಟರಿಗೆ ಹಾಗೂ ಪೊಲೀಸರಿಗೆ ಪದ್ಮಪ್ರಿಯರ ಸಾವು ಬೇಕಾಗಿತ್ತು. ಆಕೆ ಜೀವಂತವಾಗಿ ವಾಪಸ್ ಬಂದಿದ್ದರೂ ತಾನು ಕಿಡ್ನ್ಯಾಪ್ ಆದನೆಂದು ಒಪ್ಪಿಕೊಳ್ಳುತ್ತಿರಲಿಲ್ಲ. ಆಕೆ ಒಪ್ಪದೆ ಪೊಲೀಸರು ಅತುಲ್ ಮೇಲೆ ಕಿಡ್‌ನ್ಯಾಪ್ ಕೇಸ್ ಹಾಕಲು ಸಾಧ್ಯವಿರಲಿಲ್ಲ.

ಮತ್ತೊಂದೆಡೆ ಭಟ್ಟರಿಗೆ ತನ್ನ ಹೆಂಡತಿ ಮನೆಬಿಟ್ಟು ಓಡಿದಳೆಂಬ ಅವಮಾನ ಕಾಡುತ್ತಿತ್ತು, ಅದು ಬಿಜೆಪಿ ಪಕ್ಷಕ್ಕೂ ಮುಖಭಂಗ ತರುತ್ತಿತ್ತು. ಇನ್ನು ಮುಖ್ಯವಾಗಿ ತನ್ನ ಬ್ಯುಸಿನೆಸ್ ಪಾರ್ಟನರ್ ಅತುಲ್‌ನ ಹತ್ತಾರು ಕೋಟಿ ಹಣ ಭಟ್ಟರ ಬಳಿ ಇದೆ. ಇವೆಲ್ಲವನ್ನೂ ನಿವಾರಿಸಿಕೊಳ್ಳಬೇಕಿದ್ದರೆ ಪದ್ಮ ಸಾಯಬೇಕಿತ್ತು.

ಹಾಗಾಗಿ ಈ ಪ್ರಕರಣದ ಮೊದಲ ದುರಂತ ತಾರ್ಕಿಕ ಅಂತ್ಯವಾಗಿ ಪದ್ಮಾರ ಸಾವು ಸಂಭವಿಸಿದೆ. ಅತುಲ್ ರಾವ್ ಜೀವಂತವಾಗಿ ಹೊರಬರುವ ಸಾಧ್ಯತೆಗಳೂ ಬಹುಶಃ ಕಡಿಮೆ.

ಭಟ್ ಅನುಮಾನಸ್ಪದ ವರ್ತನೆ

ಪದ್ಮಪ್ರಿಯ ತಾಯಿ ಮನೆಗೆ ಹೋಗುತ್ತೇನೆಂದು ಮನೆಬಿಟ್ಟದ್ದು ಬುಧವಾರ ಬೆಳಗ್ಗೆ ಒಂಭತ್ತೂವರೆಗೆ. ಆಗ ಭಟ್ಟನೂ ಮನೆಯಲ್ಲಿದ್ದ. ನಂತರ ಇವನೂ ಬೆಂಗಳೂರಿಗೆಂದು ಹೊರಟಾಗ ಮಧ್ಯಾಹ್ನವಾಗಿತ್ತು.

ಭಟ್ಟನ ಉಡುಪಿ ಮನೆಯಿಂದ ಪದ್ಮರ ತಾಯಿಯ ಊರು ಮೂಲ್ಕಿಯ ಕಾರ್ನಾಡಿಗೆ 25 ಕಿ.ಮೀ. ದೂರವಿದೆ. ಕಾರ್‌ನಲ್ಲಿ ಹೋದರೆ ಹೆಚ್ಚೆಂದರೆ ಒಂದು ಗಂಟೆಯ ಪ್ರಯಾಣವಿದು. ಹಾಗಿದ್ದಾಗಲೂ ಈ ಭಟ್ಟ 'ಮನೆ ತಲುಪಿದೆಯಾ' ಅಂತ ಒಂದು ಸಾರಿಯೂ ಫೋನ್ ಮಾಡಿಲ್ಲ. ಅಷ್ಟೇ ಅಲ್ಲ ಶುಕ್ರವಾರ ಸಂಜೆಯವರೆಗೂ ತನ್ನ ಮನೆಗಾಗಲಿ, ಪದ್ಮಗಾಗಲಿ, ಆಕೆಯ ತಾಯಿ ಮನೆಗಾಗಲೀ ಫೋನ್ ಮಾಡಿ ವಿಚಾರಿಸಿಲ್ಲ.

ಇನ್ನು ಅನುಮಾನದ ಸಂಗತಿ ಏನು ಗೊತ್ತೆ? "... ಹೀಗೆ ಕಾರು ಕುಂಜಾರುಗಿರಿ ಬಳಿ ಪತ್ತೆಯಾಗಿದೆ, ಆಕೆ ನಾಪತ್ತೆ" ಎಂದು ಶುಕ್ರವಾರ ಬೆಳಿಗ್ಗೆಯೇ ಪೊಲೀಸರು ಬೆಂಗಳೂರಿನಲ್ಲಿದ್ದ ಭಟ್ಟರಿಗೆ ಮಾಹಿತಿ ನೀಡಿದ ಮೇಲೂ ಭಟ್ಟರು ಬೆಂಗಳೂರು ಬಿಟ್ಟದ್ದು ಶನಿವಾರ ಬೆಳಗ್ಗೆ!

ಪತಿಯೋ, ಪತ್ನಿಯೇ ಕಾಣೆಯಾದರೆ ಒಬ್ಬ ಕೂಲಿಯವನೂ ಎದೆ ಬಡಿದುಕೊಳ್ಳುತ್ತಾ ಪೊಲೀಸರ ಹತ್ತಿರ ಓಡಿ ಹೋಗುತ್ತಾರೆ, ಸ್ವತಃ ತಾವೇ ಹುಡುಕಾಡಲು ಹೊರಡುತ್ತಾರೆ.

ಆದರೆ ಭಟ್ಟ ಮಾತ್ರ ಕದಲಲಿಲ್ಲ, ಅದರ ನಂತರ ಏನಾಯಿತು ನೋಡಿ. ಬೆಂಗಳೂರಿನಿಂದ ಉಡುಪಿಗೆ ಬರಲು ಒಂದೂವರೆ ದಿನ ತೆಗೆದುಕೊಂಡ ಭಟ್ಟ ಅದೇ ದೂರದ ದೆಹಲಿಗೆ ರಾತ್ರೋರಾತ್ರಿ ಧಾವಿಸಿ ಹೋದ.

ಭಾನುವಾರ ಸರಿ ರಾತ್ರಿ ಭಟ್ಟ ದೆಹಲಿಯಲ್ಲಿದ್ದ. ಅದೇ ಬೆಳಗ್ಗೆ ಪದ್ಮ ಸಾವು ಸಂಭವಿಸಿದೆ.

■ ಶ್ರೀರಾಮ ದಿವಾಣ

ಘಟನೆಯ ಹಲವು ಪ್ರಮುಖ ಅಂಶಗಳು

* ಪದ್ಮ ಮತ್ತು ಅತುಲ್ ನಡುವೆ ಪ್ರೇಮಾಂಕುರವಾಗಿತ್ತು, ಪದ್ಮರಂತೆ ಅತುಲ್‌ಗೂ ಮದುವೆಯಾಗಿ ಇಬ್ಬರು ಮಕ್ಕಳು ಇದ್ದಾರೆ.

* ದೆಹಲಿಗೆ ತೆರಳಿದ ರಘುಪತಿ ಭಟ್ಟರೊಂದಿಗೆ ಕಾರ್ಕಳದ ಮಾಜಿ ಶಾಸಕ ಸುನಿಲ್‌ಕುಮಾರ್ ಮತ್ತು ಹಲವು ಸಂಬಂಧಿಕರೂ ಇದ್ದರು. ಅವರೆಲ್ಲ ಕ್ಷಮ ಅಪಾರ್ಟ್‌ಮೆಂಟಿಗೆ ಬೆಳಗ್ಗಿನ ಜಾವ ಹೋಗಿ ಹೊರಗಿನಿಂದ ಫೋನ್ ಮಾಡಿದಾಗ ಆಕೆ ಕರೆಯನ್ನು ಸ್ವೀಕರಿಸಿಲ್ಲ, ಬಾಗಿಲನ್ನು ಬಡಿದರೂ ತೆರೆದಿಲ್ಲ. ಆನಂತರ ದೆಹಲಿಯ ದ್ವಾರಕ ಏರಿಯಾದ ಪೊಲೀಸರನ್ನು ಕರೆಸಿ ಅವರ ಸಮ್ಮುಖದಲ್ಲಿ ಸಂಜೆ 6.30 ಕ್ಕೆ ಬಾಗಿಲನ್ನು ಒಡೆಸಿದಾಗ ಪದ್ಮರ ದೇಹ ನೇತಾಡುತ್ತಿತ್ತು ಎಂದು ಈಗ ಹೇಳಲಾಗುತ್ತಿದೆ. ಆದರೆ ಬಾಗಿಲನ್ನು ತೆರೆಸಲು ಸಂಜೆಯ ತನಕ ಯಾಕಾಯಿತು? ಈ ಮಧ್ಯೆ ಯಾರು ಆಕೆಯನ್ನು ಮಾತನಾಡಿಸಿದರು, ಭೇಟಿಯಾದರು?

ಬೆಳಗ್ಗೆಯೇ ಆಕೆಗೆ ಯಾರಾದರು ವಿಷ ಕೊಟ್ಟಿರುವ, ಅಥವಾ ಆಕೆಯನ್ನು ಕೊಲೆ ಮಾಡಿರುವ ಸಾಧ್ಯತೆ ಇದೆಯಲ್ಲವೇ?

* ಬಂಧಿತ ವಿಜಯ್ ಭಟ್ಟರ ಬಳಿ ಡ್ರೈವರ್ ಆಗಿದ್ದಾತ. ಆತ ಈಗ ಎಲ್ಲಿದ್ದಾನೆಂತಲೂ ಪೊಲೀಸರು ಹೇಳುತ್ತಿಲ್ಲ. ಯಾಕೆ?






ಭಟ್ಟನಿಗೆಷ್ಟು ಉಪಪತ್ನಿಯರು!

ರಘುಪತಿ ಭಟ್ಟ ಒಬ್ಬ ಮಹಾನ್ ಕಚ್ಚೆ ಹರುಕ. ಉಡುಪಿ ಟೌನ್‌ನಲ್ಲಿ ಬಹುತೇಕರಿಗೆ ಗೊತ್ತಿರುವ ಸಂಗತಿ ಏನೆಂದರೆ ಭಟ್ಟನಿಗೆ ಒಬ್ಬರು ಪದ್ಮಪ್ರಿಯ ಅಧಿಕೃತ ಪತ್ನಿಯಾದರೆ ಉಪಪತ್ನಿಯರು ಇಬ್ಬರಿದ್ದಾರೆ, ಇಷ್ಟೂ ಸಾಲದೆಂಬಂತೆ ಜೊತೆಗೊಬ್ಬ ಟೆಂಪರರಿ ಪ್ರೇಯಸಿಯೂ ಇದ್ದಾಳೆ.

ಉಡುಪಿಯ ಬಡ ಮುಸ್ಲಿಂ ಕುಟುಂಬದ ಸುಂದರ ಹುಡುಗಿಯೊಬ್ಬಳು ಕಾಲೇಜು ದಿನಗಳಿಂದಲೂ ಭಟ್ಟನ ಸ್ನೇಹ ಹೊಂದಿದ್ದು ಲವ್ ರೀತಿಯ ಸಂಬಂಧವಿತ್ತು, ನಂತರ ಭಟ್ಟನೇ ಹಣ ಖರ್ಚು ಮಾಡಿ ಆಕೆಗೆ ಮದುವೆ ಮಾಡಿಸಿ ಈಗಲೂ ಸಂಪರ್ಕವಿಟ್ಟುಕೊಂಡಿದ್ದಾನೆ.

ಇಂಥದ್ದೇ ಇನ್ನೊಂದು ವಿಚಾರವೆಂದರೆ ಉಡುಪಿ ಹತ್ತಿರದ ..... ಗುಡ್ಡೆಯ ಶಾ..... ಹೆಸರಿನ ಯುವತಿಯೊಬ್ಬಳೊಂದಿಗೂ ಭಟ್ಟನಿಗೆ ವ್ಯವಹಾರಗಳಿವೆ. ಈಕೆಗೆ ಭಟ್ಟನೇ ಉಡುಪಿಯಲ್ಲಿ ಕೆಲಸ ಕೊಡಿಸಿದ್ದಾನೆ. ಇದಲ್ಲದೆ ಜಿಲ್ಲಾ ಪಂಚಾಯಿತಿ ಮೆಂಬರ್ ಒಬ್ಬಳೊಂದಿಗೂ ಭಟ್ಟನ ರಂಗೀಲಾ ನಡೆದಿದೆಯೆಂಬ ಪುಕಾರುಗಳಿವೆ.

ಉಡುಪಿಯಲ್ಲಿದ್ದಾಗಲೆಲ್ಲಾ ಇಂತದ್ದೇ ಹಲ ಟ್ ಕೆಲಸಗಳಲ್ಲಿ ಮುಳುಗೇಳುತ್ತಿದ್ದ ಭಟ್ಟ ಉಳಿದ ಸಮಯ ಬೆಂಗಳೂರಿಗೆ ನೆಗೆದುಬರುತ್ತಿದ್ದ. ಇಂಥ ಹಡಬೆ ಮನುಷ್ಯನಿಗಾಗಿ ಯಾವ ಸದ್ಗೃಹಿಣಿ ತಾನೇ ಮನೇಲಿ ಕಾಯುತ್ತಾ ಕೂರುತ್ತಾರೆ ಹೇಳಿ?

ಅಮಿತಾ ಪ್ರಸಾದ್ ಮಾಡುವುದಾದರೂ ಏನು?

ಹಾವೇರಿ ಗೋಲಿಬಾರ್ ಘಟನೆಗೆ ವಿಶೇಷ ತನಿಖಾಧಿಕಾರಿಯಾಗಿ ನಿಯುಕ್ತಿಗೊಂಡಿರುವ ಬೆಳಗಾವಿ ವಿಭಾಗೀಯ ಆಯುಕ್ತ ಅಮಿತಾ ಪ್ರಸಾದ್ ರೈತನ ಈ ಕಗ್ಗೊಲೆಯ ಬಗ್ಗೆ ಕೊಡುವ ವರದಿಯಾದರೂ ಎಂತಹದ್ದಾಗಿರುತ್ತದೆ ಎಂಬ ಪ್ರಶ್ನೆಗೆ ಸಿಗುವ ಉತ್ತರಗಳೂ ಕಗ್ಗೊಲೆಯಷ್ಟೇ ಭಯಾನಕವಾಗಿವೆ. ರೈತರ ಸಮಸ್ಯೆಗಳ ಬಗ್ಗೆ ಸ್ವಲ್ಪವೂ ಅರಿವಿಲ್ಲದ ಈ ಬಿಹಾರಿ ಹೆಣ್ಣಿಗೆ ಹತ್ತು ದಿನಗಳ ಒಳಗೆ ವರದಿ ಸಲ್ಲಿಸುವಂತೆ ಯಡ್ಡಿ ಆಜ್ಞೆ ಮಾಡಿದ್ದಾನೆ.

ಅಮಿತಾ ಕೂಡ ಬೆಳಗಾವಿ ಪ್ರಾದೇಶಿಕ ಆಯುಕ್ತೆಯಾಗಿ ಮುಂದುವರೆಯುವ ಆಕಾಂಕ್ಷೆಯಿಟ್ಟುಕೊಂಡಿರುವಾಕೆ. ಅದು ಈಡೇರಬೇಕೆಂದರೆ ಯಡ್ಡಿ ಮತ್ತು ಉದಾಸಿ ಯಾವ ರೀತಿಯ ವರದಿಯನ್ನು ಬಯಸುತ್ತಾರೋ ಅದೇ ರೀತಿಯ ವರದಿಯನ್ನು ಆಕೆ ಸಿದ್ಧಪಡಿಸಬೇಕಾಗುತ್ತದೆ. ಅದಕ್ಕೆ ಆಕೆಯೂ ರೆಡಿಯಿರುವಂತೆ ಕಾಣುತ್ತಿದೆ. ಈ ಸ್ವಜನಪಕ್ಷಪಾತಿ ಮತ್ತು ಸ್ವಾರ್ಥ ರಾಜಕಾರಣದಲ್ಲಿ ಸತ್ಯಾಂಶ ಹೊರಬೀಳುವುದು ತುಸು ಕಷ್ಟವೇ.

ಹಾವೇರಿಯ ಪ್ರವಾಸಿಮಂದಿರದಲ್ಲಿ ಕುಳಿತುಕೊಂಡು ಉದಾಸಿಯ ಬಾಲಂಗೋಚಿ ಡಿಸಿ ಪಸ್ವಡ್ ಕೊಡುವ ಪಾಯಿಂಟ್‌ಗಳನ್ನೇ ನೋಟ್ ಮಾಡಿಕೊಳ್ಳುತ್ತಿರುವ ಅಮಿತಾ ಕಾಟಾಚಾರಕ್ಕೊಂದು ವರದಿ ಸಿದ್ಧಪಡಿಸುತ್ತಿದ್ದಾಳೇನೋ ಎಂಬ ಅನುಮಾನ ಬಾರದಿರದು.

ಉಳಿದೆಲ್ಲಾ ಸರ್ಕಾರಿ ಪ್ರೇರಿತ ಕಗ್ಗೊಲೆಗಳ ವರದಿಗಳಂತೆಯೇ ಹಾವೇರಿ ರೈತನ ಕೊಲೆಯ ವರದಿಯೂ ವಿಧಾನಸೌಧದ ಕಲ್ಲುಗೋಡೆಗಳೊಳಗೆ ಧೂಳು ತಿನ್ನುತ್ತಾ ಕುಳಿತುಕೊಳ್ಳುವ ಲಕ್ಷಣಗಳೇ ಜಾಸ್ತಿಯಿವೆ.

▶▶▶ 5ನೇ ಪುಟದಿಂದ

ಅನಿರೀಕ್ಷಿತ ಪ್ರತಿಭಟನೆಯಲ್ಲ!

ಹಾವೇರಿಯಲ್ಲಿ ರೈತರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದುದು ಅನಿರೀಕ್ಷಿತವಾಗಿ ದಿಢೀರನೆ ಆದ ಘಟನೆಯೇನಲ್ಲ. ಒಂದು ವಾರದಿಂದಲೂ ರೈತರು ಬೀಜಕ್ಕಾಗಿ, ಗೊಬ್ಬರಕ್ಕಾಗಿ ಪ್ರತಿಭಟನೆ ನಡೆಸುತ್ತಲೇ ಇದ್ದರು. ದಾವಣಗೆರೆಯಲ್ಲಿ ರೈತರು ಪ್ರತಿಭಟನೆ ನಡೆಸಿದ ಮೇಲೆ ಶಿಗ್ಗಾಂವಿಯಲ್ಲೂ ಖಾಸಗೀ ಆಗ್ರೋ ಸೆಂಟರ್‌ನ ಬೀಗ ಒಡೆದು ಸುಮಾರು 20 ಲಕ್ಷ ರೂ. ಮೌಲ್ಯದ ಗೊಬ್ಬರವನ್ನು ಕೊಂಡೊಯ್ದಿದ್ದರು. ಇದೇ ಮಾದರಿಯಲ್ಲಿ ಬಂಕಾಪುರದಲ್ಲೂ ಮತ್ತೊಂದು ಬೀಜ-ಗೊಬ್ಬರದ





ಅಂಗಡಿಯನ್ನು ರೈತರು ಲೂಟಿ ಮಾಡಿದರು. ಆಗಲೇ ಸರ್ಕಾರ ಮತ್ತು ಪೊಲೀಸರು ಎಚ್ಚೆತ್ತುಕೊಳ್ಳಬೇಕಿತ್ತು. ಆದರೆ ರೈತರ ಹಿತಾಸಕ್ತಿಗಳನ್ನು ಕಾಪಾಡುವುದನ್ನು ಬಿಟ್ಟು ಹಾವೇರಿಯ ಎಸ್ಪಿ ನಂಜುಂಡಸ್ವಾಮಿ ಖಾಸಗೀ ಕಂಪೆನಿಗಳ ರಕ್ಷಣೆಗೆ ನಿಂತುಬಿಟ್ಟ.

ಆದರೆ ರೈತರ ಸಿಟ್ಟು ರಟ್ಟೆಗೆ ಬಂದರೆ ಏನಾಗುತ್ತೆ ಎಂಬುದನ್ನು ಆತನಿಗೆ ರೈತರು ತೋರಿಸಿಕೊಟ್ಟರು. ಅವನ ಕೊರಳಪಟ್ಟಿ ಹಿಡಿದು ಎಳೆದಾಡಿ ಮಂಗಳಾರತಿ ಮಾಡಿ ಕಳಿಸಿದರು. ರೈತರು ತನಗೆ ಇಂತಹ ಟ್ರೀಟ್‌ಮೆಂಟ್ ಕೊಡುತ್ತಾರೆಂದು ಆತ ಕನಸಿನಲ್ಲೂ ಊಹಿಸಿರಲಿಕ್ಕಿಲ್ಲ. ಈ ನಂಜುಂಡಸ್ವಾಮಿ ದಲಿತ ವರ್ಗದಿಂದ ಬಂದವನಾಗಿದ್ದರೂ ಖಾಸಗೀ ಕಂಪೆನಿಗಳ ಎಂಜಲಿನಾಸೆಗೆ ರೈತರ ಪ್ರಾಣ ತೆಗೆಯುವಷ್ಟು ಕ್ರೂರಿಯಾಗಿಬಿಟ್ಟ.

ಯಡ್ಡಿಯೇ ಹೊಣೆ!

ಹಾವೇರಿ ಗೋಲಿಬಾರ್‌ಗೆ ಸಿಎಂ ಯಡ್ಡಿ ಮತ್ತು ಸಚಿವ ಉದಾಸಿಯೇ ನೇರ ಹೊಣೆಗಾರರಾಗಿದ್ದಾರೆ. ಮುಂಗಾರು ಮಳೆ ಶುರುವಾಗುತ್ತಿದ್ದಂತೆ ರಾಜ್ಯದಲ್ಲಿ ರೈತರಿಗೆ ಅವಶ್ಯವಾಗಿ ಬೇಕಾದ ಬೀಜ-ಗೊಬ್ಬರಗಳ ದಾಸ್ತಾನು ಇದೆಯೋ ಇಲ್ಲವೇ ಎಂಬುದನ್ನು ನೋಡಿ ಅಗತ್ಯ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಯಡ್ಡಿ ತಮ್ಮದೇ ಆದ ಭೋಗದಲ್ಲಿ ಮುಳುಗಿದ್ದರು. ಕಂಡ ಕಂಡ ಕಾವಿಧಾರಿಯ ಕಾಲಿಗೆ ಬೀಳುವುದರಲ್ಲಿ, ಹೋಮ-ಹವನಗಳನ್ನು ಮಾಡುವುದರಲ್ಲಿ, ಖಾತೆಯ ಕ್ಯಾತೆಯನ್ನು ತೀರಿಸುವುದರಲ್ಲಿ, ಪಕ್ಷದೊಳಗಿನ ಬಂಡಾಯವನ್ನು ಶಮನ ಮಾಡುವಲ್ಲಿ – ಹೀಗೇ ಅವರು ತಮ್ಮದೇ ಆದ ಲೋಕದಲ್ಲಿ ಮುಳುಗಿದ್ದರು. ದಾವಣಗೆರೆಯಲ್ಲಿ ರೈತರು ಬೀದಿಗಿಳಿದಾಗಲೇ ಎಚ್ಚೆತ್ತುಕೊಂಡು ಆಗಬಹುದಾದ ಅನಾಹುತವನ್ನು ತಪ್ಪಿಸಬಹುದಿತ್ತು. ರೈತರ ದನಿಯು ಕೇಳದಂತೆ ತಮ್ಮೆಲ್ಲಾ ನವರಂಧ್ರಗಳನ್ನೂ ಮುಚ್ಚಿಕೊಂಡಿದ್ದ ಯಡ್ಡಿ ಅವುಗಳನ್ನು ತೆರೆದದ್ದು ಹಾವೇರಿಯಲ್ಲೊಬ್ಬ ಅನ್ನದಾತನ ಹೆಣ ಉರುಳಿದಾಗಲೇ. ಹೀಗಾಗಿ ಇದರ ನೇರ ಹೊಣೆಯನ್ನು ಯಡ್ಡಿಯೇ ಹೊರಬೇಕು. ಎಲ್ಲಾ ಮುಗಿದ ಮೇಲೆ ಸತ್ತ ರೈತನ ಕುಟುಂಬದೆದುರು ಗೋಳೋ ಎಂದು ಅತ್ತಿದ್ದಾರೆ. ಇದೇ ಕಾಳಜಿ ಮೊದಲೇ ಇದ್ದಿದ್ದರೆ ಇಂತಹದ್ದೊಂದು ಅನಾಹುತವನ್ನು ತಪ್ಪಿಸಬಹುದಿತ್ತು.


ಎರಡನೆಯದಾಗಿ ಉದಾಸಿ ಕೂಡ ಕಡಿಮೆಯೇನಿಲ್ಲ. ಅತ್ತ ಹಾವೇರಿಯಲ್ಲಿ ಪೊಲೀಸರು ರೈತರನ್ನು ಮನಬಂದಂತೆ ಥಳಿಸುತ್ತಿದ್ದರೂ, ಅವರ ಮೇಲೆ ಗುಂಡಿನ ಮಳೆಗರೆಯುತ್ತಿದ್ದರೂ ಉದಾಸಿ ಇತ್ತ ತಿರುಗಿ ಕೂಡ ನೋಡದೇ ಹುಬ್ಬಳ್ಳಿಗೆ ಹೋಗಿ ಬೆಂಗಳೂರಿಗೆ ವಿಮಾನ ಹತ್ತಿ ತಮ್ಮ ಕಚೇರಿಯಲ್ಲಿ ಡೀಲ್ ಕುದುರಿಸುತ್ತಿದ್ದರು. ಬಸವರಾಜ್ ಬೊಮ್ಮಾಯಿ ಹಾವೇರಿಗೆ ಸಕಾಲಕ್ಕೆ ಆಗಮಿಸಿ ಕಣ್ಣೀರು ಸುರಿಸದಿದ್ದರೆ ರಕ್ತಪಿಪಾಸು ಪೊಲೀಸರು ಇನ್ನಷ್ಟು ರೈತರ ಹೆಣಗಳನ್ನು ಕೆಡವುತ್ತಿದ್ದರು. ಹಾಗಾಗಿ ಉದಾಸಿಯೂ ಈ ಘಟನೆಗೆ ಹೊಣೆಗಾರನಾಗುತ್ತಾನೆ. ಈ ಹಿಂದೆ ಸಂಗೂರು ಸಕ್ಕರೆ ಕಾರ್ಖಾನೆ ಮುಚ್ಚುವಂತೆ ಮಾಡಿ ಅಮಾಯಕ ಕಾರ್ಮಿಕರನ್ನು ಬೀದಿಗೆ ತಳ್ಳಿ ಒಬ್ಬ ಕಾರ್ಮಿಕ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದೂ ಇದೇ ಉದಾಸಿಯೇ. ಈಗ ರೈತರ ಜೀವ ಹಿಂಡಲು ಶುರು ಮಾಡಿದ್ದಾನೆ.

ಒಟ್ಟಿನಲ್ಲಿ ರಕ್ತಪಿಪಾಸು ಬಿಜೆಪಿಗಳು ಅನ್ನದಾತನ ಹೆಣ ಉರುಳಿಸಿದ್ದಾರೆ. ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಈಗ ಅವರ ರಕ್ತವನ್ನೇ ಕುಡಿಯುವಷ್ಟು ಕ್ರೂರಿಗಳಾಗಿಬಿಟ್ಟಿದ್ದಾರೆ. ಯಡ್ಡಿ ಮತ್ತು ಬಿಜೆಪಿ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ರೈತರನ್ನು ಕೊಂದ ಯಾವ ಸರ್ಕಾರವೂ ಅಧಿಕಾರದಲ್ಲಿ ಉಳಿದಿಲ್ಲ. ಹಿಂದೆ ಗುಂಡೂರಾವ್ ಸರಕಾರ ನವಲಗುಂದ-ನರಗುಂದದಲ್ಲಿ ರೈತರನ್ನು ಗುಂಡಿಟ್ಟು ಕೊಂದಿತ್ತು. ಆನಂತರದ ಚುನಾವಣೆಯಲ್ಲಿ ಗುಂಡೂರಾವ್‌ರನ್ನು ರೈತರು ಸೀದಾ ಮನೆಗೆ ಕಳುಹಿಸಿದ್ದರು.

ಯಡ್ಡಿ ಇದೇ ರೀತಿ ಮುಂದುವರೆದರೆ ಅವರಿಗೂ ಇದೇ ಗತಿ ಬರುವುದರಲ್ಲಿ ಆಶ್ಚರ್ಯವಿಲ್ಲ.

■ ಹುರುಳಿಕುಪ್ಪಿ ವಿನಯ್

ಯಡ್ಡಿಯ ಷಡ್ಯಂತ್ರ: ಉದಾಸಿಗೆ ಟಾಂಗ್!



ಯಡ್ಡಿ ಎಷ್ಟೊಂದು ಚಾಲಾಕಿ ಎಂದರೆ ಪಕ್ಷದೊಳಗೆ ತನ್ನ ವಿರೋಧಿಗಳನ್ನು ಮಟ್ಟ ಹಾಕಿ ತನ್ನ ಪ್ರಭಾವವನ್ನು ಭದ್ರಗೊಳಿಸಿಕೊಳ್ಳಲು ಒಂದು ಸಣ್ಣ ಅವಕಾಶ ಸಿಕ್ಕರೂ ಅದನ್ನು ಜಾಣತನದಿಂದ ಉಪಯೋಗಿಸಿಕೊಳ್ಳುತ್ತಾರೆ. ಈ ಚಾಲಾಕಿತನಕ್ಕೆ (ಅಥವಾ ಸೇಡಿನ ರಾಜಕಾರಣ ಅಂತ ಬೇಕಾದರೂ ಅನ್ನಿ) ಮೊದಲು ಬಲಿಯಾಗಿದ್ದೇ ಜಗದೀಶ್ ಶೆಟ್ಟರ್. ಈಗ ಉದಾಸಿಯ ಸರದಿ ಎನ್ನಿಸುತ್ತೆ.

ಖಾತೆ ಹಂಚಿಕೆಯಲ್ಲಿಯೇ ಉದಾಸಿಯನ್ನು ಬಿಟ್ಟಿದ್ದರೆ ಹಿರಿಯ ಮುದಿ ರಾಜಕಾರಣಿಗೆ ವಂಚನೆ ಮಾಡಿದ ಆರೋಪ ಯಡ್ಡಿಯ ಹೆಗಲೇರುತ್ತಿತ್ತು. ಹಾಗಾಗಿ ಉದಾಸಿಗೆ ಒಂದು ಖಾತೆ ಕೊಟ್ಟಿದ್ದರು. ಆದರೆ ಉದಾಸಿಯನ್ನು ಮಣ್ಣು ಮುಕ್ಕಿಸಬೇಕೆಂಬ ಯಡ್ಡಿ ಚಿಂತನೆ ಮಾತ್ರ ಒಳಗೊಳಗೇ ಇತ್ತು. ಉದಾಸಿಯ ವಿರುದ್ಧ ಒಂದು ಬಾಣ ಬಿಡುವುದಕ್ಕೆ ಹಾವೇರಿ ಗೋಲಿಬಾರ್ ಯಡ್ಡಿಗೆ ಒಂದು ಅವಕಾಶ ಮಾಡಿಕೊಟ್ಟಿದೆ.

ಅತ್ತ ಹಾವೇರಿಯಲ್ಲಿ ರೈತರ ಮೇಲೆ ಗುಂಡು ಹಾರುತ್ತಿದ್ದಂತೆ ಉದಾಸಿ ಸೀದಾ ಬೆಂಗಳೂರಿಗೆ ಬಂದಿಳಿದಿದ್ದರು. ಇದು ಯಡ್ಡಿಗೆ ಒಂದು ರೀತಿಯಲ್ಲಿ ಒಳಗೊಳಗೇ ಖುಷಿ ನೀಡುವ ವಿಚಾರ ಕೂಡ ಆಗಿತ್ತು. ಸೀದಾ ಆತ ತನ್ನ ಹಿಂಬಾಲಕ ಬಸವರಾಜ್ ಬೊಮ್ಮಾಯಿಗೆ ಫೋನ್ ಮಾಡಿ ಹಾವೇರಿಗೆ ತೆರಳಿ ಪರಿಸ್ಥಿತಿಯನ್ನು ನಿಭಾಯಿಸುವಂತೆ ಹೇಳಿದರು. ಅಂದರೆ, ಇಂತಹದ್ದೊಂದು ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರ ಅಳಲನ್ನು ಕೇಳಿಸಿಕೊಳ್ಳಲು ಬಂದಿದ್ದು ಬೊಮ್ಮಾಯಿಯೇ ಹೊರತು ಉದಾಸಿ ಅಲ್ಲ ಎಂಬ ಭಾವನೆಯನ್ನು ರೈತರಲ್ಲಿ ಮೂಡಿಸುವುದು ಯಡ್ಡಿಯ ಲೆಕ್ಕಾಚಾರ. ಬೊಮ್ಮಾಯಿಯ ಮಾತುಗಳಲ್ಲೂ ಅದು ವ್ಯಕ್ತವಾಗುತ್ತಿದೆ! ■

ಘತ್ತರಗಿ ಭಾಗ್ಯವಂತಿದೇವಿಯನ್ನೂ ಮುಂಡಾಯಿಸಿದ ಪುಢಾರಿಗಳು

ಗುಲಬರ್ಗಾ ಜಿಲ್ಲೆಯ ಅಫಜಲಪುರ ಎಂಬ ಹೆಸರು ಕೇಳುತ್ತಲೇ ಬಹಳಷ್ಟು ಜನರಿಗೆ ನೆನಪಾಗುವುದು ಘತ್ತರಗಿಯ ಭಾಗ್ಯವಂತಿದೇವಿ ಹಾಗೂ ಮಾಲೀಕಯ್ಯ ಗುತ್ತೇದಾರ.

ಆದರಲ್ಲೂ ಭಾಗ್ಯವಂತಿದೇವಿ ಹೆಸರು ಕೇಳುತ್ತಲೆ ಇಲ್ಲಿನ ಬಹಳಷ್ಟು ಭಕ್ತರಲ್ಲಿ ಭಕ್ತಿಭಾವ ಉಕ್ಕಿಬರುತ್ತದೆ. ಆದಕ್ಕೆ ಕಾರಣ ಯಾರು ಈ ದೇವಿಯ ಹತ್ತಿರ ಹರಕೆ ಹೊರುತ್ತಾರೋ ಅವರ ಆಸೆಗಳನ್ನು ಖಂಡಿತವಾಗಿಯೂ ಸಾಧ್ಯವಾಗಿಸುವ ತಾಕತ್ತು ಈ ದೇವತೆಗೆ ಇದೆ ಎಂಬ ಇಲ್ಲಿನ ಜನರ ನಂಬಿಕೆ. ಆದಕ್ಕೆ ತಕ್ಕಂತೆ ತಮ್ಮ ಇಷ್ಟಾರ್ಥಗಳೆಲ್ಲ ಈಡೇರುತ್ತಲೆ ಘತ್ತರಗಿಗೆ ಧಾವಿಸುವ ಭಕ್ತಾದಿಗಳು ಅಲ್ಲಿ ತಮ್ಮ ಬೆನ್ನ ತೊಗಲಿಗೆ ಹುಕ್ಕಿನ ಕೊಂಡಿ ಸಿಕ್ಕಿಸಿಕೊಂಡು ಆಡುವ ಸಿಡಿಯ ಆಟವಂತೂ ಇನ್ನೂ ರೋಚಕ.




ಈ ಸಿಡಿ ಆಟದ ಹಿಂದಿನ ಜನಪದ ಆಖ್ಯಾಯಿಕೆ ಏನೇ ಇದ್ದರೂ ಇಂದಿನ ವೈಜ್ಞಾನಿಕ ಯುಗದಲ್ಲೂ ಬೆನ್ನಿನ ಚರ್ಮದ ಹುರಿಗೆ ಕಬ್ಬಿಣದ ಕೊಂಡಿ ಸಿಕ್ಕಿಸಿಕೊಂಡು ಆಡುವ ಸಿಡಿ ಮೂರ್ಖತನದ ಪರಮಾವಧಿ ಎನ್ನಲೇಬೇಕು. ಬಹಳಷ್ಟು ವರ್ಷಗಳಿಂದಲೂ ನಡೆದುಬಂದಿದ್ದ ಸಿಡಿ ಎಂಬ ತೀರಾ ಅನಾಗರಿಕವಾದ ಕ್ರಿಯೆ ಇಂದು ಮಾನವಹಕ್ಕುಗಳ ಆಯೋಗದ ಗದಾಪ್ರಹಾರದಿಂದ ನಿಂತುಹೋಗಿದೆ. ಇದು ಇಲ್ಲಿನ ಬುದ್ಧಿಜೀವಿಗಳ ಒತ್ತಾಯದ ಫಲ ಎನ್ನಬೇಕು.

ವಿಚಿತ್ರ ಹಾಗೂ ತಮಾಷೆಯ ಸಂಗತಿ ಎಂದರೆ ತನ್ನ ಭಕ್ತರ ಹಿತ ಕಾಪಾಡುವ, ಅವರ ಹರಕೆಗಳನ್ನೆಲ್ಲ ತೀರಿಸುವ ಇದೇ ಭಾಗ್ಯವಂತಿ ದೇವಿಗೆ ತನ್ನ ಹತ್ತಿರದಲ್ಲೆ ಸದಾ ಇರುವ, ತನ್ನ ಹೆಸರು ಹೇಳಿಕೊಂಡು ತಮ್ಮ ಗೋಪಾಳ ತುಂಬಿಕೊಳ್ಳುತ್ತಿರುವ ಜನಗಳ ವಿರುದ್ಧ ತಿರುಗಿ ಬೀಳುವ ತಾಕತ್ತಿಲ್ಲವೇ ಎಂಬುದು.

ದೇವರ ಅಸ್ತಿತ್ವದ ಕುರಿತು ಮುಕ್ತವಾಗಿ ಚಿಂತಿಸುವ ಜನರಿಗೆ ನಾಸ್ತಿಕರು ಎಂಬ ಬಿರುದನ್ನು ದಯಪಾಲಿಸುತ್ತಾರೆ. ಆದರೆ ನಿಜವಾದ ನಾಸ್ತಿಕರೆಂದರೆ ದೇವರ ಗರ್ಭಗುಡಿಯಲ್ಲಿಯೆ ಇರುವ, ಆ ದೇವರ ಮೈ-ಮುಖ ಮಾರ್ಜನ ಮಾಡುವ, ಹೂ-ಹಾರಗಳಿಂದ ಶೃಂಗರಿಸುವ, ದೀಪಾಲಂಕಾರಗಳಿಂದ ಸಜ್ಜುಗೊಳಿಸುವ ಕ್ರಿಯೆಯಲ್ಲಿ ತೊಡಗಿರುವ ಜನಗಳೇ ಎಂಬುದು ನನ್ನ ತಿಳಿವಳಿಕೆ. ಏಕೆಂದರೆ ದೇವರ ಹೆಸರನ್ನು ಹೇಳಿಕೊಂಡು ಭಕ್ತರನ್ನು ಯಾಮಾರಿಸುವ ಪೂಜಾರಿಗಳು ತಮ್ಮ ಈ ಮುಂಡಾ ಮೋಚುವ ಕ್ರಿಯೆಯನ್ನು ದೇವರ ಎದುರುಗಡೆಯೆ ಧಾರಾಳವಾಗಿ ಮಾಡುತ್ತಿರುತ್ತಾರೆ. ಅದೇ ಗರ್ಭಗುಡಿಯಲ್ಲಿ ಎಂಥ ಪವರ್‌ಫುಲ್ ದೇವರಿದ್ದರೂ ತಮಗೇನೂ ಆಗುವುದಿಲ್ಲ ಎಂಬುದು ಇವರಿಗೆ ಗೊತ್ತಿರುತ್ತದೆ.

ಎಂ.ವೈ. ಪಾಟೀಲ



ಹಾಗಂತಲೆ ಬಹುತೇಕ ಗುಡಿಗಳಲ್ಲಿರುವ, ಅದರ ಸುತ್ತಮುತ್ತ ಪ್ಯಾಪಿಸಿಕೊಂಡಿರುವ ಜನಗಳೆ ಆ ದೇವರ ಹೆಸರಿನ ಮೇಲೆ ಹಗಲುದರೋಡೆ ನಡೆಸುತ್ತಿರುತ್ತಾರೆ. ಇದನ್ನೆಲ್ಲ ನಾನಿಲ್ಲಿ ವಿವರಿಸಿ ಹೇಳಬೇಕಾದುದೇಕೆಂದರೆ ಇಂಥದೆ ಘಟನೆಯೊಂದು ಘತ್ತರಗಿಯ ಭಾಗ್ಯವಂತಿ ದೇವಸ್ಥಾನದಲ್ಲಿ ನಡೆದಿದೆ.

ಇದಕ್ಕೆಲ್ಲ ನೇರ ಕಾರಣರಾದವರು ಮಾಜಿ ಶಾಸಕ ಎಂ.ವೈ.ಪಾಟೀಲರ ಪುತ್ರರತ್ನ ಅರುಣಕುಮಾರ ಪಾಟೀಲ ಎಂಬುದು ಇಲ್ಲಿನ ಗ್ರಾಮಸ್ಥರೆಲ್ಲರಿಗೂ ಗೊತ್ತಾಗಿಬಿಟ್ಟಿದೆ. ಈ ಕಾರಣಕ್ಕಾಗಿಯೆ ಮೊನ್ನಿನ ಚುನಾವಣೆಯಲ್ಲಿ ಎಂ.ವೈ.ಪಾಟೀಲ ಸೋತು ಹೋಗಬೇಕಾಯಿತು.

ಸದರಿ ಭಾಗ್ಯವಂತಿದೇವಿಯ ದೇವಸ್ಥಾನದ ಮೇಲೆ ನಿಗಾ ಇಡಲು ಅಸಿಸ್ಟೆಂಟ್ ಕಮೀಷನರ್ (ಈಗ ಗುಲಬರ್ಗಾ ನಗರಸಭೆಯ ಕಮೀಷನರ್ ಆಗಿರುವ ನಾಗಪ್ಪ ಸಿರಸಗಿ) ಸುಪರ್ದಿಯಲ್ಲಿ ಭಾಗ್ಯಲಕ್ಷ್ಮಿ ಎಂಡೋಮೆಂಟ್ ಕಮಿಟಿ ಏನೋ ಇದೆ. ಆದರೆ ಈ ಕಮಿಟಿಯಲ್ಲಿರುವ ಸದಸ್ಯರು ಹಾಗೂ ಅದರ ಮೇಲೆ ಕಣ್ಣಾವಲು ಇರಿಸಿರುವವರು ಎಲ್ಲರೂ ಭಾಗ್ಯವಂತಿದೇವಿಯನ್ನು ಹೇಗೆ ಉರಿದು ತಿನ್ನಬೇಕು ಎಂಬುದರಲ್ಲಿ ಎತ್ತಿದ ಕೈ ಅನಿಸಿಕೊಂಡಿದ್ದಾರೆ. ಅವರ ಮಧ್ಯೆ ಇರುವ ಮಹಾದೇವಯ್ಯ ಎಂಬ ಗ್ರಾಮಲೆಕ್ಕಪಾಲಕ ಹಾಗೂ ಈ ಭಾಗ್ಯವಂತಿದೇವಿ ದೇವಸ್ಥಾನದ ಕಾರ್ಯದರ್ಶಿಯ ಪ್ರಾಮಾಣಿಕತೆ ಅವರೆಲ್ಲರಿಗೂ ನುಂಗಲಾಗದ ತುತ್ತಾಗಿ ಪರಿಣಮಿಸಿದೆ.

ಹಾಗಾಗಿ ಹೋಗಲಾರದವನಿಗೆ ಹೊಗೆ ಇಟ್ಟು ಕಳಿಸಿದರು ಎಂಬಂತೆ ಕಾರ್ಯದರ್ಶಿ ಮಹಾದೇವಯ್ಯನಿಗೆ ಸಣ್ಣ ಕಾರಣಗಳನ್ನು ಮುಂದೊಡ್ಡಿ ಇದೀಗ ಅಮಾನತುಗೊಳಿಸಿ ಕುಂತಿದ್ದಾರೆ. ಆದರೂ ಕಳವು ಮಾತ್ರ ಮುಂದುವರೆದಿದೆ. ಉದಾ: ಹರಕೆಗೆ, ಘತ್ತರಗಿ ಭಾಗ್ಯವಂತಿ ದೇವಿಗೆ ದಿನನಿತ್ಯವೂ ಹರಿದು ಬರುವ ಹಣ, ಚಿನ್ನದ ಒಡವೆಗಳಲ್ಲಿ ಸುಮಾರು ಎಂಟರಿಂದ ಹತ್ತು ಕೆ.ಜಿ. ಬಂಗಾರ ಇತ್ತೀಚೆಗೆ ನಾಪತ್ತೆಯಾಗಿದೆ. ಈ ಭಾಗ್ಯವಂತಿ ದೇವಸ್ಥಾನದ ಹುಂಡಿಗೆ ಹರಿದು ಬಂದ ಹಣ, ಭಕ್ತಾದಿಗಳು ಭಾಗ್ಯವಂತಿದೇವಿಗೆ ತಂದ ಕಣ್ಣಟ್ಟು, ಮೂಗುತಿ, ಕೊರಳಲ್ಲಿಯ ಸರ ಮುಂತಾದ ಬಂಗಾರದ ಒಡವೆಗಳೆಲ್ಲ ಒಂಭತ್ತು ಸ್ಟಾಕ್ ರಿಜಿಸ್ಟರ್‌ಗಳಲ್ಲಿ ಇದೆ. ವಿಚಿತ್ರವೆಂದರೆ ಈ ಅಮೂಲ್ಯವಾದ ಸ್ಟಾಕ್ ರಿಜಿಸ್ಟರ್‌ಗಳೆಲ್ಲ ಈಗ ಮಟಾಮಾಯವಾಗಿಬಿಟ್ಟಿವೆ.

ಈ ಎಂಡೋಮೆಂಟ್ ಕಮಿಟಿಯ ಚೇರಮನ್ ಆಗಿದ್ದ (ಸಹಾಯಕ ಆಯುಕ್ತನಾಗಿದ್ದ) ನಾಗಪ್ಪ ಸಿರಸಗಿ ಎಂಥ ಐನಾತಿ ಆಸಾಮಿ ಎಂದರೆ ತಾನೊಬ್ಬ ಆಬ್ಕಾರಿಗಿಂತಲೂ ಕಡಿಮೆ ಎಂಬಂತೆ ರಾತ್ರೋರಾತ್ರಿ ಬಂದು ಘತ್ತರಗಿ ಗುಡಿಯಲ್ಲಿ ಜಮೆಯಾದ ಬಂಗಾರ, ಬೆಳ್ಳಿಯ ಸಾಮಾನುಗಳನ್ನು ಒಯ್ಯುತ್ತಾನೆ. ಅದನ್ನು ರಾತ್ರೋರಾತ್ರಿಯೆ ಎಸ್‌ಬಿಹೆಚ್ ಕಚೇರಿಯಲ್ಲಿ ಡಿಪಾಜಿಟ್ ಮಾಡಿಸುವ ಅಧಿಕಾರ ತನಗಿದೆ ಅಂತಲೂ ಬೀಗುತ್ತಾನೆ. ಆದರೆ ವಾಸ್ತವದಲ್ಲಿ ಘತ್ತರಗಿಯಿಂದ ತೆಗೆದುಕೊಂಡು ಹೋದ ಬಂಗಾರ ಹಾಗೂ ಬೆಳ್ಳಿಯ ಸಾಮಾನುಗಳು ಆ ತಡ ರಾತ್ರಿ ಎಸ್‌ಬಿಹೆಚ್ ಕಚೇರಿಯನ್ನು ಸೇರದೆ ನೇರ ನಾಗಪ್ಪ ಸಿರಸಗಿಯ ರೇಣುಕಾ ಘುಗರ ಫ್ಯಾಕ್ಟರಿಯನ್ನು ಸೇರುತ್ತದೆ.

ಇದನ್ನು ನೋಡಿ ಮಹಾದೇವಯ್ಯನ ಎದೆಹೊಡಕೊಳ್ಳತೊಡಗುತ್ತದೆ. ಆದರೆ ಇದನ್ನೆಲ್ಲ ಮೊದಲೆ ನಿರ್ಧರಿಸಿರುವ ನಾಗಪ್ಪ ಸಿರಸಗಿ ಮಾತ್ರ ಮುಗುಮ್ಮಾಗಿರುತ್ತಾನೆ. ಕೊನೆಗೆ ಮಹಾದೇವಯ್ಯನೇ ಘತ್ತರಗಿಯ ಗ್ರಾಮಸ್ಥರಿಗೆ ತನ್ನ ಗುಮಾನಿಗಳನ್ನೆಲ್ಲ ಮೊಬೈಲ್ ಮೂಲಕ ತಿಳಿಸುತ್ತಾನೆ. ಅದನ್ನು ಕೇಳಿ ಘತ್ತರಗಿ ಗ್ರಾಮಸ್ಥರೂ ಆ ಸಂಜೆಯ ಸಮಯದಲ್ಲಿ ತಹಶೀಲ ಕಚೇರಿಯ ಮುಂದೆ ಹಾಜರಾಗುತ್ತಾರೆ. ಜನ ಸೇರಿದ್ದನ್ನು ಕಂಡು ಮನಸ್ಸಿನಲ್ಲಿ ಏನೋ ಲೆಕ್ಕ ಹಾಕಿದ ಸಿರಸಗಿ ನಾಗಪ್ಪ ಹಾಗೂ ತಹಶೀಲ್ದಾರ ಎಸ್.ಎನ್.ವಾರಿ ಇಬ್ಬರೂ ಸೇರಿ 11-1/2 ಕೆ.ಜಿ. ಬಂಗಾರವನ್ನು ಚುನಾವಣೆಯ ಮತಪೆಟ್ಟಿಗೆಯಲ್ಲಿ ಹಾಕಿ ಒಂದು ರೂಮಿನಲ್ಲಿ ಸಹಜವಾಗಿ ಇಟ್ಟುಬಿಡುತ್ತಾರೆ. ಹೀಗೆ ಇಟ್ಟ ಪೆಟ್ಟಿಗೆಗೆ ಕೀಲಿ ಹಾಕಿ, ಅದನ್ನು ಸೀಜ್ ಮಾಡುವುದಿರಲಿ, ದೇವಸ್ಥಾನದ ಸೆಕ್ರೆಟರಿಯ ಸಹಿ ಮುಂತಾದವು ಪಡೆಯುವುದನ್ನು ಮಾಡುವುದೆ ಇಲ್ಲ. ಎಲ್ಲವೂ ಮುಗುಮ್ಮಾಗಿ ನಡೆದುಹೋಗುತ್ತದೆ.

ಒಂದೆಡೆ ಘತ್ತರಗಿ ಭಾಗ್ಯವಂತಿ ದೇವಿಯ ಬಂಗಾರ-ಬೆಳ್ಳಿ ಸಾಮಾನುಗಳನ್ನು ಯಾಮಾರಿಸುವುದು ಒಂದು ದಂಧೆಯಾದರೆ, ಇನ್ನೊಂದೆಡೆ ಹೀಗೆ ಸಂಗ್ರಹವಾದ ಸಾಮಾನುಗಳನ್ನೆ ಬೇಕಾಬಿಟ್ಟಿಯಾಗಿ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಲಪಟಾಯಿಸುವುದು ಇನ್ನೊಂದು ದಂಧೆ. ಹೀಗೆ ಮುಗ್ಧ ಭಕ್ತಾದಿಗಳಿಂದ ಸಂಗ್ರಹವಾದ ಧನ-ಧಾನ್ಯ-ಒಡವೆಗಳನ್ನು ಕದ್ದುಕೊಂಡು ಹೋಗುವ ನಾಮರ್ಧ ಅಧಿಕಾರಿಗಳನ್ನು ಶಿಕ್ಷಿಸುವ ತಾಕತ್ತು ಜಿಲ್ಲಾಧಿಕಾರಿ ಪಂಕಜಕುಮಾರ ಪಾಂಡೆಗೆ ಇದೆಯೋ?

ಹಾಗೂ ತನ್ನ ಕಣ್ಣ ಕೆಳಗೆ ತನಗಾಗಿ ತಂದುಕೊಟ್ಟ ಒಡವೆಗಳೆಲ್ಲವನ್ನೂ ಮಾರಿಕೊಂಡು ತಮ್ಮ ಗೋಪಾಳ ತುಂಬಿಕೊಳ್ಳುವ ಅಧಿಕಾರಿಗಳನ್ನು ಮಟ್ಟ ಹಾಕುವ ತಾಕತ್ತು ಈ ಭಾಗ್ಯವಂತಿದೇವಿಗಿದೆಯೇ?

ತನ್ನ ಭಕ್ತರೇ ತಂದು ಕೊಟ್ಟ ಹಣ, ಒಡವೆಗಳನ್ನು ಕಾಪಾಡಿಕೊಳ್ಳಲಾಗದ ಭಾಗ್ಯವಂತಿದೇವಿ ಅದು ಹೇಗೆ ತನ್ನ ಭಕ್ತಾದಿಗಳ ಇಷ್ಟಾನಿಷ್ಟ ಕಾಪಾಡುತ್ತಾಳೆ?

■ ವಿಶ್ವಾರಾಧ್ಯ ಸತ್ಯಂಪೇಟೆ

ಕಟ್ಟಾ ಮಗನ ಅಟ್ಟಹಾಸ



ಬಿಜೆಪಿಗೆ ಅಧಿಕಾರ ದಕ್ಕುವುದಕ್ಕೂ ಯಡ್ಡಿ ಸಿಂಹಾಸನಕ್ಕೇರುವುದಕ್ಕೂ ಮತ್ತು ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತಲ ಬಡರೈತರ ಪರ ವಹಿಸಿ ಬೀದಿಗಿಳಿದಿದ್ದ ರೈತನಾಯಕ ಡಿ.ಎಸ್. ಗೌಡರ ಮೇಲಿನ ಗೂಂಡಾದಾಳಿಗೂ ನಿಗೂಢ ಸಂಬಂಧವಿದೆ. ಇದು ಕಟ್ಟಾ ಜಗ್ಗನದೇ ಕೃತ್ಯವೆಂದೂ ಆತನ ಆದೇಶದ ಮೇರೆಗೇ ಬ್ರೋಕರ್ ಮಂಜನ ಗ್ಯಾಂಗ್ ದಾಳಿ ನಡೆಸಿದೆಯೆಂದು ಪೊಲೀಸರಿಗೂ ಸ್ಪಷ್ಟವಾಗಿ ಗೊತ್ತು. ಹಾಗಂತ ಜಗ್ಗನನ್ನು ಬಂಧಿಸುವವರ್‍ಯಾರು? ಸ್ವತಃ ಕಟ್ಟಾನೇ ಮಂತ್ರಿಯಾಗಿರುವಾಗ ಆತನ ಮಗನನ್ನು ಮಾತಾಡಿಸುವ ಧೈರ್ಯ ಯಾವ ಪೊಲೀಸನಿಗಿದೆ?

ರೈತ ನಾಯಕನ ಮೇಲೆ ಗೂಂಡಾ ದಾಳಿ

"ಇದು ಕೇಸರಿ ಭೂಗಳ್ಳರ ಪ್ರಥಮ ದುರಾಚಾರ ಘರ್ಷಣೆ ಚಿತ್ರದೇ. ದೂರೂ ದಾಖಲಾಗಿದೆ. ಹೆಣ್ಣೂರು ಇನ್ಸ್‌ಪೆಕ್ಟರ್ ಪ್ರೇಮಸಾಯಿಗೆ ನಿಜಕ್ಕೂ ಆರೋಪಿಗಳನ್ನು ಹಿಡಿಯುವ ತಾಕತ್ತಿದೆಯಾ ಎಂಬುದಷ್ಟೇ ಬಾಕಿಯಿರುವ ಪ್ರಶ್ನೆ.

ಏಕೆಂದರೆ ಇದು ಅಬಕಾರಿ ಮತ್ತು ವಾರ್ತಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಪುತ್ರ ಕಟ್ಟಾ ಜಗದೀಶನದ್ದೇ ಕೃತ್ಯ. ಹೆಣ್ಣೂರಿನ ರೈತರ ಹೋರಾಟ ಸಮಿತಿಯ ಅಧ್ಯಕ್ಷ ಡಿ.ಎಸ್. ಗೌಡರ ಅಂಗಡಿಗೆ ನುಗ್ಗಿ ಹಲ್ಲೆಗೆ ಯತ್ನಿಸಿದ ರೌಡಿಗಳ ಉದ್ದೇಶ, ಅವರ ಬಾಯಿಂದ ಬಂದ ಶಬ್ದಗಳು, ಹಾಕಿದ ಕೊಲೆ ಬೆದರಿಕೆ, ಕೊಟ್ಟ ಎಚ್ಚರಿಕೆ ಎಲ್ಲವೂ ಮಂತ್ರಿ ಕಟ್ಟಾ ನಾಯ್ಡುವಿನ ಹಿತಾಸಕ್ತಿಗನುಗುಣವಾಗಿಯೇ ನಡೆದಿದೆ.

ಬಿಜೆಪಿಗೆ ಅಧಿಕಾರ ದಕ್ಕುವುದಕ್ಕೂ ಯಡ್ಡಿ ಸಿಂಹಾಸನಕ್ಕೇರುವುದಕ್ಕೂ ಮತ್ತು ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತಲ ಬಡರೈತರ ಪರ ವಹಿಸಿ ಬೀದಿಗಿಳಿದಿದ್ದ ರೈತನಾಯಕನೊಬ್ಬನ ಮೇಲಿನ ಗೂಂಡಾದಾಳಿಗೂ ನಿಗೂಢ ಸಂಬಂಧವಿದೆ. ಘಟನೆ ನಡೆದದ್ದು ಜೂನ್ 1 ರ ರಾತ್ರಿ ಅಂದರೆ ಬಿಜೆಪಿ ಅಧಿಕಾರಕ್ಕೆ ಬಂದ ಮೊದಲ ಗಳಿಗೆಯಲ್ಲಿ. ಡಿ.ಎಸ್. ಗೌಡ ಕಳೆದ ಮೂರು ವರ್ಷಗಳಿಂದ ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತಲ ರೈತರನ್ನು ಸಂಘಟಿಸಿ ಕೆಐಎಡಿಬಿಯ ವಿರುದ್ಧ ಹೋರಾಡಿಕೊಂಡೇ ಬಂದ 'ರೈತರ ಹೋರಾಟ ಸಮಿತಿ'ಯ ಅಧ್ಯಕ್ಷ. ಮೂಲತಃ ಹಾಸನದ ಸದ್ಯ ಬೆಂಗಳೂರಿನ ಹೆಣ್ಣೂರಿನ ಬಿಟಿಎಸ್ ಡಿಪೋ ಪಕ್ಕದಲ್ಲಿ ಶ್ರೀಲಕ್ಷ್ಮಿ ಟೆಲಿಕಾಂ ಎಂಬ ಮೊಬೈಲ್ ಫೋನುಗಳ ಮಳಿಗೆ ನಡೆಸುವ ಡಿ.ಎಸ್. ಗೌಡರ ಬಗ್ಗೆ ದೇವನಹಳ್ಳಿ ಸುತ್ತಮುತ್ತಲ ಹಳ್ಳಿಗಳ ರೈತರಲ್ಲಿ ವಿಶೇಷ ಅಕ್ಕರೆಯಿದೆ.

ಕುಮಾರಸ್ವಾಮಿ ಸಂಪುಟದಲ್ಲಿ ಕಟ್ಟಾ ಭಾರೀ ಕೈಗಾರಿಕಾ ಮಂತ್ರಿಯಾಗುತ್ತಿದ್ದಂತೆ 'ಇಟಾಸ್ಕಾ' ಎಂಬ ನಕಲಿ ಐಟಿ ಕಂಪೆನಿಯನ್ನು ಸೃಷ್ಟಿಸಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೋಡಿಗೆಹಳ್ಳಿಯ ದಲಿತರ ನಾನೂರು ಎಕರೆ ಭೂಮಿಯನ್ನು ನುಂಗಲು ಹೊರಟಾಗ ಮೊದಲು ಬೀದಿಗಿಳಿದಿದ್ದೇ ಡಿ.ಎಸ್. ಗೌಡ. ಕಳ್ಳಕಂಪೆನಿಯ ಹೆಸರಲ್ಲಿ ದಲಿತರ ಬೆಲೆಬಾಳುವ ಭೂಮಿಯನ್ನು ಲಪಟಾಯಿಸಲು ಹೊರಟಿದ್ದ ಕಟ್ಟಾ ಮಂತ್ರಿಯಾಗುವುದಕ್ಕೂ ಮೊದಲೇ ಸದರಿ ಭೂಮಿಯ ಮೇಲೆ ಕಣ್ಣುಹಾಕಿದ್ದ. ಮಗ ಕಟ್ಟಾ ಜಗದೀಶ್ ಮತ್ತು ಪತ್ನಿ ಸೌಭಾಗ್ಯರ ಹೆಸರಿಗೆ ಜಿಪಿಎ ಮಾಡಿಸಿಕೊಂಡು ಅನೇಕರಿಗೆ ಅಡ್ವಾನ್ಸನ್ನೂ ಕೊಟ್ಟಿದ್ದ.

ಆದರೆ ಮುಖ್ಯಮಂತ್ರಿ ಕುಮಾರಸ್ವಾಮಿ ಮಾತ್ರ ಕಟ್ಟಾನ ಈ ಹಗಲುದರೋಡೆಯನ್ನು ಒಪ್ಪಲಿಲ್ಲ. ಕೆಐಎಡಿಬಿಯಿಂದ ಸ್ವಾಧೀನ ಮಾಡಿ ಕೊಡುವ ಬದಲು 'ನೀನೇ ರೈತರು ಕೇಳಿದಷ್ಟು ಪರಿಹಾರ ಕೊಟ್ಟು ಜಮೀನು ಬಿಡಿಸಿಕೋ' ಎಂದುಬಿಟ್ಟರು. ರೈತರು ಕೇಳಿದಷ್ಟು ಪರಿಹಾರ ಕೊಟ್ಟೇ ಜಮೀನು ಬಿಡಿಸಿಕೋ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಅಡ್ಡಗಾಲಿಡುವುದಕ್ಕೆ ಇದ್ದ ಮುಖ್ಯ ಕಾರಣವೇ ಡಿ.ಎಸ್. ಗೌಡ!

ರೈತರ ಹೋರಾಟ ಸಮಿತಿಯ ವತಿಯಿಂದ ರಸ್ತೆತಡೆಗಳಾದವು. ಸರ್ವೇ ಮಾಡಲು ಬಂದ ಕೆಐಎಡಿಬಿಯ ಅಧಿಕಾರಿಗಳನ್ನು ಘೇರಾವ್ ಮಾಡಿ ಓಡಿಸಿದ್ದರು. ಏರ್‌ಪೋರ್ಟ್ ಹಿಂಭಾಗದ ಹತ್ತಾರು ಗ್ರಾಮಗಳ ಸಹಸ್ರಾರು ರೈತರು ವಿಧಾನಸೌಧಕ್ಕೆ ಲಗ್ಗೆಯಿಟ್ಟರು. ಇದರ ಫಲವೇ ಎಕರೆ ಭೂಮಿಗೆ ರೈತನಿಗೆ ಎಂಟೂವರೆ ಸಾವಿರ ಅಡಿಗಳ ಪರಿಹಾರ ಕೊಡುವಂತೆ ಕುಮಾರಸ್ವಾಮಿ ಆದೇಶಿಸಿದ್ದು!



ಇದರಿಂದಾಗಿ ಬಂಡಿಕೋಡಿಗೆಹಳ್ಳಿಯ ಮುಗ್ಧ ದಲಿತರಿಗೆ ಎಕರೆಗೆ ಹದಿನೈದೋ ಹದಿನೆಂಟೋ ಲಕ್ಷ ಬಿಸಾಕಿ ಮಾರುಕಟ್ಟೆಯಲ್ಲಿ ಎಕರೆಗೆ ಒಂದೂಕಾಲು ಕೋಟಿ ಬೆಲೆಬಾಳುವ ನಾನೂರು ಎಕರೆ ದೋಚುವ ಕಟ್ಟಾ ಹುನ್ನಾರವೇ ತಲೆಕೆಳಕಾಗಿ ಬಿದ್ದಿತ್ತು, ಎಕರೆಗೆ ಹದಿನೆಂಟು ಲಕ್ಷದ ಬದಲು ಮೂವತ್ತೊಂದು ಲಕ್ಷ ಪರಿಹಾರ ಕಕ್ಕುವಂತಾಯ್ತು.

ಹೀಗೆ ಎಕರೆಯೊಂದಕ್ಕೆ 13 ಲಕ್ಷದಂತೆ ಆದ ಲುಕ್ಸಾನು 400 ಎಕರೆಗೆ ಐವತ್ತೆರಡು ಕೋಟಿಯಷ್ಟಾಗಿತ್ತು.

ಬಹುಶಃ ಜೆಡಿಎಸ್ ಹಂಗಿಲ್ಲದೇ ಹೋಗಿದ್ದರೆ ಬಿಜೆಪಿ ಬಹುಮತದ ಸರ್ಕಾರವಾಗಿದ್ದರೆ ಮಗ ಕಟ್ಟಾ ಜಗ್ಗನ ಗ್ಯಾಂಗ್ ಆ ಹೊತ್ತಿಗೇ ಡಿ.ಎಸ್. ಗೌಡರನ್ನು ಮುಗಿಸಿಬಿಡುತ್ತಿತ್ತು!

ರೈತರ ಹೋರಾಟ ಸಮಿತಿಯ ಪ್ರತಿಭಟನೆ ಕೇವಲ ಬಂಡಿಕೋಡಿಗೆಹಳ್ಳಿಗಷ್ಟೇ ಸೀಮಿತವಾಗಿರಲಿಲ್ಲ, ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತಲ ಬಾಗಲೂರು, ಹೂವಿನಾಯಕನಹಳ್ಳಿ, ಮಹದೇವ ಕೊಡಿಗೇಹಳ್ಳಿ, ಬಿ.ಕೆ. ಪಾಳ್ಯ, ಅರೆಬಿನ್ನಮಂಗಲ, ಸಿಂಗಳ್ಳಿ, ಗೊಲ್ಲಹಳ್ಳಿ, ಹುಣಸೂರು, ಕವಡದಾಸನಹಳ್ಳಿ, ದುಮ್ಮನಹಳ್ಳಿ, ಭಟ್ಟರಮಾರನಹಳ್ಳಿ, ಜೊನ್ನಹಳ್ಳಿ, ಬೆಟ್ಟಕೋಟೆ, ಬಾಲದಿಮ್ಮನಹಳ್ಳಿಗಳಿಗೂ ವಿಸ್ತರಿಸಿತು. ದೇವನಹಳ್ಳಿ ಏರ್‌ಪೋರ್ಟ್ ಮತ್ತು ಬೆಂಗಳೂರಿನ ಔಟರ್ ರಿಂಗ್‌ರೋಡ್ ಮಧ್ಯದ, ಚಿನ್ನದಷ್ಟೇ ಬೆಲೆಬಾಳುವ, ದಿಕ್ಕು ದೆಸೆಯಿಲ್ಲದ ಮುಗ್ಧ ರೈತರಿರುವ ಇಂಥ ಹಳ್ಳಿಗಳ ಭೂಮಿ ದೋಚಲು ಹೊಂಚು ಹಾಕಿದ್ದ ಭೂ ಡಕಾಯಿತರಿಗಿದು ನುಂಗಲಾರದ ತುತ್ತಾಯಿತು. ಇಂಥ ಭೂಕಂಟಕರಿಗೆಲ್ಲ ಬ್ರೋಕರ್‌ಗಳಂತಿದ್ದ ಕೆಐಎಡಿಬಿಯ ಉದ್ಯೋಗ ಮಿತ್ರದ ಎಂ.ಡಿ. ಶಿವಾನಂದ ಮತ್ತು ಕೈಗಾರಿಕೆ ಹಾಗೂ ವಾಣಿಜ್ಯ ಖಾತೆಯ ಪ್ರಿನ್ಸಿಪಲ್ ಸೆಕ್ರೆಟರಿ ಕೆ.ಎಂ. ಶಿವಕುಮಾರ್ ಸೇರಿಕೊಂಡು ಈ ಎಲ್ಲಾ ಹಳ್ಳಿಗಳ ಕೃಷಿ ಭೂಮಿಯನ್ನು ಒಂದೊಂದು ನಕಲಿ ಕಂಪೆನಿಗಳಿಗೆಂದು ನೋಟಿಫೈ ಮಾಡಾಗಿತ್ತು.

ಬಿ.ಕೆ. ಪಾಳ್ಯ ಅರೆಬಿನ್ನಮಂಗಲ, ಸಿಂಗಳ್ಳಿ ಮತ್ತು ಗೊಲ್ಲಹಳ್ಳಿಯ 1209 ಎಕರೆ ಲಪಟಾಯಿಸಲೆಂದು ಐಟಿ ಪಾರ್ಕ್, ಬಂಡಿಕೊಡಿಗೇಹಳ್ಳಿಯ ನಾನೂರೆಕರೆ ದಲಿತರ ಭೂಮಿ ನುಂಗಲು ಕಟ್ಟಾನ ಇಟಾಸ್ಕಾ, ಬಾಗಲೂರು, ಹೂವಿನನಾಯಕನಹಳ್ಳಿ, ಮಹದೇವ ಕೊಡಿಗೆಹಳ್ಳಿಯ 918 ಎಕರೆ ಕಬಳಿಸಲು ಹಾರ್ಡ್‌ವೇರ್ ಪಾರ್ಕ್ ಮತ್ತು ಹುಣಸೂರು, ದುಮ್ಮನಹಳ್ಳಿ, ಜೊನ್ನಹಳ್ಳಿ ಇತ್ಯಾದಿ ಏಳು ಗ್ರಾಮಗಳ ಇನ್ನೂ 918 ಎಕರೆ ದೋಚಲು ಏರೋಸ್ಪೇಸ್ ಇಂಡಸ್ಟ್ರೀಸ್, ಹೀಗೆ ಕಳ್ಳ ಕಂಪೆನಿಗಳನ್ನು ಹುಟ್ಟು ಹಾಕಿ ಪುಡಿಕಾಸಿಗೆ ರೈತರ ಭೂಮಿ ದೋಚಲು ಹೊಂಚು ಹಾಕಿದ್ದ ಬಹುತೇಕ ರಿಯಲ್ ಎಸ್ಟೇಟ್ ಖದೀಮರಿಗೆಲ್ಲ ಏಜೆಂಟನಂತಿದ್ದವನು ಭಾರಿ ಕೈಗಾರಿಕಾ ಮಂತ್ರಿಯಾಗಿದ್ದ ಕಟ್ಟಾ!

ಯಾವ್ಯಾವ ಭೂಮಿಗೆ ಕೆಐಎಡಿಬಿ ನೋಟಿಫೈ ಮಾಡುತ್ತಿತ್ತೋ ಅಂತಹ ಜಮೀನನ್ನೇ ಆಯ್ದು ಕಟ್ಟಾ ಗ್ಯಾಂಗ್ ಖರೀದಿಸುತ್ತಿತ್ತು. ಅದೂ ಪೂರ್ತಿ ದುಡ್ಡು ಕೊಡದೇ ಪುಡಿಕಾಸು ಕೊಟ್ಟು ಕಟ್ಟಾ ಪರವಾಗಿ ಜಿಪಿಎ ಮಾಡಿಸಿಕೊಳ್ಳಲೆಂದೇ ಬ್ರೋಕರ್‌ಗಳ ಹಿಂಡೊಂದು ಹುಟ್ಟಿಕೊಂಡಿತ್ತು. ಇಂಥ ಬ್ರೋಕರ್‌ಗಳ ಪೈಕಿ ಬಂಡಿಕೊಡಿಗೇಹಳ್ಳಿಯ 'ಬ್ರೋಕರ್ ಮಂಜ' ಮಹಾ ಪಾಖಂಡಿ. ಈತನ ಜೊತೆ ರಾಜಣ್ಣ ಮತ್ತು ನಾಗ ಎಂಬಿಬ್ಬರೂ ಕಟ್ಟಾ ಜಗ್ಗನ ಏಜೆಂಟರುಗಳಾಗಿದ್ದರೂ ದುಡ್ಡು ಮಾಡಿದ್ದು ಮಾತ್ರ ಕ್ರಿಮಿನಲ್ ಹಿನ್ನೆಲೆಯಿದ್ದ ಬ್ರೋಕರ್ ಮಂಜನೇ!



ಕಟ್ಟಾ ಜಗ್ಗನ ಪರವಾಗಿ ಈ ಸುತ್ತಮುತ್ತಲ ಅನೇಕ ರೈತರ ಭೂಮಿಯನ್ನು ಜಿಪಿಎ ಮಾಡಿಸಿಕೊಂಡಿದ್ದ ಬ್ರೋಕರ್ ಮಂಜನಿಗೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದೇ ಕೊಂಬು ಬಂದಂತಾಗಿದೆ. ಅದೇ ಹೊತ್ತಿಗೆ ಅಂದರೆ ಜೂನ್ 1ರ ಭಾನುವಾರದಂದು ಬಿಜೆಪಿಗೆ ಬಹುಮತ ಬಂದ ದಿನವೇ ಬಾಗಲೂರಿನಲ್ಲಿ ರೈತ ಹೋರಾಟ ಸಮಿತಿಯ ಸಭೆ ಸೇರಿದೆ. ಸಹಜವಾಗೇ ಇದು ಕಟ್ಟಾ ಜಗ್ಗನ ಪಿತ್ಥ ನೆತ್ತಿಗೇರಿಸಿದೆ. ಏಕೆಂದರೆ ಮತ್ತೆ ರೈತರೆಲ್ಲ ಒಗ್ಗಟ್ಟಾಗಿ ಹೆಚ್ಚಿಗೆ ಪರಿಹಾರ ಕೇಳಿಬಿಟ್ಟರೆ ಈಗಾಗಲೇ ಜಿಪಿಎ ಮಾಡಿಸಿಕೊಂಡ ಭೂಮಿಗೆ ಇನ್ನೂ ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ. ಈಗಾಗಲೇ 'ಪರದೇಶಿ' ಭೂಗಳ್ಳರ ಜೊತೆ ಒಪ್ಪಂದವಾಗಿರುವುದಕ್ಕಿಂತ ಹೆಚ್ಚಿಗೆ ಬೆಲೆ ಹುಟ್ಟುವುದಿಲ್ಲವಾದ್ದರಿಂದ ಆಗುವ ನಷ್ಟಕ್ಕೆ ತಾನೇ ತಲೆ ಕೊಡಬೇಕಾಗುತ್ತದೆ.

ರೈತರು ಬೀದಿಗಿಳಿಯದಂತೆ ಮಾಡಬೇಕೆಂದರೆ ಮೊದಲು ನಾಯಕ ಡಿ.ಎಸ್. ಗೌಡರನ್ನು ಮುಗಿಸಬೇಕೆಂದು ಲೆಕ್ಕ ಹಾಕಿದ ಕಟ್ಟಾ ಜಗ್ಗ ಬ್ರೋಕರ್ ಮಂಜನನ್ನು ಛೂ ಬಿಟ್ಟಿದ್ದಾನೆ. ಬಿಜೆಪಿ ಸರ್ಕಾರ ಬಂದಿದ್ದೇ ಕುಡಿದು ಚಿತ್ತಾಗಿದ್ದ ಬ್ರೋಕರ್ ಮಂಜ ತನ್ನ ಲೋಕಲ್ ರೌಡಿಗಳ ಹಿಂಡೊಂದನ್ನು ರೆಡಿ ಮಾಡಿದ್ದಾನೆ. ಸರಿಸುಮಾರು ಇನ್ನೂರು ಮಂದಿಯಿದ್ದ ಸಭೆಯಲ್ಲಿ ರೈತರ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಬಾಗಲೂರಿನ ಶಾಮಣ್ಣ, ಮುನಿರಾಜು, ಸುಬ್ಬಣ್ಣ, ಮಹದೇವ, ಕೊಡಿಗೇ ಹಳ್ಳಿಯ ನಾರಾಯಣ ಸ್ವಾಮಿ ಮುಂತಾದ ರೈತನಾಯಕರೆಲ್ಲ ಉಪಸ್ಥಿತರಿದ್ದಾರೆ.

ಏಕಾಏಕಿ ಸಭೆಗೆ ನುಗ್ಗಿದ ಬ್ರೋಕರ್ ಮಂಜನ ಗ್ಯಾಂಗ್ ಇದ್ದಕ್ಕಿದ್ದಂತೆ ಡಿ.ಎಸ್. ಗೌಡರ ವಿರುದ್ಧ ಧಿಕ್ಕಾರ ಕೂಗಿದೆ. ಇದನ್ನು ಕೇಳಿದ ರೈತರೆಲ್ಲ ಬ್ರೋಕರ್ ಮಂಜನ ರೌಡಿಗಳ ವಿರುದ್ಧ ತಿರುಗಿಬಿದ್ದಿದ್ದಾರೆ. ಇನ್ನೆಲ್ಲಿ ಒದೆ ಬೀಳುತ್ತೋ ಎಂದು ಜಾಗ ಖಾಲಿ ಮಾಡಿದ ರೌಡಿಪಡೆ ಸಭೆ ಮುಗಿಯುವುದನ್ನೇ ಕಾದಿದ್ದು ರಾತ್ರಿ ಏಳೂವರೆಯ ಹೊತ್ತಿಗೆ ಸಭೆ ಮುಗಿಸಿ ಹೊರಟಿದ್ದ ಡಿ.ಎಸ್. ಗೌಡರನ್ನು ಹಿಂಬಾಲಿಸಿದೆ. ಮಾಮೂಲಿನಂತೆ ಹೆಣ್ಣೂರಿನ ಬಿಟಿಎಸ್ ಡಿಪೋ ಪಕ್ಕದ ತಮ್ಮ ಅಂಗಡಿಗೆ ಬಂದ ಗೌಡರು ಇನ್ನೇನು ಅಂಗಡಿ ಮುಚ್ಚಬೇಕೆನ್ನುಷ್ಟರಲ್ಲಿ ಗ್ಯಾಂಗ್ ನುಗ್ಗಿದೆ.

ಅದು ಎಂಟು ಮಂದಿ ರೌಡಿಗಳಿದ್ದ ತಂಡ. ಗೌಡರನ್ನು ಸುತ್ತುವರಿದು ಒಬ್ಬಾತ 'ನೀನ್ಯಾರೋ ನಮ್ಮೂರಿಗೆ ಬಂದು ಸ್ಟ್ರೈಕ್ ಮಾಡೋದು?' ಎಂದು ಹೂಂಕರಿಸಿದರೆ ಮತ್ತೊಬ್ಬ ಫೋನ್ ಎತ್ತಿದ್ದೇ ಗೌಡರತ್ತ ಬಿಸಾಕಿದ್ದಾನೆ. ಮಗದೊಬ್ಬ ಪಕ್ಕದಲ್ಲಿದ್ದ ಟ್ರೇ ಎತ್ತಿ ಹೊಡೆಯಲು ಯತ್ನಿಸಿದ್ದಾನೆ. ಇನ್ನೊಬ್ಬ 'ಮುಚ್ಕೊಂಡು ನಿನ್ನ ಕೆಲಸ ಎಷ್ಟೋ ಅಷ್ಟು ನೋಡು. ಮತ್ತೊಂದ್ಸಲ ಏನಾದ್ರೂ ಹಳ್ಳಿಗಳಿಗೆ ಕಾಲಿಟ್ಟೆ ಅಂದ್ರೆ ತೆಗೆದುಬಿಡ್ತೀವಿ' ಎಂದು ಬೆದರಿಸಿದ್ದಾನೆ. ಸರಿಸುಮಾರು ಅರ್ಧ ಗಂಟೆ ಕಾಲ ಗೌಡರನ್ನು ಪೀಡಿಸಿದ ಗ್ಯಾಂಗ್ ರಾತ್ರಿ ಎಂಟು ಗಂಟೆಯ ಹೊತ್ತಿಗೆ ಕಣ್ಮರೆಯಾಗಿದೆ.

[illegible] ಅನಿರೀಕ್ಷಿತ ದಾಳಿಯಿಂದ ಕಂಗಾಲಾದ ಗೌಡ ದಿಕ್ಕು ತೋಚದೇ ಕುಸಿದುಬಿದ್ದಿದ್ದಾರೆ. ಇಷ್ಟಾಗ್ಯೂ ಮರುದಿನಕ್ಕಾದರೂ ಪೊಲೀಸ್ ಕಂಪ್ಲೇಂಟ್ ಕೊಡಬೇಕಿತ್ತು. ಆದರೆ ದೂರು ಕೊಡುವ ಧೈರ್ಯ ಮಾಡಿದ್ದು ಜೂನ್ 8ರ ಭಾನುವಾರಕ್ಕೆ. ಸದ್ಯ ಹೆಣ್ಣೂರು ಪೊಲೀಸರು ಗೌಡರು ಕೊಟ್ಟ ದೂರನ್ನು ದಾಖಲು ಮಾಡಿಕೊಂಡಿದ್ದಾರೆ. ಇದು ಕಟ್ಟಾ ಜಗ್ಗನದೇ ಕೃತ್ಯವೆಂದೂ ಆತನ ಆದೇಶದ ಮೇರೆಗೇ ಬ್ರೋಕರ್ ಮಂಜನ ಗ್ಯಾಂಗ್ ದಾಳಿ ನಡೆಸಿದೆಯೆಂದೂ ರೈತ ನಾಯಕ ಡಿ.ಎಸ್. ಗೌಡರಿಗೆ ಚೆನ್ನಾಗಿ ಗೊತ್ತು. ಪೊಲೀಸರಿಗೂ ಗೊತ್ತು. ಹಾಗಂತ ಬಂಧಿಸುವವರ್‍ಯಾರು? ಸ್ವತಃ ಕಟ್ಟಾನೇ ಮಂತ್ರಿಯಾಗಿರುವಾಗ ಆತನ ಮಗನನ್ನು ಮಾತಾಡಿಸುವ ಧೈರ್ಯ ಯಾವ ಪೊಲೀಸನಿಗಿದ್ದೀತು?

ಏಕೆಂದರೆ ರೈತರು ಬೀದಿಗಿಳಿದು ಹೋರಾಡುವುದರಿಂದ ನಷ್ಟವಾಗುವುದು ಕಟ್ಟಾ ಕೂಟಕ್ಕೇ. ಹೆಚ್ಚಿಗೆ ಪರಿಹಾರ ಕೊಡುವಂತಾದರೂ ಅದು ಕಟ್ಟಾ ಜೇಬಿಗೇ ಸಂಚಕಾರ. ಹಾಗೊಮ್ಮೆ ನಕಲಿ ಕಂಪೆನಿಯೆಂದು ಮಂಜೂರಾತಿ ರದ್ದಾದರೂ ಕಟ್ಟಾಗೇ ನಷ್ಟ. ಹೋರಾಟಕ್ಕಿಳಿದ ರೈತ ನಾಯಕನ ಬಾಯಿ ಮುಚ್ಚಿಸಬೇಕಾದ ಹರಕತ್ತಿರುವುದು ಕಟ್ಟಾ ಮಗ ಜಗದೀಶ ಮತ್ತು ಆತನ ಸಾಕುನಾಯಿ ಬ್ರೋಕರ್ ಮಂಜನಿಗೇ ಹೊರತು ಬೇರೆ ಯಾರಿಗೂ ಇಲ್ಲ.

ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಕಟ್ಟಾ ಗ್ಯಾಂಗ್‌ನ ರಿಯಲ್ ಎಸ್ಟೇಟ್ ದುರಾಚಾರವೂ ಭುಗಿಲೇಳುತ್ತಿವೆ. ನಾಡಿನ ಜನಪರ ರೈತ ಸಂಘಟನೆಗಳೆಲ್ಲ ರೈತನಾಯಕ ಡಿ.ಎಸ್. ಗೌಡರ ಬೆನ್ನಿಗೆ ನಿಲ್ಲದೇ ಹೋದರೆ ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತಲ ರೈತರೆಲ್ಲ ಬೀದಿಗೆ ಬೀಳುವುದು ಶತಸ್ಸಿದ್ಧ. ತನ್ನ ಚೇಲಾ ರೌಡಿಗಳನ್ನು ಬಿಟ್ಟು ರೈತರ ಹೋರಾಟವನ್ನು ಬಗ್ಗುಬಡಿಯುತ್ತೇನೆಂದು ಮಂತ್ರಿ ಕಟ್ಟಾನ ಮಗ ಭಾವಿಸಿದ್ದರೆ ಅದು ಆತನ ಮೂರ್ಖತನವಷ್ಟೇ.

ಪೊಲೀಸರು ಮೊದಲು ಕಟ್ಟಾನ ಮಗ ಜಗ್ಗನನ್ನು ಬಂಧಿಸಲಿ. ಡಿ.ಎಸ್. ಗೌಡರಿಗೆ ರಕ್ಷಣೆ ನೀಡುವಂತಾಗಲಿ. ಯಾವುದೇ ಪಕ್ಷ, ಲಾಬಿಗಳ ಬೆಂಬಲವಿಲ್ಲದೇ ಹೋರಾಟ ಕಟ್ಟಿದ ಗೌಡರನ್ನು ಬೆಂಬಲಿಸುವುದು [illegible]ಪರ ಸಂಘಟನೆಗಳ ಧರ್ಮ ಕೂಡ.

■ ರಾ. ಸೋಮನಾಥ್

ದಂಗೆಯ ದಮನ




ಹುರಿಯತ್ ಕಾನ್ಫರೆನ್ಸ್ ಸದ್ಯಕ್ಕೆ ಕಾಶ್ಮೀರದಲ್ಲಿನ ಹಲವು ಹೋರಾಟನಿರತ ಸಂಘಟನೆಗಳ ಒಕ್ಕೂಟ. ಚುನಾವಣೆಗಳನ್ನು ಬಹಿಷ್ಕರಿಸಲು ಕರೆಕೊಟ್ಟ ಹುರಿಯತ್ ಕಾನ್ಫರೆನ್ಸ್‌ನಂಥ ಸಂಘಟನೆಗಳ ಕಾರ್ಯಕರ್ತರ ಮೇಲೆ ದಾಳಿಗಳು ನಡೆದವು. ಇಂಥ ದಮನ ನೀತಿಯ ವಿರುದ್ಧ ಜನರು ತಮ್ಮ ಅಸಮಾಧಾನವನ್ನು ತಮ್ಮದೇ ಆದ ಹಲವು ರೀತಿಗಳಲ್ಲಿ ವ್ಯಕ್ತಪಡಿಸಿದರು. ಹಲವು ಪ್ರತಿಭಟನೆಗಳೂ ನಡೆದವು. ಆ ಪ್ರತಿಭಟನಾಕಾರರ ಮೇಲೆ ಸೈನಿಕರು ಗುಂಡು ಹಾರಿಸಿದಾಗ ಪ್ರಾಣನಷ್ಟವೂ ಸಂಭವಿಸಿತು.

■ ನಗರಗೆರೆ ರಮೇಶ್

ಪ್ರಕ್ಷುಬ್ಧ ಕಾಶ್ಮೀರ

ಭಾಗ 2

ದಿ ಇನ್‌ಸ್ಟಿಟ್ಯೂಟ್ ಆಫ್ ಕಾಶ್ಮೀರ್ ಸ್ಟಡೀಸ್ ಎಂಬ ಸಂಸ್ಥೆ ಕಾಶ್ಮೀರಿ ಚಳವಳಿಯನ್ನು ವಿಶ್ಲೇಷಿಸುತ್ತಾ ಒಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಿದೆ. "ಭಾರತ ಸರ್ಕಾರವು ಕಾಶ್ಮೀರಿಗಳಿಗೆ ಪ್ಲೆಬಿಸೈಟ್ ಬಗ್ಗೆ ಕೊಟ್ಟಿದ್ದ ಭರವಸೆ ನಿಜವಾಗಬಹುದೆಂಬ ಆಶಯದಿಂದ 1989ರ ವರೆಗೂ ಆ ರಾಜ್ಯದ ಪ್ರಜೆಗಳು ಶಾಂತಿಯುತವಾಗಿಯೇ ಚಳವಳಿಯನ್ನು ನಡೆಸಿದರು. ಆದರೆ ಆನಂತರ ಭಾರತ ಸರ್ಕಾರವು ಹೇಗೆ ತಮಗೆ ಮೋಸ ಮಾಡುತ್ತಿದೆ ಎಂದ ಅರ್ಥಮಾಡಿಕೊಂಡು, ತಮ್ಮ ಉದ್ದೇಶ ಸಾಧನೆಗೆ ಶಸ್ತ್ರ ಹಿಡಿಯುವುದೇ ಮಾರ್ಗವೆಂದು ಭಾವಿಸಿದರು" ಎಂಬುದೇ ಆ ವಿಷಯ. 1989ರ ಹಿಂದೆಯೂ ಕೆಲವು ಹಿಂಸಾತ್ಮಕ ಘಟನೆಗಳು ನಡೆದಿದ್ದವು. ಸ್ವಾತಂತ್ರ್ಯ ಬೇಕೆಂದು ಅಂತಹ ಹಿಂಸಾ ತ್ಮಕ ಹೋರಾಟದಲ್ಲಿ ಭಾಗವಹಿಸಿದ್ದ ಮಕ್ಬೂಲ್ ಭಟ್ ಎಂಬಾತನನ್ನು 1984 ಫೆಬ್ರವರಿ 11 ರಂದು ಭಾರತ ಸರ್ಕಾರವು ಗಲ್ಲಿಗೇರಿಸಿತು. ಇವತ್ತಿಗೂ ಭಟ್ ಗಲ್ಲಿಗೇರಿದ ಫೆಬ್ರವರಿ 11ರಂದು ಕಾಶ್ಮೀರಿಗಳು ಹುತಾತ್ಮರ ದಿನವಾಗಿ ಆಚರಿಸುತ್ತಾರೆ.



ಮಕ್ಬೂಲ್ ಭಟ್

ಕೆಲವರು ಕಾಶ್ಮೀರಿಗಳ ಹೋರಾಟಕ್ಕೆ ಪಕ್ಕದ ಪಾಕಿಸ್ತಾನದ ಸರ್ಕಾರ ಸಹಕಾರ ನೀಡುತ್ತಿದೆ ಎಂದು ಆಪಾದಿಸುತ್ತಾರೆ. ಅಂತಹ ಆಪಾದನೆ ಕೇಳಿಬಂದಾಗಲೆಲ್ಲ ಕಾಶ್ಮೀರಿಗಳು ಹಿಂದೊಮ್ಮೆ ಭಾರತ ಸರ್ಕಾರವೂ ಪಾಕಿಸ್ತಾನದ ವಿರುದ್ಧ ಬಾಂಗ್ಲಾದೇಶಿಗಳಿಗೆ ಹಾಗೂ ಶ್ರೀಲಂಕಾದ ವಿರುದ್ಧ ಅಲ್ಲಿನ ತಮಿಳರಿಗೆ ಸಹಾಯವನ್ನು ನೀಡಿತ್ತಲ್ಲವೇ ಎಂದು ದೆಹಲಿಯತ್ತ ಬೆಟ್ಟು ಮಾಡಿ ತೋರಿಸುತ್ತಾರೆ.

ಕಾಶ್ಮೀರಿಗಳ ಪರವಾಗಿ ಭಾರತ ಸರ್ಕಾರದ ವಿರುದ್ಧ ಹೋರಾಡುತ್ತಿರುವ ಸಂಘಟನೆಗಳು ಹಲವು ಮತ್ತು ಹಲವು ರೀತಿಯವು. ಅವುಗಳಲ್ಲಿ ಜೆಕೆಎಲ್‌ಎಫ್ ಪ್ರಮುಖವಾಗಿದ್ದು, ಧರ್ಮ ನಿರಪೇಕ್ಷತೆಯನ್ನು ಒಪ್ಪಿಕೊಂಡಿರುವ ಸಂಘಟನೆ. ಆದರೆ ಉಳಿದ ಹಲವು ಸಂಘಟನೆಗಳು ಸನಾತನ ಮುಸ್ಲಿಂ ವಾದಿ ಸಂಘಟನೆಗಳು. ಆ ಕಾರಣಕ್ಕಾಗಿ ಪಾಕಿಸ್ತಾನ ಜೆಕೆಎಲ್‌ಎಫ್‌ಅನ್ನು ವಿರೋಧಿಸಿ ಅದರ ವಿರುದ್ಧ ಇತರೆ ಸಂಘಟನೆಗಳಿಗೆ ಸಹಾಯ ನೀಡಿತು. ಅದೇ ಹೊತ್ತಿನಲ್ಲಿ ಭಾರತ ಸರ್ಕಾರವೂ ಜೆಕೆಎಲ್‌ಎಫ್‌ನ್ನು ಬಲಹೀನಗೊಳಿಸಲು ಯತ್ನಿಸಿತು. ಇದೆಲ್ಲದರ ಪರಿಣಾಮವಾಗಿ ಇಂದು ಜಮ್ಮು ಕಾಶ್ಮೀರದಲ್ಲಿ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಶಕ್ತಿಯುತವಾಗಿದ್ದು ಅವೆಲ್ಲ ಕಾಶ್ಮೀರಿಯತ್‌ಅನ್ನೇ ನಾಶಗೊಳಿಸುವ ಹಂತಕ್ಕೆ ಹೋಗಿದ್ದಾವೆ.

ಒಂದು ರೀತಿಯಲ್ಲಿ ಭಾರತ ಸರ್ಕಾರವೂ ಮುಸ್ಲಿಂ ವಿರೋಧಿ ಭಾವನೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಅಲ್ಲಿನ ಹೋರಾಟ ಮುಸ್ಲಿಂ ಸನಾತನ ವಾದಿಗಳದ್ದು ಮಾತ್ರ ಎಂದು ಸಾಬೀತುಪಡಿಸಲು ಭಾರತ ಸರ್ಕಾರ ಪ್ರಯತ್ನಿಸಿರುವುದು ಇದಕ್ಕೊಂದು ಉದಾಹರಣೆ. ಜಗ್‌ಮೋಹನ್ ಜಮ್ಮು ಕಾಶ್ಮೀರದ ರಾಜ್ಯಪಾಲನಾಗಿದ್ದ ಎರಡು ಬಾರಿಯೂ ಆತ ತೆಗೆದುಕೊಂಡ ಕ್ರಮಗಳಿಂದಾಗಿ ಹಿಂದೂ ಮತ್ತು ಮುಸ್ಲಿಮರ ನಡುವಿನ ಅಂತರ ಹೆಚ್ಚಿತು. ಕಾಶ್ಮೀರಿ ಪಂಡಿತರು ಕಾಶ್ಮೀರ ಕಣಿವೆಯನ್ನು ತೊರೆದು ಜಮ್ಮು ಮತ್ತು ಇತರೆ ಪ್ರದೇಶಗಳಲ್ಲಿ ನಿರಾಶ್ರಿತರಾಗಿ ವಾಸಿಸುವಂತಾದದ್ದೂ ಜಗ್‌ಮೋಹನ್‌ನ ನಿರ್ಧಾರಗಳಿಂದಾಗಿಯೇ ಎಂಬುದು ಈಗ ಎಲ್ಲರಿಗೂ ತಿಳಿದಿರುವ ವಿಷಯ.

ಜಗ್‌ಮೋಹನ್‌ನ ಆಡಳಿತದ ಕಾಲಘಟ್ಟದಲ್ಲಿ ಜನಸಾಮಾನ್ಯರ ಮೇಲೆ ಸೈನ್ಯದ, ಅರೆ ಸೈನಿಕ ಪಡೆಗಳ ದಾಳಿಗಳೂ ಹೆಚ್ಚಾದವು. ಆ ದಾಳಿಗಳ ಹಿಂದೆ ಮುಸ್ಲಿಂ ವಿರೋಧಿ ಮನೋಭಾವವೂ ಸಾಕಷ್ಟು ಮಟ್ಟಿಗೆ ಇತ್ತು ಎಂಬುದಕ್ಕೆ ಹಲವು ಘಟನೆಗಳೇ ಸಾಕ್ಷಿ ನೀಡುತ್ತವೆ. ಅಂಥ ಸ್ಥಿತಿಯಲ್ಲಿ ಮುಸ್ಲಿಮರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳ ಬೇಕಾದ ಅನಿವಾರ್ಯತೆಯೂ ಉಂಟಾಯಿತು. ಭಾರತ ಸರ್ಕಾರವಂತೂ ಕಾಶ್ಮೀರ ಕೇವಲ ಒಂದು ಭೂಭಾಗವೆಂಬ ಕಲ್ಪನೆಗೆ ಅಂಟಿಕೊಂಡು ಕೂತಿದ್ದು ಅಲ್ಲಿನ ಪರಿಸ್ಥಿತಿ ಬಿಗಡಾಯಿಸುವುದಕ್ಕೆ ನೆರವಾಯಿತು.

ಸನಾತನವಾದಿ ಮುಸ್ಲಿಂ ಸಂಘಟನೆಗಳು ಕಾಶ್ಮೀರ ಕಣಿವೆಯಲ್ಲಿ ತಮ್ಮ ಕೋಮುವಾದಿ ಚಿಂತನೆಯನ್ನು ಹರಡುವುದಕ್ಕೆ ಈ ಪರಿಸ್ಥಿತಿಯನ್ನು ಚೆನ್ನಾಗಿ ಬಳಸಿಕೊಂಡವು. ಹಾಗೆಯೇ ಕಾಶ್ಮೀರದ ಹಿಂದೂಗಳತ್ತ ತಮ್ಮ ಆಯುಧಗಳನ್ನು ತಿರುಗಿಸಿದವು. ಇಂಥ ಘಟನೆಗಳಿಂದಾಗಿ ಕಾಶ್ಮೀರದಲ್ಲಿನ ಧರ್ಮ ನಿರಪೇಕ್ಷತಾ ವಾತಾವರಣಕ್ಕೆ ಧಕ್ಕೆಯುಂಟಾಯಿತು.

ಇದರ ಜತೆಗೆ ಕಾಶ್ಮೀರಿ ಹೋರಾಟವನ್ನು ಒಂದು ರಾಷ್ಟ್ರೀಯ ಹೋರಾಟವೆಂದಲ್ಲದೆ ಮುಸ್ಲಿಮರ ಹೋರಾಟವೆಂದು ಭಾರತ ಸರ್ಕಾರ ಪ್ರತಿಬಿಂಬಿಸಲು ಯತ್ನಿಸಿದ ಕಾರಣದಿಂದಲೂ ಅಲ್ಲಿನ ಕಾಶ್ಮೀರಿಯತ್ ಸಿದ್ಧಾಂತಕ್ಕೆ ಅಡಚಣೆ ಉಂಟಾಯಿತು. ಕಣಿವೆಯಲ್ಲಿನ ಪರಿಸ್ಥಿತಿಗಳಿಂದಾಗಿ ಅಲ್ಲಿನ ಬಹುಪಾಲು ಹಿಂದೂಗಳು ಜಮ್ಮು, ದೆಹಲಿ ಹಾಗು ಇತರೆ ಪ್ರದೇಶಗಳಲ್ಲಿನ ನಿರಾಶ್ರಿತರ ಶಿಬಿರಗಳಲ್ಲಿ ಇವತ್ತಿಗೂ ಅಸಹಾಯಕರಾಗಿ ವಾಸಿಸುವಂತಾಗಿದೆ. ಅದೇ ರೀತಿ ಹಲವಾರು ಮುಸ್ಲಿಮರೂ ಸಹ ದೂರದ ಪ್ರದೇಶಗಳಿಗೆ ವಲಸೆ ಹೋಗಬೇಕಾದ ಪರಿಸ್ಥಿತಿ ಬಂದು, ಅವರೆಲ್ಲ ಇವತ್ತು ಎಲ್ಲಿದ್ದಾರೆಂದು ತಿಳಿಯುವುದೂ ಅಸಾಧ್ಯವಾಗಿದೆ.

ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯ ಪ್ರಕಾರ ಕಾಶ್ಮೀರದಲ್ಲಿನ ಹಿಂಸೆಯಿಂದಾಗಿ 1989ರಿಂದ 1995 ಜುಲೈವರೆಗೂ 20,000 ಜನ ಹತರಾಗಿದ್ದಾರೆ. ಆದರೆ ಹುರಿಯತ್ ಕಾನ್ಫರೆನ್ಸ್‌ನಂಥ ಸಂಘಟನೆಗಳ ಪ್ರಕಾರ ಆ ಸಂಖ್ಯೆ 40,000. ಇದರಲ್ಲಿ ಸೈನ್ಯ ಪೊಲೀಸ್ ಮತ್ತು ಹೋರಾಟಗಾರರ ಕೈಯಲ್ಲಿ ಮಡಿದ ಎಲ್ಲರೂ ಸೇರಿದ್ದಾರೆ. ತಮಗೆ ಸಂದೇಹವಿರುವವರನ್ನು ಬಂಧಿಸಿ ಅವರಿಗೆ ಚಿತ್ರ ಹಿಂಸೆ ನೀಡುವಲ್ಲಿ ಕಾಶ್ಮೀರದಲ್ಲಿನ ಭಾರತದ ಸೈನ್ಯ ಹಾಗೂ ಪೊಲೀಸ್ ಇಲಾಖೆ ಕುಖ್ಯಾತಿಯನ್ನು ಗಳಿಸಿದ್ದು ಆ ವಿವರಗಳು ಆಘಾತಕಾರಿಯಾಗಿವೆ. ಹಲವು ಸಂದರ್ಭಗಳಲ್ಲಿ ಮಹಿಳೆಯರ ಮೇಲೆ ಅವರು ನಡೆಸುವ



ಅತ್ಯಾಚಾರ ಮತ್ತು ಲೈಂಗಿಕ ಶೋಷಣೆಗಳೂ ಕಾಶ್ಮೀರಿಗಳ ಕ್ರೋಧವನ್ನು ಇಮ್ಮಡಿಗೊಳಿಸಿವೆ.

ಇಂಥ ಕಾರ್ಯಾಚರಣೆಗಳಿಂದಾಗಿ ಕಾಶ್ಮೀರದ ಜನ ಬೇಸತ್ತಿದ್ದಾರೆ. 1995ರಲ್ಲಿ ಒಂದು ಪತ್ರಿಕೆ ನಡೆಸಿದ ಸಮೀಕ್ಷೆ ಹೇಳಿದ್ದೇನೆಂದರೆ ಅಲ್ಲಿನ ಶೇಕಡ 72 ಜನ ಭಾರತ ಮತ್ತು ಪಾಕಿಸ್ತಾನದಿಂದ ಪ್ರತ್ಯೇಕವಾದ ಸ್ವಾತಂತ್ರ್ಯವನ್ನು ಬಯಸಿದರೆ, ಶೇಕಡ 19 ಜನ ಪಾಕಿಸ್ತಾನದೊಂದಿಗೆ ವಿಲೀನವನ್ನು ಬಯಸಿದರು. ಮಾತ್ರವಲ್ಲ, ಶೇಕಡ 84 ಕಾಶ್ಮೀರಿಗಳು ತಮ್ಮ ಸಮಸ್ಯೆಗಳಿಗೆ ಭಾರತ ಸಂವಿಧಾನದ ಪರಿಧಿಯಲ್ಲಿ ಪರಿಹಾರ ಸಿಗುವುದಿಲ್ಲವೆಂದೇ ಅಭಿಪ್ರಾಯಪಟ್ಟರು.

ಹುರಿಯತ್ ಕಾನ್ಫರೆನ್ಸ್ ಸದ್ಯಕ್ಕೆ ಕಾಶ್ಮೀರದಲ್ಲಿನ ಹಲವು ಹೋರಾಟನಿರತ ಸಂಘಟನೆಗಳ ಒಕ್ಕೂಟ. ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವತ್ತ ಭಾರತ ಸರಕಾರವು ಯಾವುದೇ ಮಾತುಕತೆಗಳಲ್ಲಿ ಹುರಿಯತ್ ಕಾನ್ಫರೆನ್ಸ್‌ಅನ್ನು ಸೇರಿಸಿಕೊಳ್ಳದಿದ್ದರೆ ಈ ಸಮಸ್ಯೆಗೆ ಪರಿಹಾರ ಸಿಗುವುದು ಅಸಾಧ್ಯ.


ಚುನಾವಣೆ ಎಂಬ ನಾಟಕ

ಭಾರತ ಸರ್ಕಾರ ಕಾಶ್ಮೀರದಲ್ಲಿ ಚುನಾವಣೆಗಳನ್ನು ನಡೆಸುವುದರ ಹಿಂದಿನ ಉದ್ದೇಶ ಅಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸುವುದಾಗಿಲ್ಲ, ಬದಲಾಗಿ ಆ ಚುನಾವಣೆಗಳಲ್ಲಿ ಜನರು ಭಾಗವಹಿಸಿದಂತೆ ಮಾಡಿ, ತನಗೆ ಇಷ್ಟವಾಗುವಂತಹ ಫಲಿತಾಂಶವನ್ನು ಪಡೆಯುವ ಮೂಲಕ ಆ ರಾಜ್ಯದ ಜನರು ಭಾರತದೊಂದಿಗೆ ವಿಲೀನವಾಗಿರಲು ಒಪ್ಪಿದ್ದಾರೆ ಎಂದು ವಿಶ್ವದ ಇತರ ರಾಷ್ಟ್ರಗಳಿಗೆ ತಿಳಿಯಪಡಿಸುವುದೇ ಆಗಿದೆ. ಭಾರತದಲ್ಲಿನ ಬುದ್ಧಿಜೀವಿ ವರ್ಗವೂ ಸರ್ಕಾರದ ಈ ವಾದಕ್ಕೆ ಪುಷ್ಟಿ ನೀಡುತ್ತಾ ಬಂದಿದೆ. ಆ ಮೂಲಕ ಅಲ್ಲಿನ ಚುನಾವಣೆಗಳು ಯಾವುದೇ ರೀತಿಯಲ್ಲಿ ನಡೆಯಲಿ, ಅವುಗಳಿಗೆ ಮನ್ನಣೆ ಸಿಕ್ಕಿದೆ.

1996ರ ಸಾರ್ವತ್ರಿಕ ಚುನಾವಣೆಗಳ ಭಾಗವಾಗಿ ಮೇ 27 ಮತ್ತು 30ರಂದು ಕಾಶ್ಮೀರದ ಮೂರು ಲೋಕಸಭಾ ಕ್ಷೇತ್ರಗಳಿಗೂ ಚುನಾವಣೆಗಳು ನಡೆದವು. ಆ ಸಂದರ್ಭದಲ್ಲಿ ಸರ್ಕಾರದ ಪರವಿದ್ದ ಮಾಜಿ ಹೋರಾಟಗಾರರನ್ನು ಜನರ ಮೇಲೆ ಒತ್ತಡ ಹೇರುವುದಕ್ಕಾಗಿ ಭಾರತ ಸರಕಾರವು ಹೇರಳವಾಗಿ ಬಳಸಿಕೊಂಡಿತು. ಸರಕಾರವು ಅವರಿಗೆ ಆಯುಧಗಳನ್ನೂ ನೀಡಿತು. ಸರ್ಕಾರದ ವಿರೋಧಿಗಳನ್ನು ಕೊಲ್ಲಲು ಹಾಗೂ ಸಾಮಾನ್ಯರನ್ನು ಹೆದರಿಸಲು ಆ ಆಯುಧಗಳು ಬಳಕೆಯಾದವು. ಹೀಗೆ ಅವರೆಲ್ಲ ಸೈನ್ಯದ ಕೆಲಸ ಮಾಡಿ ಮುಗಿಸಿದ ಮೇಲೆ, ಅದೇ ಸೈನ್ಯದ ಕೈಯಲ್ಲೇ ಹಲವು ಸರ್ಕಾರಿ ಹೋರಾಟಗಾರರೇ ಸತ್ತ ಉದಾಹರಣೆಗಳೂ ಇವೆ.

ಈ ಸರ್ಕಾರಿ ಹೋರಾಟಗಾರರ ರೀತಿಯಲ್ಲಿಯೇ ಹಿಜ್‌ಬುಲ್ ಮುಜಾಹಿದೀನ್‌ನಂಥ ಸಂಘಟನೆಗಳೂ ಸಹ ತಮ್ಮ ಕ್ರೌರ್ಯದಿಂದಾಗಿ ಕುಖ್ಯಾತಿ ಪಡೆದಿವೆ. ತಮ್ಮನ್ನು ವಿರೋಧಿಸುವವರ ಮೇಲೆ ಇವರೂ ಸಹ ದಾಳಿಗಳನ್ನು ನಡೆಸಿದ್ದಾರೆ, ಹಲವ ರನ್ನು ಕೊಂದಿದ್ದಾರೆ. ಇಂಥ ವಾತಾವರಣದಲ್ಲಿ ಕಾಶ್ಮೀರದ ಬುದ್ಧಿಜೀವಿಗಳು ಸೇರಿದಂತೆ ಎಲ್ಲರೂ ಮುಕ್ತವಾಗಿ ಮಾತನಾಡಲು ಹೆದರುತ್ತಾರೆ. ಮಾನವಹಕ್ಕು ಸಂಘಟನೆ ಗಳ ಜೊತೆ ಮಾತನಾಡಿದರೆ ಸೈನ್ಯದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆಂಬ ಭಯ ಜನಸಾಮಾನ್ಯರದ್ದು.

ಸರ್ಕಾರಿ ಹೋರಾಟಗಾರರು ಅಥವಾ ರೆನೆಗೇಡುಗಳನ್ನು ಕಂಡರೆ ಕೇವಲ ವಿಲೀನದ ವಿರೋಧಿಗಳಿಗೆ ಮಾತ್ರವಲ್ಲ, ಅವರ ಪರವಾಗಿರುವ ಕಾಂಗ್ರೆಸ್ ಪಕ್ಷದವರಿಗೂ ಹೆದರಿಕೆ. ಈ ರೆನೆಗೇಡುಗಳಲ್ಲಿ ಹಲವು ಗುಂಪುಗಳಿದ್ದು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬೇರೆಬೇರೆ ಗುಂಪುಗಳು ತಮ್ಮ ತೋಳ್ಬಲವನ್ನು ಪ್ರದರ್ಶಿಸುತ್ತವೆ. ಸೈನ್ಯದಿಂದ ಇವರೆಲ್ಲರಿಗೆ



…ಶವಾಗಿ ನೆರವು ಸಿಗುತ್ತದೆ. ಇದರ ಜೊತೆಗೆ ಅವರು …ಮ್ಮ ಕಾನೂನು ವಿರೋಧಿ ಕೃತ್ಯಗಳಾದ ಕಾಡಿನ …ಟಿಯಂಥ ದಂಧೆಗಳ ಮೂಲಕವೂ ಸಾಕಷ್ಟು …ಪಾದಿಸುತ್ತಾರೆ. ಭಾರತ ಸೈನ್ಯದ ಭಾಗವಾದ ರಾಷ್ಟ್ರೀಯ …ಫಲ್ಸ್ ಈ ರೆನೆಗೇಡುಗಳ ಪ್ರಧಾನ ಪೋಷಕ. ಒಂದು …ಧಾರಣವಾದ ಬಂದ್ ಕರೆಯನ್ನು ವಿಫಲಗೊಳಿಸಲೂ …ತ ರೆನೆಗೇಡುಗಳ ಮತ್ತು ಅವರ ಬಂದೂಕುಗಳ …ಳಕೆಯಾಗುತ್ತದೆ.

ಚುನಾವಣೆಗಳ ಹಿನ್ನೆಲೆಯಲ್ಲಿ ಮಾತನಾಡಿದ ಹಲವು …ಮಾನ್ಯ ಜನರು ತಾವು ಮೂರು ಬಂದೂಕುಗಳ–ಸೈನ್ಯ …ಜ್‌ಬುಲ್ ಮುಜಾಹಿದೀನ್ ಥರದ ಸಂಘಟನೆಗಳು ಮತ್ತು ರೆನೆಗೇಡುಗಳು–ನಡುವೆ ಸಿಕ್ಕಿ ನರಳುತ್ತಿರುವುದಾಗಿ …ಳುತ್ತಾರೆ. ಇಂಥ ಹಿಂಸೆ ತುಂಬಿದ ವಾತಾವರಣದಲ್ಲಿ …ರಾಶೆ ಮನೆ ಮಾಡಿದ್ದರೂ, ಬಲವಂತದ …ಚುನಾವಣೆಗಳಲ್ಲಿ ಅವರು ಭಾಗವಹಿಸಿದ್ದರೂ, ಅಲ್ಲಿನ …ಹುಪಾಲು ಜನರಲ್ಲಿ ಸ್ವಾತಂತ್ರ್ಯದ ಆಕಾಂಕ್ಷೆಯಂತೂ …ಡಿಮೆಯಾಗಿಲ್ಲ.

ಸೈನ್ಯ ಹಾಗೂ ರೆನೆಗೇಡುಗಳು ಸೇರಿ ಅಂದು …ಚುನಾವಣೆಗಳನ್ನು ಯಶಸ್ವಿ ಮಾಡಿದ್ದರೆ ಬಗ್ಗೆ ಕಾಶ್ಮೀರದ …ಜ್ಯಪಾಲರಾಗಿದ್ದ ಜನರಲ್ ಕೃಷ್ಣರಾವ್‌ರಂಥವರು …ಬ್ಬುಗೆಯನ್ನು ವ್ಯಕ್ತಪಡಿಸಿದ್ದರು. ಆದರೆ ರೆನೆಗೇಡುಗಳಲ್ಲಿ …ಪ್ರಮುಖನಾದ ಪಾಪಾವಾರಿಯ ಮಾತುಗಳು …ಸ್ತವವನ್ನು ಹೊರ ಚೆಲ್ಲುತ್ತವೆ. ತನ್ನ ಬಂದೂಕಿನ …ರಣದಿಂದಲೇ ಭಾರತದ ಪ್ರಜಾತಂತ್ರ ಕಾಶ್ಮೀರದಲ್ಲಿ …ಂತಿದೆ ಎಂಬುದು ಅವನ ಬಹಿರಂಗ ಹೇಳಿಕೆ.

ಇಂಥ ಹಿನ್ನೆಲೆಯಲ್ಲಿ ನಡೆದ ಚುನಾವಣೆಗಳಲ್ಲಿ …ನರ ಭಾಗವಹಿಸುವಿಕೆಗಿಂತಲೂ ಹೆಚ್ಚಾಗಿ …ಡುಬಂದದ್ದು ಸೈನ್ಯದ ಹಾಗೂ ರೆನೆಗೇಡುಗಳ …ಾಗವಹಿಸುವಿಕೆ. ಹಲವು ಉದಾಹರಣೆಗಳು ಈ …ಾತಿಗೆ ಪುಷ್ಟಿ ನೀಡುತ್ತವೆ. ಹಿಂದೆಯೇ ಇದ್ದ ಮೂರು …ಕ್ಷ ಸೈನಿಕರ ಜತೆಗೆ ಚುನಾವಣೆಗಳಿಗೆಂದೇ ಇನ್ನೂ …0 ಸಾವಿರ ಸೈನಿಕರನ್ನು ಕಣಿವೆಯ ಪ್ರಾಂತ್ಯದಲ್ಲಿ …ಯೋಜಿಸಲಾಯಿತು. ಶ್ರೀನಗರದಿಂದ ಪ್ರಕಟವಾಗುವ …ಲ್ಲ ವೃತ್ತ ಪತ್ರಿಕೆಗಳ ಮೇಲೆ ನಿರ್ಬಂಧ ವಿಧಿಸಿದ್ದರಿಂದ …ವು ಪ್ರತಿಭಟನಾತ್ಮಕವಾಗಿ ಪ್ರಕಟವನ್ನೇ ನಿಲ್ಲಿಸಿದವು. …ಣಾಮವಾಗಿ ಅಲ್ಲಿ ಏನು ನಡೆಯುತ್ತಿತ್ತು ಎಂಬುದು …ೂರಗಿನ ಪ್ರಪಂಚದ ಜನರಿಗೆ ತಿಳಿಯದೇ ಹೋಯಿತು.



ಚುನಾವಣೆಗಳನ್ನು ಬಹಿಷ್ಕರಿಸಲು ಕರೆಕೊಟ್ಟ …ರಿಯತ್ ಕಾನ್ಫರೆನ್ಸ್‌ನಂಥ ಸಂಘಟನೆಗಳ …ರ್ಯಕರ್ತರ ಮೇಲೆ ದಾಳಿಗಳು ನಡೆದವು. ಇಂಥ …ಮಾನ ನೀತಿಯ ವಿರುದ್ಧ ಜನರು ತಮ್ಮ …ಸಮಾಧಾನವನ್ನು ತಮ್ಮದೇ ಆದ ಹಲವು ರೀತಿಗಳಲ್ಲಿ …ಕ್ತಪಡಿಸಿದರು. ಹಲವು ಪ್ರತಿಭಟನೆಗಳೂ ನಡೆದವು. ಪ್ರತಿಭಟನಾಕಾರರ ಮೇಲೆ ಸೈನಿಕರು ಗುಂಡು …ರಿಸಿದಾಗ ಪ್ರಾಣನಷ್ಟವೂ ಸಂಭವಿಸಿತು.

ಇಂತಹ ಪರಿಸ್ಥಿತಿಯಲ್ಲಿ ಮತ ಚಲಾಯಿಸಿದ …ವರು ಉದ್ದೇಶಪೂರ್ವಕವಾಗಿ ತಮ್ಮ ಮತಗಳು …ಗೆಡುವಂತೆ ಪಟ್ಟಿಯಲ್ಲಿದ್ದ ಎಲ್ಲರ ಹೆಸರುಗಳಿಗೂ …ುದ್ರೆ ಒತ್ತಿದರು; ಆ ಮೂಲಕ ಈ ಚುನಾವಣೆಗಳ …ಗ್ಗೆ ತಮ್ಮ ಕೋಪವನ್ನು ಪ್ರದರ್ಶಿಸಿದರು. ಉದಾ …ಣೆಗೆ ಶ್ರೀನಗರದಂಥ ಒಂದು ಪ್ರದೇಶದಲ್ಲಿಯೇ …ಗ ಕುಲಗೆಟ್ಟ ಮತಗಳು ಶೇ. 10 ರಷ್ಟಿದ್ದವು. …ನ್ನದನ್ನು ವಿಪರೀತವಾಗಿ ಅವಲಂಬಿಸುವ ಗಡಿ …ದೇಶಗಳಲ್ಲಿ ಮಾತ್ರ ಹೆಚ್ಚಿನ ಮತದಾನ …

ಜೆನ್ ಕತೆ

ಕನ್ನಡಕ್ಕೆ : ಗೌರಿಲಂಕೇಶ್

ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಇಬ್ಬರು ಪುರುಷರನ್ನು ಆಸ್ಪತ್ರೆಯ ಒಂದು ಕೊಠಡಿಯಲ್ಲಿ ಇರಿಸಲಾಗಿತ್ತು. ಅವರಲ್ಲಿ ಒಬ್ಬನ ಶ್ವಾಸಕೋಶಗಳು ದ್ರವದಿಂದ ತುಂಬಿತ್ತಾದ್ದರಿಂದ ಆತನಿಗೆ ಮಾತ್ರ ದಿನಕ್ಕೆ ಒಂದು ಗಂಟೆ ಕಾಲ ಎದ್ದು ಕೂರಲು ಅನುಮತಿ ನೀಡಲಾಗಿತ್ತು. ಆತನ ಮಂಚ ಕೊಠಡಿಗಿದ್ದ ಒಂದೇ ಒಂದು ಕಿಟಕಿಯ ಪಕ್ಕದಲ್ಲೇ ಇತ್ತು. ಇನ್ನೊಬ್ಬ ರೋಗಿ ತನ್ನ ಬೆನ್ನ ಮೇಲೆಯೇ ಮಲಗಿ ಕಾಲ ಕಳೆಯಬೇಕಿತ್ತು.

ಅವರಿಬ್ಬರೂ ಗಂಟೆಗಟ್ಟಲೆ ಹರಟುತ್ತಿದ್ದರು. ತಮ್ಮ ಹೆಂಡತಿ, ಮನೆ, ಮಕ್ಕಳು, ಕೆಲಸ, ತಾವು ಹಿಂದೊಮ್ಮೆ ರಜೆಗೆಂದು ಹೋಗಿದ್ದ ಜಾಗೆಗಳು.... ಹೀಗೆ ಎಲ್ಲದರ ಬಗ್ಗೆಯೂ ಚರ್ಚಿಸುತ್ತಿದ್ದರು.

ಹಾಗೆಯೇ ಪ್ರತಿದಿನ ಒಂದು ಗಂಟೆ ಕಾಲ ಎದ್ದು ಕೂರುತ್ತಿದ್ದ ಮೊದಲನೆಯವನು ಕಿಟಕಿಯ ಮೂಲಕ ತನಗೆ ಕಾಣಿಸುತ್ತಿದ್ದ ಎಲ್ಲವನ್ನು ಎರಡನೆಯವನಿಗೆ ವಿವರಿಸುತ್ತಿದ್ದ.

ಹೊರಗಿನ ಬಣ್ಣ ಮತ್ತು ಬದುಕಿನ ವಿವರಗಳು ತನ್ನ ಸೀಮಿತ ಜಗತ್ತನ್ನು ವಿಸ್ತರಿಸುತ್ತಿದ್ದರಿಂದ ಆ ಒಂದು ಗಂಟೆಗಾಗಿಯೇ ಎರಡನೆಯವನು ಪ್ರತಿ ದಿನ ಕಾಯಲಾರಂಭಿಸಿದ.

ಮೊದಲನೆಯವನು ಕಿಟಕಿಯ ಕೆಳಗಡೆ ಒಂದು ಸುಂದರವಾದ ಉದ್ಯಾನ ಇದೆ, ಅದರಲ್ಲಿ ಒಂದು ಕೆರೆಯಿದೆ, ಆ ಕೆರೆಯಲ್ಲಿ ಬಾತುಕೋಳಿಗಳು ಈಜುತ್ತಿವೆ, ಮಕ್ಕಳು ಆ ಕೆರೆಯಲ್ಲಿ ತಮ್ಮ ಆಟದ ದೋಣಿಗಳನ್ನು ಬಿಡುತ್ತಾರೆಂದು ವಿವರಿಸಿದ. ಕಾಮನಬಿಲ್ಲಿನಲ್ಲಿರುವ ಎಲ್ಲಾ ಬಣ್ಣಗಳ ಹೂಗಳು ಉದ್ಯಾನದಲ್ಲಿದೆ, ಅವುಗಳ ನಡುವೆ ಪ್ರೇಮಿಗಳು ಕೈಕೈ ಹಿಡಿದು ನಡೆದಾಡುತ್ತಾರೆ, ಸುತ್ತಲೂ ದೊಡ್ಡದಾದ ಮರಗಳಿವೆ, ಅವೆಲ್ಲವುಗಳ ಹಿಂದೆ, ದೂರದಲ್ಲಿ ನಗರದ ಕಟ್ಟಡಗಳು ಕಾಣಿಸುತ್ತಾವೆಂದೂ ಬಣ್ಣಿಸಿದ. ಇವೆಲ್ಲವನ್ನು ಮೊದಲನೆಯವನು ವಿವರವಾಗಿ ವರ್ಣಿಸುತ್ತಿರುವಾಗ ಎರಡನೆಯವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಅವೆಲ್ಲವನ್ನು ತನ್ನ ಮನಸ್ಸಿನಲ್ಲೇ ಕಲ್ಪಿಸಿಕೊಳ್ಳುತ್ತಿದ್ದ.

ಒಂದು ಬೆಚ್ಚನೆ ಮಧ್ಯಾಹ್ನ ಕಿಟಕಿಯ ಪಕ್ಕದಲ್ಲಿದ್ದವನು ಹೊರಗಡೆ ಒಂದು ಮೆರವಣಿಗೆ ಸಾಗುತ್ತಿದೆ ಎಂದು ಹೇಳಿದ. ಎರಡನೆಯವನಿಗೆ ಆ ಮೆರವಣಿಗೆಯ ಶಬ್ದ ಕೇಳಿಸದಿದ್ದರೂ ಮೊದಲನೆಯವನು ನೀಡುತ್ತಿದ್ದ ವಿವರಣೆಗಳ ಮೂಲಕವೇ ಅದನ್ನ ಕಲ್ಪಿಸಿಕೊಳ್ಳುತ್ತಿದ್ದ. ಆಗ ಇದ್ದಕ್ಕಿದ್ದಂತೆ ಎರಡನೆಯವನ ತಲೆಯೊಳಗೆ ಒಂದು ಯೋಚನೆ ಪ್ರಾರಂಭವಾಯಿತು.

ನನಗೇನೂ ಕಾಣಿಸದಿರುವಾಗ ಯಾಕೆ ಆತನಿಗೆ ಮಾತ್ರ ಎಲ್ಲವನ್ನೂ ಕಂಡು ಆನಂದಿಸುವ ಅವಕಾಶವಿದೆ? ಇದೆಂತಹ ಅನ್ಯಾಯ.

ಮೊದಮೊದಲು ಹೀಗೆ ಯೋಚಿಸಿದ್ದರ ಬಗ್ಗೆಯೇ ಎರಡನೆಯವನಿಗೆ ನಾಚಿಕೆಯಾಯಿತು. ಆದರೆ ದಿನಗಳು ಉರುಳಿದಂತೆ ತಾನು ಯಾವುದನ್ನೂ ನೋಡಲಾಗುತ್ತಿಲ್ಲ ಎಂಬ ವಂಚಿತ ಮನೋಭಾವ ಆತನಲ್ಲಿ ಬೆಳೆಯುತ್ತಾ ಹೋಯಿತು. ಕೊನೆಗೆ ಅದು ಮತ್ಸರಕ್ಕೆ ತಿರುಗಿ ಅವನಿಗೆ ನಿದ್ದೆಯೇ ಬಾರದಂತಾಯಿತು. ತಾನು ಆ ಕಿಟಕಿಯ ಪಕ್ಕದಲ್ಲಿನ ಮಂಚದಲ್ಲಿರಬೇಕು ಎಂಬ ಅಸೂಯೆ ಅವನನ್ನು ಇಡಿಯಾಗಿ ಆಕ್ರಮಿಸಿಕೊಂಡಿತು.


ಒಂದು ರಾತ್ರಿ ನಿದ್ದೆ ಬಾರದೆ ಆತ ಚಾವಣಿಯನ್ನು ದಿಟ್ಟಿಸುತ್ತಿದ್ದಾಗ ಪಕ್ಕದ ಮಂಚದಲ್ಲಿದ್ದವನು ಕೆಮ್ಮಲಾರಂಭಿಸಿದ. ಆತನ ಶ್ವಾಸಕೋಶದಲ್ಲಿದ್ದ ದ್ರವ ಉಸಿರಾಟಕ್ಕೆ ತೊಂದರೆ ಕೊಡುತ್ತಿತ್ತು. ದಾದಿಯನ್ನು ಕರೆಯಲು ಪಕ್ಕದಲ್ಲೇ ಇದ್ದ ಗುಂಡಿಯನ್ನು ಒತ್ತಲು ಆತ ಕಷ್ಟಪಟ್ಟು ಎಡತಾಕಿದ. ಮಬ್ಬು ಕತ್ತಲೆಯಲ್ಲಿ ಎರಡನೆಯವನಿಗೆ ಇದೆಲ್ಲ ಕೇಳಿಸುತ್ತಿದ್ದರೂ, ಕಾಣಿಸುತ್ತಿದ್ದರೂ ತನ್ನ ಪಕ್ಕದಲ್ಲೇ ಇದ್ದ ಗುಂಡಿಯನ್ನು ಒತ್ತಲಿಲ್ಲ. ಐದೇ ಐದು ನಿಮಿಷಗಳಲ್ಲಿ ಮೊದಲನೆಯವನ ಕೆಮ್ಮು, ಉಸಿರಾಟ ಎಲ್ಲವೂ ಸ್ತಬ್ಧಗೊಂಡಿತು. ಈಗ ಕೊಠಡಿಯಲ್ಲಿ ಬರೀ ಮೌನ–ಸ್ಮಶಾನಮೌನ ಆವರಿಸಿತು.

ಮರುದಿನ ಬೆಳಗ್ಗೆ ಇಬ್ಬರನ್ನು ವಿಚಾರಿಸಿಕೊಳ್ಳಲು ದಾದಿ ಬಂದಳು. ಕಿಟಕಿಯ ಪಕ್ಕದಲ್ಲಿದ್ದ ಮನುಷ್ಯನ ನಿರ್ಜೀವ ದೇಹವನ್ನು ಕಂಡು ಆಕೆಗೆ ಬೇಸರವಾದರೂ ಆಸ್ಪತ್ರೆಯ ಪರಿಚಾರಕರನ್ನು ಕರೆದು ಶವವನ್ನು ಹೊರ ಸಾಗಿಸಲು ಆದೇಶಿಸಿದಳು. ಆಕೆ ಯಾವ ಗಲಿಬಿಲಿ, ಗೊಂದಲವನ್ನೂ ವ್ಯಕ್ತಪಡಿಸಲಿಲ್ಲ.

ಸ್ವಲ್ಪ ಹೊತ್ತಾದ ನಂತರ ತನ್ನನ್ನು ಕಿಟಕಿಯ ಪಕ್ಕದ ಮಂಚಕ್ಕೆ ವರ್ಗಾಯಿಸಲು ಸಾಧ್ಯವೇ ಎಂದು ಎರಡನೆಯವನು ದಾದಿಯನ್ನು ಕೇಳಿದ. ಆಕೆಗೆ ಅದರಲ್ಲಿ ಯಾವ ಸಮಸ್ಯೆಯೂ ಕಂಡುಬಾರದಿದ್ದರಿಂದ ಅವನನ್ನು ಆ 'ಮಂಚಕ್ಕೆ ವರ್ಗಾಯಿಸಿ, ಅದರಲ್ಲಿ ಆತ ಆರಾಮವಾಗಿದ್ದಾನೆ ಎಂಬುದನ್ನು ಖಾತ್ರಿಪಡಿಸಿಕೊಂಡ ನಂತರ ಹೊರನಡೆದಳು.


ತನ್ನ ದೇಹದಲ್ಲಿನ ನೋವುಗಳನ್ನು ಮೀರಿ, ನಿಧಾನವಾಗಿ ಒಂದು ಮೊಣಕೈಯನ್ನು ಆಧಾರವಾಗಿಟ್ಟುಕೊಂಡು ಕಿಟಕಿಯ ಹೊರಗಿನ ಪ್ರಪಂಚವನ್ನು ನೋಡುವ ಕಾತುರದಿಂದ ಆತ ಎದ್ದು ಕೂರಲಾರಂಭಿಸಿದ. ಕೊನೆಗೂ ಹೊರಗೆ ನೋಡುವ ಅದೃಷ್ಟ ತನ್ನದಾಯಿತು ಎಂಬ ಆನಂದ ಅವನನ್ನು ಆವರಿಸಿತು. ಕಷ್ಟಪಟ್ಟು ತನ್ನ ಮುಖವನ್ನು ಕಿಟಕಿಯತ್ತ ತಿರುಗಿಸಿದ.

ಅಲ್ಲಿ ಬೋಳುಗೋಡೆ ಇತ್ತು.



ಒಂದು ಪತ್ರ

ಕಣಿ ಕೇಳುವ 'ಬಿಎಸ್‌ವೈ'ಗೆ 'ಯಡ್ಡಿ' ಹೆಸರೇ ಸರಿಯಲ್ಲವೇ?



ಮಾನ್ಯರೇ,

ನಾಲ್ಕು ವರ್ಷಗಳ ಹಿಂದೆ ನಾನು ಹೈದರಾಬಾದ್‌ನಲ್ಲಿದ್ದಾಗಲೇ ಕನ್ನಡ ಪ್ರಭ ದಿನಪತ್ರಿಕೆಯ ಪತ್ರಪ್ರಭ ವಿಭಾಗದಲ್ಲಿ ಬರೆದಿದ್ದೆ–"ನಾವು ಕನ್ನಡಿಗರು, ವಿನಾಕಾರಣ ಬೆಂಗಳೂರಿನ ತಮಿಳರನ್ನು, ಬೆಳಗಾವಿಯ ಮರಾಠಿಗರನ್ನು ದ್ವೇಷಿಸುವುದು ಸರಿಯಲ್ಲ. ಕರ್ನಾಟಕಕ್ಕೆ ನಿಜವಾದ ಅಪಾಯವಿರುವುದು ತೆಲುಗು ಬಿಡ್ಡಾಗಳಿಂದ. ಕರ್ನಾಟಕದ ಅಧಿಕಾರ ಸಂಪತ್ತೆಲ್ಲಾ ಕ್ರಮೇಣ ತೆಲುಗರ ಕೈವಶವಾಗಲಿದೆ "ಎಂದು ಭವಿಷ್ಯ ನುಡಿದಿದ್ದೆ. ಅದನ್ನು ಈಗ ಯಡ್ಡಿಯ ಬಿಜೆಪಿ ಸರ್ಕಾರ ನಿಜಗೊಳಿಸಿದೆ. ಬಳ್ಳಾರಿಯ ರೆಡ್ಡಿಗಳ ಅಕ್ರಮ ಗಣಿಗಾರಿಕೆ ಮಾಫಿಯಾ, ಬೆಂಗಳೂರಿನ ಕಮ್ಮಾಗಳ ಭೂ–ಮಾಫಿಯಾ, ಯಡ್ಡಿಯ ಸರಕಾರವನ್ನು ಸಂಪೂರ್ಣವಾಗಿ. ತಮ್ಮ ಮುಷ್ಟಿಯೊಳಗಿರಿಸಿಕೊಂಡಿದ್ದು ನಿಜ (ಲಂಕೇಶ್ 12-06-2008). ಪರಭಾಷಿಕರ ಗುಲಾಮಗಿರಿಯನ್ನು ನಿರಂತರವಾಗಿ ಮಾಡುತ್ತಿರಬೇಕಾದುದು ಕನ್ನಡಿಗರ ಹಣೆಬರಹ. ಕರ್ನಾಟಕದಲ್ಲಿ 10 ಶಾಸಕರು, 2 ಲೋಕಸಭೆ ಮತ್ತು 2 ರಾಜ್ಯಸಭೆ ಸಂಸದರು ಆಂಧ್ರ ಮೂಲದವರು. ಆದರೆ ಆಂಧ್ರಪ್ರದೇಶದಲ್ಲಿ ಒಬ್ಬನಾದರೂ ಕನ್ನಡಿಗ ಶಾಸಕ/ಸಂಸದನಿಲ್ಲ. (ಆಂಧ್ರದಿಂದ ರಾಜ್ಯಸಭೆಗೆ ಆರಿಸಿ ಹೋಗಿರುವ ಜಯರಾಮ್ ರಮೇಶ್ ಕರ್ನಾಟಕ ಮೂಲದವರಾದರೂ ಶುದ್ಧ ಕನ್ನಡ ಮಾತನಾಡಲು ಬರುವುದಿಲ್ಲ)

ವಿಜಯಕರ್ನಾಟಕದ ವಿ.ಭಟ್ಟ ತನ್ನ ಈ ಭಾನುವಾರದ (8-06-2008) ಸಂಚಿಕೆಯಲ್ಲಿ 'ಯಡ್ಡಿ' ಎಂಬುದು ಪತ್ರಿಕೆಯ ಸ್ಥಳ ಉಳಿಸಲು ತನ್ನದೇ ಸಂಪಾದಕ ವರ್ಗ ಹುಟ್ಟು ಹಾಕಿದ ಚುಟುಕು ಹೆಸರು. ಆದರೆ ಸಿಎಂರವರ ವೈಯಕ್ತಿಕ ಕೋರಿಕೆಯಂತೆ ಇನ್ನು ಮುಂದೆ 'ಯಡ್ಡಿ' ಬದಲು 'ಬಿಎಸ್‌ವೈ' ಎಂಬ ಹೆಸರು ಉಪಯೋಗಿಸುವುದಾಗಿ ಹೇಳಿಕೊಂಡಿದ್ದಾರೆ. ನಿಜವಾಗಿ 'ಯಡ್ಡಿ' ಎನ್ನುವ ಹೆಸರು ಹುಟ್ಟುಹಾಕಿದ್ದು 'ಲಂಕೇಶ್' ಹಾಗೂ ಅದನ್ನು ತನ್ನ ಪತ್ರಿಕೆ ಎರವಲು ಪಡೆದಿದ್ದು ಎಂದು ಒಪ್ಪಿಕೊಳ್ಳಲು ವಿ.ಭಟ್ಟನ ಒಣಪ್ರತಿಷ್ಠೆ ಬಿಡಲಿಲ್ಲ. ಯಡ್ಡಿ ಶಬ್ದದ ಅರ್ಥ ದಡ್ಡಿ, ಮಂದ ಬುದ್ಧಿಯವಳು, ಹಾಗಾಗಿ ಘನ ಸಿಎಂ ಸ್ಥಾನದಲ್ಲಿರುವವರಿಗೆ ಹೀಗೆ ಕರೆಯುವುದು ಸಮಂಜಸವಲ್ಲ ಎನ್ನುವುದು. [illegible] ಬುದ್ಧಿಯವಳು, ಹಾಗಾಗಿ ಘನ ಸಿಎಂ ಸ್ಥಾನದಲ್ಲಿರುವವರಿಗೆ ಹೀಗೆ ಕರೆಯುವುದು ಸಮಂಜಸವಲ್ಲ ಎನ್ನುವುದು. [illegible] ಯಾವಾಗಲೂ ಪೂಜೆ, ಹೋಮ, ಹವನ ಮಾಡುತ್ತಾ ತೀರ್ಥ ಜ್ಯೋತಿಷಿಗಳಲ್ಲಿ ಕಣಿ ಕೇಳುವ, ಸಿಕ್ಕ ಸಿಕ್ಕ ಪುರೋಹಿತರ, ಕಾವಿಧಾರಿಗಳ ಕಾಲಿಗೆರಗುತ್ತಿರುವ, ಯಾವಾಗಲೂ ಪೂಜೆ, ಹೋಮ, ಹವನ ಮಾಡುತ್ತಾ ತೀರ್ಥ ಕ್ಷೇತ್ರಗಳನ್ನು ಸುತ್ತುತ್ತಿರುವ, ಸಂಖ್ಯಾಶಾಸ್ತ್ರ–ವಾಸ್ತು ಎಂದೆಲ್ಲಾ ರೋಮರೋಮದಲ್ಲಿ ಅಂಧಶ್ರದ್ಧೆ ಹೊತ್ತಿರುವ, ಇಡೀ ವಿಧಾನಸೌಧವನ್ನು ಮೂರ್ಖರ ಕಟ್ಟೆಯನ್ನಾಗಿಸಿರುವ 'ಬಿಎಸ್‌ವೈ'ಗೆ 'ಲಂಕೇಶ್' ಕೊಟ್ಟಿರುವ 'ಯಡ್ಡಿ' ಹೆಸರೇ ಅನ್ವರ್ಥವಲ್ಲವೇ!

ಪ್ರವೀಣ್ ಎಸ್. ಶೆಟ್ಟಿ ಮಂಗಳೂರು

ಗ್ವಬ್ಬರ ಕೇಳಿದ್ರೆ ಗೋಲಿಬಾರ್ ಮಾಡ್ತಾರಲ್ಲ ಹೇಳು...

"ಅಲ್ಲ, ಗ್ವಬ್ಬರ ಕೇಳಿದ್ರೆ ಗೋಲಿಬಾರ್ ಮಾಡ್ತರಲ್ಲ?" ಎಂದ.

"ಬಜೆಪಿಗಳು ಅಧಿಕಾರಕ್ಕೆ ಬಂದ್ರೆ ಸಾಬರಿಗೆ ತೊಂದ್ರೆ ಅಂತ ಸಾಬರ್ಯೆಲ್ಲ ಹೆದರತಿದ್ರು. ಈಗ ರೈತರೇ ಹೆದರಂಗಾಗ್ಯದೆ" ಎಂದ ಸೀರ.

"ಪಾಪ, ಎಡೂರಪ್ಪ ಸುಮಾರಾಗಿರೋ ಹಸುರು ಶಾಲಾಯ್ಕಂಡು ರೈತರ ಹೆಸರಲ್ಲಿ ಪ್ರಮಾಣ ಮಾಡಿದ್ದ. ಅಂತ ಮನುಸುನಿಗೆ ಪೊಲೀಸ್‌ನೋರು ಕ್ಯಟ್ಟ ಹೆಸರು ತಂದುಬುಟ್ರು" ಎಂದ ಉಗ್ರಿ.

ಕಟ್ಟೆಪುರಾಣ

ಬ. ಚಂದ್ರೇಗೌಡ

"ಪೊಲೀಸ್ನೋರು ಕ್ಯಟ್ಟ ಹೆಸರು ತತ್ತರೆ ಅಂದ್ರೇ, ಯಂಗ್ಲ? ಅಧಿಕಾರಕ್ಕೆ ಬಂದಾಗ್ಲೆ ಯೆಡೂರಪ್ಪ ರೈತರ ಮ್ಯಾಲೆ ಕೈಮಾಡಬ್ಯಾಡಿ ಅಂತ ಹೇಳಬೇಕಾಗಿತ್ತು" ಎಂದ ಸೀರ.

"ಹಿಂಗೆ ಇದ್ದಕ್ಕಿದ್ದಂಗೆ ಹತ್ತಿಗತ್ತದೆ ಅಂತ ಯಾರಿಗ್ಗೊತ್ತಿತ್ತೋ ಮಾವ? ಆ ಬಜೆಪಿಗಳು ಬ್ಯಾರೆ ಸರಕಾರನೆ ಹಿಡದ ಖುಷಿಲಿ ಸನುಮಾನ ಮಾಡಿಸಿಗತ್ತ ಕುಂತಿದ್ರು. ಗೋಲಿಬಾರ್ ನ್ಯಡದ ಮ್ಯಾಲು ಕೆಲುವರು ಹಾರ ಶಾಲು ಸುತ್ತಿಗಂಡು ಸನುಮಾನ ಮಾಡಿಸಿಗತ್ತ ಇದ್ರು ಗೊತ್ತೆ?"

"ಮಾಡಿಸಿಗತ್ತರೆ ಬಡು. ಅಪರೂಪಕ್ಕೆ ಮಂತ್ರಿಗಳಾದವಲ್ಲದೇ, ಅವುಕೆ ರೈತರ ಕಷ್ಟಕಟಗಂಡೇನಾಗಬೇಕೇಳು?" ಎಂದ ಕಾಳಮಾವ.

"ಗ್ವಬ್ಬರದಂಗಡಿಯೋರ್ಯೆಲ್ಲ ಬಜೆಪಿಗಳೇ ಅಂತೆ" ಎಂದ ಸೀರ.

"ಯಾರೂ ಅಂಗಂದೋರು?"

"ಯಾರನ್ನಕ್ಕೆ ಬಂದರ್ಲ? ನೋಡಿದ್ರೆ ಗೊತ್ತಾಗದಿಲವೆ? ಗ್ವಬ್ಬರ ಮಾರೋರ್ಯೆಲ್ಲ ಬಜೆಪಿಗಳಾಗಿದ್ದು, ನಮ್ಮದೇ ಸರಕಾರ ಬಂದದೆ, ಟಾಕ್ ಮಾಡಿಕಂಡು ರೇಟೇರಿಸಿಗುಂಡು ಮಾರನ ಅಂತ ಕುಂತಿದ್ರಂತೆ. ಅಷ್ಟರಲ್ಲಿ ಹತ್ತಿಗತ್ತು ಗಲಾಟ."

"ಏನಪ್ಪ ನಿನ್ನ ಬಾಯಿಲಿ ಕೇಳಿದ್ದು, ಆಗಿದ್ದೇನಂದ್ರೆ, ಈ ಕೃಷಿ ಇಲಾಖೆ ಅಧಿಕಾರಿಗಳು ಆರಾಮಾಗಿದ್ರು. ಆ ಬಡ್ಡೆತ್ತವುಕೆ ಮುಂಗಾರು ಮಳಾಯ್ತದೆ, ರೈತರಿಗೆ ಗ್ವಬ್ಬರ, ಬೀಜ ಹಂಚಬೇಕು, ಸ್ಟಾಕು ಸರಿಯಾಗಿದ್ದತೆ ಅಂತ ಏನ್ನೂ ನೋಡಿಕೊಳ್ಳಿಲ್ಲ, ಇತ್ತಗೆ ಎಡೂರಪ್ಪನಿಗೆ ಬಹುಮತ ಇಲ್ದೆ ಮಿನಿಸ್ಟ್ರು ಮಾಡದೆ ಒಂದು ವಾರ ಮಾಡಿಕಂಡು ಕುಂತಗಂಡ. ಹಿಂಗೆ, ಯಲ್ಲಾ ಕಾರಣಗಳು ಸೇರಿಕೊಂಡು ರೈತನ್ನ ಬಲಿ ತಗಂಡರು ಅತ್ತಗೆ" ಎಂದ ಉಗ್ರಿ.

"ಏನೇ ಕಷ್ಟ ಬಂದ್ರು ರೈತನೇ ಬಲಿಯಾಗಬೇಕಲ್ಲ ಹೇಳು."

"ಊ ಕಣ ಮಾವ. ಆ ಗುಂಡೂರಾಯ ನೂರನಲವತ್ತು ಜನ ತಗದಿದ್ದ. ಎಡೂರಪ್ಪ ಬಂದೇಟಿಗೆ ಬೋಣಿ ಮಾಡಿದ ಅತ್ತಗೆ."

"ಗೋಲಿಬಾರ್ ಮಾಡಿದೋರು ಪೊಲೀಸ್‌ನೋರಲ್ವಂತೆ ಕಂಡ್ಲ" ಎಂದ ಸೀರ.

"ಇನ್ಯಾರಂತೋ?"

"ಯಾರೊ ಬಂದು ಪೊಲೀಸ್ ಕೈಯಿಂದ ಬಂದೂಕ ಕಿತಗಂಡು ಯರಡು ಮೂರು ಸತಿ ಗೋಲಿಬಾರ್ ಮಾಡಿ, ಬಂದೂಕ ಯಸ್ದು ಓಡೋದನಂತೆ."

"ಯಾರಪ್ಪ ಈ ಕತೆ ಕಟ್ಟದೋರು?"

"ಪೊಲೀಸ್‌ನೋರು ಅಥವಾ ಬಜೆಪಿಗಳು ಮಾತ್ರ ಇಂತ ಕತೆ ಕಟ್ಟಿ ಹೇಳ್ತಾರೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ಅಂಗರೆ ಕತೆಕಟ್ಟಿ ಹೇಳ್ತಯಿದ್ದರೇನ್ಲ?" ಎಂದಳು ಜುಮ್ಮಿ.

"ಊ ಕಣಕ್ಕ. ಪೊಲೀಸ್‌ನೋರು ಜ್ವತಿಗೆ ಬಜೆಪಿಗಳು ಸೇರಿದ್ರೆ ವಳ್ಳೆ ಸ್ಟೋರಿನೇ ತಯಾರು ಮಾಡ್ತಾರೆ. ಅಲ್ಲ ಕಣಕ್ಕ, ಪೊಲೀಸ್ ಕೈಯಿಂದ ಯಾವನೋ ಬಂದು ಗನ್ ಕಿತಗತ್ತನೆ ಅಂದ್ರೆ, ಆ ಪೊಲೀಸ್ ಬಂದೂಕವ ಇನ್ಯಂಗಿಡದಿದ್ದ? ಕಿತಗಳವಾಗ ಉಳದ ಪೊಲೀಸ್‌ನೋರು ಏನು ಮಾಡತಿದ್ರು? ಒಂದು ವೇಳೆ ಕಿತಗಂಡ ಅಂತ್ಲೆ ತಿಳಕೊ, ಅವನ್ನ ಹಿಡಕ್ಕಳಕ್ಕಾಯ್ತಿರಲಿಲ್ಲವೇ? ನಮ್ಮ ನಡುವೆ ಇರೊ ಯಾವನಾರ ಒಬ್ಬ ಮನ್ಸ ಹೋಗಿ ಅನಾಮತ್ತ ಪೊಲೀಸ್ ಕೈಯಿಂದ ಗನ್ ಕಿತಗಳೊವಷ್ಟು ಧೈರ್ಯ ತೋರಿದ್ದನೆ? ಗನ್ ಕಿತಗಂಡೇಟಿಗೆ ಅವನ್ನೆ ಸಾಯಿಸಕ್ಕೇನಾಗಿತ್ತು? ಅಲವೇನೂ ಉಗ್ರಿ?"

"ಎಡೂರಪ್ಪ ತನಿಖೆ ಮಾಡುಸ್ತಾನಂತಲ್ಲಾ, ಆಗೋಗಿ ಈ ಪ್ರಶ್ನೆನ್ಯೆಲ್ಲ ಹಾಕೋ ವಾಟಿಸ್ಸೆ" ಎಂದ ಉಗ್ರಿ.

"ಹಾಕದಲ್ಲ ಕಣೊ ಉಗ್ರಿ. ಸಾಮನ್ಯ ಮನುಸುನಿಗೂ ಗೊತ್ತಾಯ್ತದೆ ಇದು ಪೊಲೀಸ್‌ನೋರು ಹ್ವಸದಿರೊ ಕತೆ ಅಂತವ. ಇನ್ನ ಎಡೂರಪ್ಪನಿಗೆ ಕ್ಯಟ್ಟೆಸರು ಬರಬಾರ್ದು ಅಂತ ಬಜೆಪಿಗಳು ಇಂತ ಕತೆಯ ಹಬ್ಬಸಿರತದೆ."



"ಯಾರದೊ ಕೈವಾಡ ಅದೆ ಅಂತರಲ್ಲ, ಯಾರದು ಅಂತವ?" ಎಂದ ಸೀರ.

"ಯಾರ ಕೈವಾಡ ಅಂತ ಎಡೂರಪ್ಪ ಇಳುದ್ರು ಗೊತ್ತಾಗದಿಲ್ಲ ಚಿಗಪ್ಪ, ಯಾಕೆ ಅಂತಿಯಾ? ಯಾರ ಕೈವಾಡನೂ ಇರದಿಲ್ಲ ಅದ್ಕೆ. ಪಾರಂಗೆಜಾಂಪಲ್, ನಮ್ಮ ರಾಜಕುಮಾರ್ ಸತ್ತಾಗ ಗಲಾಟ ಆಯ್ತು, ಎಂಟತ್ತ ಜನ ಸತ್ತೋದ್ರು. ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಕಾಲಳ್ಯಾಡಿಸಿಗಂಡು, ಇದರಿಂದೆ ಯಾರ ಕೈವಾಡ ಅದೆ ಅಂತ ಮುಂದೆ ಹೇಳ್ತೀನಿ ಅಂದೋನು, ಇವತ್ತಿಗೂ ಹೇಳಲಿಲ್ಲ, ಅಗೊ ಅಂತ ಜನ ಇವ್ರು."

"ಸತ್ತೋರ ಮನಿಗೆ ಅವುನು ದುಡ್ಕುಕೊಟ್ಟನಂತಲ್ಲಾ?" ಎಂದ ಕಾಳಮಾವ.

"ಇದೆ, ಕೊಡ್ತರೆ ದ್ವಡ್ಡಪ್ಪ, ನಾನು ನೀನು ಕೊಡಕ್ಕಾಗ[ತ] ಆದ್ರು ನಮ್ಮ ದುಡ್ಡನೆ ತಗಂಡೋಗಿ ಕೊಡ್ತಾರೆ. ಅದೇನ[...] ರಪ್ಪನ ಮನೆ ದುಡ್ಡಲ್ಲ, ನಮ್ಮ ದುಡ್ಡೆಯ; ಅದ ತಿಳಕಂಡ ಮಾತಾಡು."

"ಜನ ನಮ್ಮ ಕಾಲ್ದಂಗೆ ಗ್ವಬ್ಬರ ಮಾಡಿಕಂಡ್ರೆ ಇವ್[...] ಯಾಕಾದವೂ ಅಂತ? ನಮ್ಮ ಕಾಲ್ದಲ್ಲಿ ವಂಗೆಸೊ[...] ಸವರಿ, ಅದಕ್ಕೆ ಸಗಣಿ ಹಾಕಿ, ತಿಪ್ಪೆ ಮಾಡಿಬುಡವು. ಬ[...] ಮಾಡುವಾಗ ಅರಗಿಬುಡವು ಘನವಾ[...] ಬ್ಯಳಿತಿದ್ದೊ."

"ನಿನ್ನ ಕಾಲದ ತಿಪ್ಪೆಗುಂಡಿ ಹಾಳುಬಿದ್ದ[...] ದೊಡ್ಡಪ್ಪ. ಈಗೇನಿದ್ರು ಲಗೇಜ್ ಆಟೋದ[...] ಗ್ವಬ್ಬರ ತಗಂಡೋಗಿ ಯರಚ ಬತ್ತರೆ. ಕಾ[...] ಬದ್ಲಾಗ್ಯದೆ. ಜನಗಳು ಸರಕಾರನ ಅವ್ಲಂಬಸ[...] ಮಾಡಿ ಅವುರ ನೆಗ್ಲೆಟ್ ಮಾಡಿದ್ರೆ ಹಿಂ[...] ಗೋಲಿಬಾರ್ ಮಾಡ್ತ ಇರಬೇಕಾಯ್ತದೆ."

"ಬೈರೇಗೌಡ ಚನ್ನಾಗಿ ನಿಭಾಯಿ[...] ಅಲವೆ?"

"ಅವುನು ಬುಡು, ಕೃಷಿ ಅಧಿಕಾರಿಗಳ[...] ಅಂಗೆ ನಡುಗೋರು. ನಿಮ್ಮ ಗಾಡಿ ತಗ[...] ಡೋಗಿ ರೈತರ ಮನೆ ಬಾಗ್ಲಿಗೆ ಗ್ವಬ್ಬರ ಮಡಗ[...] ಬನ್ನಿ ಅಂತ ಹೇಳೋನು. ಅಂತ ಗಂಡು[...] ಅವುನು" ಎಂದ ಉಗ್ರಿ.

"ಈಗಂತವ್ಯಾವು ಇಲ್ಲ ಅಲವೆ?"

"ಈಗಂತವು ಯಾವೂ ಇಲ್ಲ ಕಣ ಮಾವ[...] ಎಡೂರಪ್ಪನ ಮಂತ್ರಿ ಮಂಡ್ಳ ನೋಡಿದ್ರೆ ನರಸಿಮ್ಮಸ್ವಾಮಿ[...] ದೇವಸ್ಥಾನಕ್ಕೆ ಬಂದಿರೋ ಭಕ್ತಾದಿಗಳ ನೋಡಿದಂಗಾಯ್ತದೆ."

"ಕರೆಕ್ಟಾಗಿ ಹೇಳಿದೆ ಕಣೊ ಉಗ್ರಿ. ಆ ಕಿಷ್ಣಯ್ಯ ಶೆಟ್ಟಿ[...] ಅನ್ನೊ ಮಂತ್ರಿ ಇನ್ನ ಮ್ಯಾಲೆ ಕರ್ನಾಟಕದ ದೇವಸ್ಥಾನದಲ್ಲಿ[...] ನ್ಯಡಿಯೋ ಪೂಜೆಗಳ್ಯಲ್ಲ ಎಡೂರಪ್ಪನ ಹೆಸರಲ್ಲೇ ನ್ಯಡಿಬೇಕು[...] ಅಂತ ಆದ್ರು ಮಾಡ್ಯವುನೆ, ಇದಕೇನೇಳ್ತಿ?"

"ನೋಡು ಮತ್ತೆ."

"ಅಲ್ಲಾ, ಇಂಗೂ ಆದ್ರು ಮಾಡ್ಯರೇನ್ಲ?" ಎಂದ ಸೀರ.

ಮಳೆರಾಯ ತಡವಾಗಿ ಬರಬರ್‍ದಾ....

ಮುಖ್ಯಮಂತ್ರಿಗಳಿಗೆ 'ಹೈಕಮಾಂಡ್' ಜಪ ಆಪ್ಯಾಯಮಾನ. ಎಲ್ಲ ಬಿಕ್ಕಟ್ಟಿಗೂ ಅದೇ ಪರಿಹಾರ ಎಂಬ ನಂಬಿಕೆ!

ಮಂತ್ರಿ ಮಂಡಲ ಸದಸ್ಯರ ಆಯ್ಕೆ.

ಹಲವರ ಅಸಮಾಧಾನ.

'ಇದರಲ್ಲಿ ನನ್ನ ಪಾತ್ರ ಇಲ್ಲ, ಹೈಕಮಾಂಡ್ ನಿರ್ಧಾರ' ಹಾಗಿತ್ತು ಮುಖ್ಯಮಂತ್ರಿ ಸಮಾಧಾನ. ಖಾತೆ ಹಂಚಿಕೆ. ಕೆಲವರ ಗೊಣಗಾಟ. ಮತ್ತೆ ಅದೇ ಉತ್ತರ ಮುಖ್ಯಮಂತ್ರಿಯಿಂದ.

ಜಿಲ್ಲಾ ಉಸ್ತುವಾರಿ ಮಂತ್ರಿ ನೇಮಕ.

ಅಸಮಾಧಾನದ ಹೊಗೆ. ಮುಖ್ಯಮಂತ್ರಿ ಯಿಂದ ಅದೇ ಜಪ ಪಠನ- 'ಹೈಕಮಾಂಡ್ ನಿರ್ಧಾರ'

ಹಾವೇರಿಯಲ್ಲಿ ರೈತರ ಮೇಲೆ ಗೋಲಿಬಾರ್, ಓರ್ವನ ಸಾವು.

ಹೈಕಮಾಂಡ್ ಮಂತ್ರ ಮುಖ್ಯಮಂತ್ರಿಯ ನೆರವಿಗೆ ಬರುವಂತಿಲ್ಲ!

ಗುಂಡು ಹಾರಿಸಿದವರು ಯಾರು?

ಪೊಲೀಸರು!

ಇದಕ್ಕೆ ಅನುಮತಿ ನೀಡಿದವರಾರು?

ಸಂಬಂಧಿಸಿದ ಅಧಿಕಾರಿಗಳಿಂದ 'ನಾನಲ್ಲ' ಮಂತ್ರ!

ಸದಾನಂದಗೌಡ ಹೇಳುತ್ತಾರೆ: 'ಅಧಿಕಾರಿಗಳು ನಮ್ಮೊಡನೆ ಸ್ಪಂದಿಸುತ್ತಿಲ್ಲ!' ಅಂದರೆ ಅಧಿಕಾರಿಗಳೇ ಹೊಣೆ ಎಂದ ಹಾಗಾಯಿತು.

ಇದಕ್ಕೇನು ಹೇಳುತ್ತಾರೆ ಸನ್ಮಾನ್ಯ ಮುಖ್ಯಮಂತ್ರಿಗಳು?

'ಸಮಾಜಘಾತುಕ ಶಕ್ತಿಗಳು ಇದಕ್ಕೆ ಕಾರಣ'

ಸಾರಾಂಶ: ದುಷ್ಟಶಕ್ತಿಗಳು ರೈತರ ಹೆಸರಿನಲ್ಲಿ ಗಲಭೆ ಎಬ್ಬಿಸಿದರು. ಅದನ್ನು ನಿಯಂತ್ರಿಸಲು ಪೊಲೀಸರು ಗುಂಡು ಹಾರಿಸಿದರು.

ಏನು ಇದರ ಅರ್ಥ? ಅಧಿಕಾರಿಗಳು ಶಾಂತಿ ಸುವ್ಯವಸ್ಥೆ ಕಾಪಾಡಲು ಪ್ರಯತ್ನಿಸಿದರು ಎಂದು ತಾನೆ? ಭಾಜಪ ಅಧ್ಯಕ್ಷರು 'ಅಧಿಕಾರಿಗಳು ನಮ್ಮೊಡನೆ ಸ್ಪಂದಿಸುತ್ತಿಲ್ಲ' ಎಂದಿದ್ದಾರಲ್ಲ, ಯಾವುದು ಸರಿ?


ಇರಲಿ. ಮುಖ್ಯಮಂತ್ರಿಗಳು ಮುಂದುವರೆದು ಹೇಳುತ್ತಾರೆ- 'ಈ ಸಮಾಜಘಾತಕ ಶಕ್ತಿಗಳು ಯಾರು ಎಂಬುದು ಗೊತ್ತು.'

ಗೊತ್ತಿದ್ದರೆ ತಡವೇಕೆ? ಅಂತಹ ಧೂರ್ತರನ್ನೆಲ್ಲ ಬಂಧಿಸಿ ಶಿಕ್ಷೆಗೆ ಒಳಪಡಿಸಬಹುದಲ್ಲ?

ಇಲ್ಲ, ಇಲ್ಲ! ಸೂಕ್ತ ಸಮಯದಲ್ಲಿ ಇವರ ಹೆಸರನ್ನು ಬಹಿರಂಗಗೊಳಿಸುತ್ತಾರಂತೆ!

ಬಹಿರಂಗಗೊಳಿಸುತ್ತಾರೆಂದೇ ಆಶಿಸೋಣ. ಅಂತಹವರಿಗೆ ಶಿಕ್ಷೆ?

ಇದು ರಾಜಕೀಯ ಭಾಷೆ. ಇದರ ಅರ್ಥ: ಅಗೋಚರ



ದುಷ್ಟ ಶಕ್ತಿಗಳು ಯಾವುದು ಎಂಬುದರ ಅರಿವು ಸರ್ಕಾರಕ್ಕಿಲ್ಲ, ಹೀಗಾಗಿ 'ಸೂಕ್ತ ಸಮಯ' ಬರುವುದೇ ಇಲ್ಲ! ಒಂದು ವೇಳೆ ಹೀಗೇನಾದರೂ ಇದ್ದು ತನಿಖೆಯಿಂದ ಇದು ಹೊರಬಿದ್ದರೂ ಯಾರಿಗೂ ಶಿಕ್ಷೆ ಆಗುವುದಿಲ್ಲ! ಯಾಕೆಂದರೆ ಇವರೆಲ್ಲ ಒಂದೇ ಕುಟುಂಬದವರು!

ಗೃಹಮಂತ್ರಿ

ಟಿವಿ ಸುದ್ದಿ ವಾಚಕರನ್ನು ಗಮನಿಸಿದರೆ ತಿಳಿಯುತ್ತೆ. ಅವರು 'ಗೃಹ' ಪದವನ್ನು 'ಗ್ರಹ' ಎಂದೇ ಉಚ್ಚರಿಸುವುದು ವಾಡಿಕೆ. ವಿ.ಎಸ್. ಆಚಾರ್ಯ ಅವರು ಗೃಹ ಮಂತ್ರೀನಾ? ಅಥವಾ ಗ್ರಹ ಮಂತ್ರೀನಾ? ಯಾಕೆ ಅಂದರೆ...

ಸನ್ಮಾನ್ಯ ಸಚಿವರು ಹಾವೇರಿಯಲ್ಲಿ ಗೋಲಿಬಾರ್ ನಡೆದ ಸಂದರ್ಭದಲ್ಲಿ ಸನ್ಮಾನ ಸಮಾರಂಭದಲ್ಲಿ ಆನಂದ ತುಂದಿಲರಾಗಿದ್ದರು. ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದಿದ್ದೇವೆ ಅನ್ನುವ ಉನ್ಮಾದದಲ್ಲಿ ಭಾಜಪದ ನಾಯಕರಂತೆಯೇ ಈ ಆರೆಸ್ಸೆಸ್ ಕಣ್ಮಣಿಯೂ ಮಗ್ನವಾಗಿತ್ತು ಅಂತ ಕಾಣಿಸುತ್ತೆ. ಇಂತಹ ಆನಂದಮಯ ಸನ್ನಿವೇಶದಲ್ಲಿರುವಾಗಲೇ ಹಾಳಾದ ರೈತರು ಜುಜುಬಿ ಗೊಬ್ಬರ, ಬಿತ್ತನೆ ಬೀಜಕ್ಕಾಗಿ ಹಾತೊರೆಯುತ್ತಿರುವುದರಿಂದ ಖೇದಗೊಂಡು 'ಇನ್ನು ಎಂಟುಹತ್ತು ದಿನ ಕಾಯ್ದಿದ್ದರೆ ಇಂತಹ ಅನಾಹುತ ಆಗುತ್ತಿರಲಿಲ್ಲ' ಎಂಬ ಅಣಿಮುತ್ತು ಉದುರಿಸಿದ್ದಾರೆ! ರೈತರ ಆತುರವನ್ನು ಹೀಯಾಳಿಸುವುದರ ಬದಲು, ಮಳೆರಾಯ ಒಂದತ್ತು ದಿವಸ ತಡವಾಗಿ ಬಂದಿದ್ದರೆ ಅಥವಾ ಮಳೆಯೇ ಬೀಳದಿದ್ದರೆ ಇಂತಹ ದುರ್ದಿನಗಳು ಕಾಡುತ್ತಿರಲಿಲ್ಲ ಎಂದು ಯೋಚಿಸಿ ರುವುದು ಖಚಿತವಾಗಿಲ್ಲ!

ಪ್ರಥಮ ಚುಂಜೇ....

ಭೂದೇವಿಯ ಮೇಲೆ ಅತಿಯಾದ ಪ್ರೀತಿ ಇರುವ ಮುಜರಾಯಿ ಸಚಿವರು ತಮಗೆ ದಕ್ಕಿರುವ ಖಾತೆಯಿಂದ ಸಂಪ್ರೀತರಾಗಿದ್ದಾರಂತೆ. ತಮ್ಮ ಇಲಾಖೆಯ ದೇವಸ್ಥಾನಗಳ ಭೂಮಿಯನ್ನು ಯಾರು ಎಲ್ಲೆಲ್ಲಿ ಖಬ್ಜ ಮಾಡಿಕೊಂಡಿದ್ದಾರೆ ಎಂಬುದನ್ನು ಪತ್ತೆಹಚ್ಚಿ ತಾವೇ ಆ ಭೂದೇವಿಯ ಸೇವೆಗೆ ಅರ್ಪಿಸಿಕೊಳ್ಳಬೇಕೆಂದಿರುವುದು ಖಚಿತವಾಗಿಲ್ಲ, ತಮ್ಮ ಸರ್ಕಾರದ ಸೇವಾ ಕೈಂಕರ್ಯಗಳು ನಿರ್ವಿಘ್ನವಾಗಿ ನೆರವೇರಲಿ ಎಂದು ಆಶಿಸಿ ಸನ್ಮಾನ್ಯರು ಎಲ್ಲ ಮುಜರಾಯಿ ದೇವಸ್ಥಾನಗಳಲ್ಲೂ ಮುಖ್ಯಮಂತ್ರಿ ಮತ್ತು ಸರ್ಕಾರದ ಹೆಸರಿನಲ್ಲಿ ಪ್ರಥಮ ಅರ್ಚನೆ ನಡೆಸಬೇಕೆಂದು ಸುತ್ತೋಲೆ ಹೊರಡಿಸಿದ್ದರು. ವಿವಿಧ ರಾಜಕೀಯ ನಾಯಕರು, ಜಾತ್ಯತೀತರು, ಚಿಂತಕರು, ನ್ಯಾಯವಾದಿಗಳು ಈ ಆದೇಶ ಸಂವಿಧಾನ ವಿರೋಧಿ ಕ್ರಮ ಎಂದು ಪ್ರತಿಭಟಿಸಿದ್ದರು. ಇದ್ಯಾವುದಕ್ಕೂ ಅಂಜದ ಭೂದೇವಿ ಆರಾಧಕ ಸಚಿವರು ಹಿಂದೆ ಕೃಷ್ಣ ಮತ್ತು ಅವರ ಪತ್ನಿ ಪ್ರೇಮ ಹೆಸರಿನಲ್ಲಿ ಈ ರೀತಿ ಒಂದು ದಿನ ಅರ್ಚನೆ ನಡೆಸಿದ್ದನ್ನು ತೋರಿಸಿ ಪ್ರತಿಭಟನಾಕಾರರ ಬಾಯಿ ಮುಚ್ಚಿಸಲು ಪ್ರಯತ್ನಿಸಿದ್ದರು. ಶಾಂತಿ ಮತ್ತು ಸುಭಿಕ್ಷೆಗಾಗಿ ಈ ರೀತಿ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಸಮರ್ಥಿಸಿ ಯಾವುದೇ ಕಾರಣಕ್ಕೂ ಇದನ್ನು ಹಿಂತೆಗೆದುಕೊಳ್ಳುವುದಿಲ್ಲ ಎಂದು ಸಾರಿದ್ದರು. ಅಕಟಕಟಾ, ಏನು ಆ ಬಾಲಾಜಿ ರೀತಿಯೋ ಅರಿಯೆ. ರಸಗೊಬ್ಬರ,

ಅಣಕ

ಎಚ್.ಎಲ್. ಕೇಶವಮೂರ್ತಿ

ಬಿತ್ತನೆ ಬೀಜಕ್ಕಾಗಿ ರೈತರ ಹಾಹಾಕಾರ; ಹಾವೇರಿ ಗೋಲಿಬಾರ್‌ನಲ್ಲಿ ರೈತನ ಮರಣ; ಏನೇ ಕಾರಣ ನೀಡಿದರೂ ಒಪ್ಪದ ಜನತೆ, ಇವುಗಳಿಂದ ಇಕ್ಕಟ್ಟಿಗೆ ಸಿಕ್ಕಿರುವ ಸರ್ಕಾರಕ್ಕೆ ಈಗಲೇ ಈ ಆದೇಶ ಹೊರಬರಬೇಕೆ! ಮಂತ್ರಿ ಮಂಡಲದ ಸಭೆಯಲ್ಲಿ ನಡೆಯಿತು ಚರ್ಚೆ. ತಮ್ಮ ಪಕ್ಷದ ಕಾರ್ಯಸೂಚಿಯಂತೆಯೇ ದೇವಸ್ಥಾನಗಳಲ್ಲಿ ಅರ್ಚನೆಯೂ ಇದೆಯಾದರೂ ಇಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿ ಇದನ್ನು ಜಾರಿಗೊಳಿಸುವುದು ಕ್ಷೇಮಕರವಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಯಿತಂತೆ. 'ಕೇಶವಕೃಪ'ದ ಕೃಪೆಯೂ ಈ ಆದೇಶಕ್ಕೆ ಬಾರದಿರಬಹುದು. ಒಲ್ಲದ ಮನಸ್ಸಿನಿಂದ, ಅಯ್ಯೋ, ಇಂತಹ ದೇಶ ಸುಭಿಕ್ಷವಾಗಿರಿಸುವ ಆಜ್ಞೆಯನ್ನು ಹಿಂಪಡೆಯಬೇಕಾಯಿತು! ಎಲ್ಲಾ ಈ ಭಗವಂತನ ಲೀಲೆ!

ರಸ್ತೆತಡೆ, ಬಸ್ಸಿಗೆ ಬೆಂಕಿ

ಮಳೆ ಬಿದ್ದು ಭೂಮಿ ಹದವಾಗಿದೆ.

ಆದರೆ, ಬಿತ್ತಲು ಬೀಜ ಇಲ್ಲ; ಹಾಕಲು ಗೊಬ್ಬರ ಇಲ್ಲ.

ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ, ರಾಜ್ಯ ಸರ್ಕಾರದ ಮೇಲೆ ಕೇಂದ್ರ ಸರ್ಕಾರ ಆರೋಪ.

"...ಯಾಗಿರಬೇಕು ಕಣ ಮಾವ ಇವುರು"
...ಳು ಜುಮ್ಮಿ.

"...ತಾಯಿಗಾಕೆ ನಿಜಕಣಕ್ಕ. ಬೇಕಾದ್ರೆ ಯಾರಿಗಾರ ...ನುಮಾಡಿ ಕೇಳು. ಇನ್ನು ಮುಂದೆ ದೇವಸ್ಥಾನದಲ್ಲಿ ...ಜೆ ಮಾಡಬೇಕಾದ್ರೆ ಎಡೂರಪ್ಪನ ಮಂತ್ರ ...ಬೇಕಂತೆ."

"ಮಂತ್ರಲ್ಲ ಕಣೊ, ಅವುನೆಸರಲ್ಲಿ ಪೂಜೆ ...ಮಾಡಬೇಕು."

"ಅದೂ ಅಲ್ಲಿಗೆ ಬತ್ತಲ್ಲೊ ಉಗ್ರಿ. ಪೂಜಾರೂ ...ಟೆ ಅಳ್ಳಾಡಿಸಿಗಂಡು ಓಂ ಯಡೂರಪ್ಪಯ ನಮಃ : ...ಬೇಕಲ್ಲ ಹೇಳು."

"ಅಂದ್ರು ತಪ್ಪೇನುಯಿಲ್ಲ ಬುಡ್ರ. ಎಡೂರ ಸಿದ್ಲಿಂಗ ...ವರ ಹೆಸರೇಳಿದಂಗಾಯ್ತದೆ" ಎಂದಳು ಜುಮ್ಮಿ.

"ಅಂತೂ ಬ್ರಾಂಬ್ರೆಲ್ಲ ಎಡೂರಪ್ಪನ ಪೂಜೆಮಂತ್ರ ...ಯುದ್ವ ...ಗೆ ಸರಕಾರವೆ ಅಂಗೆ ಪೂಜೆ ಮಾಡದು ...ದ ಅಂದದೆ."

"ಅವುನ್ಯಾರ್ಲ ಮಂತ್ರಿ ಅಂಗಾಡ್ರು ಮಾಡಿದೋನು?" ...ದ ಕಾಳಮಾವ.

"ಅವುನ್ಯಾರೇ ಹುಟ್ಟು ಹತನಾತಿ ಮನ್ಸನಂತೆ ಕಣಮಾವ. ...ದು ಕಡೆ ಪಾಪ ಮಾಡದು, ಇನ್ನೊಂದು ಕಡೆ ಪೂಜೆ ...ಥ ಮಾಡದು ಕೆಲಸನೇ ಮಾಡಿಕಂಡು ಬಂದಿರೋನಿಗೆ ...ಜರಾಯಿ ಖಾತೆ ಕೊಟ್ರೆ ಇನ್ನೇನಾದತೂ?"

"ಮಂಗನ ಕೈಲಿ ಮಾಣಿಕ್ಯ ಕೊಟ್ರೆ ಮುಕುಳಿಗಿಟಕತ್ತಂತೆ, ...ಗಾಯ್ತು ಕಂಡ್ರ ನೀನೇಳವ್ವ."

"ಅಂಗೆ ಆಯ್ತಪ್ಪ. ಅಲ್ಲಾ ಮುಜರಾಯಿ ಖಾತೆ ...ಟ್ಟ ಮೂರನೆ ದಿನವೇ ಯಲ್ಲಾ ಗುಡಿ ಪೂಜಾರಿಗಳು ...ೂರಪ್ಪನ ಹೆಸರೇಳಿಕಂಡು ಪೂಜೆ ಮಾಡಿ ಅಂತ ...ರು ಮಾಡ್ತನೆ ಅಂದ್ರೆ, ಅವುನಿನ್ಯಂಥಾ ಮಂತ್ರಿ, ಲ್ಯಕ್ಕ ...ನು?"

"ಲ್ಯಕ್ಕ ಹಾಕದೇನೂ, ಟೋಟ್ಲು ಮಾಡಿದ್ರೆ ಅಲ್ಲೇ ...ತ್ತರ ಸಿಗತದಪ್ಪ. ಏನ್ನಾದ್ರೂ ತಿನ್ನೋ ದೇವರಿಗೆ ...ಂಡಕುಡಿಯೋ ಪೂಜಾರಿ ಅಂತ ಎಡೂರಪ್ಪ ...ಗವುನೊ ಅವುನ ಮಂತ್ರಿಗಳು ಅಂಗೆ ಇರತರೆ. ...ನು ರೈತರ ಕಷ್ಟನೋಡದೆ ಕಂಡ ಕಂಡ ದೇವಸ್ಥಾನ, ...ಠಗಳು, ಸುಡುಗಾಡು ಸಿದ್ರು, ಸಾಯಿಬಾಬನ್ನ ...ಡಿಕ್ಯಂಡೋಗಿ ಕಾಲಿಗೆ ಬಿದ್ರೆ, ಅವುನ ಕೈ ಕ್ಯಳಗಡೆ ...ೂ ಮಂತ್ರಿ ಹಿಂಗೆ ಅಲವೆ ಮಾಡದು?"

"?!" ■

...ಗೊಬ್ಬರ ಮಾತ್ರ ಬರಲೇ ಇಲ್ಲ!
...ಹದಕಳೆದರೆ ಬದುಕೇ ವ್ಯರ್ಥ.
...ಇದು ಅನ್ನದಾತನ ಗೋಳು.
...ಇದನ್ನು ಕೇಳುವವರೇ ದಿಕಿಲ್ಲ, ಕೇಳಬೇಕಾಗಿದ್ದ ಸರ್ಕಾರಕ್ಕೆ ...ಹದ್ದೋ ಅನುಮಾನ.
...ಏನು ಮಾಡಬೇಕು ಈ ಅನ್ನದಾತ?
...ಪ್ರತಿಭಟನೆ ದಾರಿ ಹಿಡಿದ.
...ಇದನ್ನು ಬುದ್ಧಿ ಸ್ತಿಮಿತದಲ್ಲಿ ಇರುವ ಯಾರೂ ...ಸಲಾರರು.
...ಮುಂದುವರೆದಂತೆ ನಡೆದದ್ದೇನು?
...ಸರ್ಕಾರಿ ಬಸ್ಸುಗಳ ದಹನ; ರಸ್ತೆತಡೆ.
...ನಿಷ್ಕ್ರಿಯ ಸರ್ಕಾರವನ್ನು ಎಚ್ಚರಿಸಲು ಇತ್ತೀಚೆಗೆ ...ಭಟನಾಕಾರರು ಹುಡುಕಿಕೊಂಡಿರುವ ಸುಲಭ ಮಾರ್ಗ ...

...ಧಗಧಗನೆ ಹತ್ತಿ ಉರಿಯುತ್ತಿರುವ ಬಸ್ಸನ್ನು ಟಿವಿಯಲ್ಲಿ ... ಕೆಲ ವರದಿಗಾರರಿಗೂ ಅನ್ನಿಸಿದ್ದು- 'ಹೊಟ್ಟೆ ಉರಿದು ...ಗುತ್ತೆ'.
...ದರಿಂದ ನಷ್ಟ ಯಾರಿಗೆ? ಯಾರು ಇದನ್ನು ...ಸುವವರು?
...ನ್ನು ರಸ್ತೆ ತಡೆ. ರಾಜ್ಯದ ಹಲವೆಡೆ ಹೆದ್ದಾರಿ ತಡೆ ...ಯಿತು. ಹಲವಾರು ಸಂಘಟನೆಗಳು. ವಿವಿಧ ವೇಳೆಯಲ್ಲಿ ...ಡೆ. ಪ್ರಯಾಣಿಕರಲ್ಲಿ ಹಲವರಿಗೆ ಹಲವೆಂಟು ...ತ್ಯಯಗಳು. ಅವಸರವಾಗಿ ಯಾವುದೋ ಕೆಲಸಕ್ಕೆ ...ಗಬೇಕು; ಕೆಲಸಕ್ಕಾಗಿ ಸಂದರ್ಶನ ಇದೆ; ಪರೀಕ್ಷೆಗೆ ...ಗುತ್ತೆ; ರೋಗಿ ಆಸ್ಪತ್ರೆಗೆ ಜರೂರಾಗಿ ಹೋಗಬೇಕು, ... ಹತ್ತು ಹಲವೆಂಟು.
...ವರು ನೋವನ್ನು ಯಾರ ಬಳಿ ಹೇಳಿಕೊಳ್ಳುವುದು?
...ಪ್ರತಿಭಟನೆ ನಮ್ಮ ಹಕ್ಕು, ನಿಜ. ಅನ್ಯಾಯವಾದಾಗ ...ಂಧಿಸಿದ ಅಧಿಕಾರಿ ಕಚೇರಿಯ ಮುಂದೆ ಪ್ರತಿಭಟಿಸಿ ... ನೋವನ್ನು ತೋರಲು ಸಾಧ್ಯ ಇಲ್ಲವೆ?
...ಮಾಡುವುದೇ ಪ್ರತಿಭಟನೆ ಸಮಾಜದ ಅನುಕಂಪವನ್ನು ...ಬೇಕು, ದ್ವೇಷ ಗಳಿಸಬಾರದು. ಇಂತಹ ಚಳವಳಿಗಳು ...ಷ್ಟು ಮಾಡದಿರುವುದೇ ದುರಂತ.
...ಕ್ಕೆ ಕೊನೆ ಎಂಬುದೇ ಇಲ್ಲವೆ? ■

ನೆಲ, ಆಕಾಶ

ಮನುಷ್ಯ ಅನೇಕ ಸಂಕಟಗಳನ್ನು ತನ್ನಲ್ಲಿಯೇ ಅನುಭವಿಸುತ್ತಾನೆ. ನಿಮಗೆ ಅರ್ಥವಾಗುವ ಒಂದು ಸಂಕಟವನ್ನು ಇಲ್ಲಿ ಕಾಣಿಸುತ್ತೇನೆ. ಕೊಡಗು, ಪಶ್ಚಿಮಘಟ್ಟ, ಬೀದರ್, ಗುಲ್ಬರ್ಗಾದಲ್ಲಿ ಹುಚ್ಚೆದ್ದು ಸುರಿಯುತ್ತಿರುವ ಮಳೆ ಬೆಂಗಳೂರಲ್ಲಿ ಸುರಿಯುತ್ತಿಲ್ಲ. ಮೊನ್ನೆ ಒಬ್ಬರಿಗೆ "ಇದೇನು ಈ ಸಲ ಮಳೆಯೇ ಇಲ್ಲ?" ಅಂದೆ. ಬೆಂಗಳೂರಿನ ಜನಕ್ಕೆ ಮಳೆ ಎಂದರೇನೆಂದು ಗೊತ್ತೇ ಇರುವುದಿಲ್ಲ. "ಹಾಗೇನಿಲ್ಲ, ಮೊನ್ನೆ ತಾನೆ ಬಂತಲ್ಲ" ಅಂದರು. ನಾನು "ಅದು ಮಳೆಯಲ್ಲ, ಆಕಾಶದ ಕಣ್ಣೀರು" ಅಂದೆ.



ಮರೆಯುವ ಮುನ್ನ

■ ಪಿ. ಲಂಕೇಶ್ ಸೆಪ್ಟೆಂಬರ್ 2, 1990

ನಿಜ ಹೇಳಬೇಕೆಂದರೆ ಬೆಂಗಳೂರಲ್ಲಿ ಈ ಸಲ ಒಂದೇ ಒಂದು ಸಲ ಮಳೆ ಬಂದಿದೆ; ಕೋಲಾರ, ತುಮಕೂರು ಜಿಲ್ಲೆಯಲ್ಲೂ ಅಷ್ಟೆ. ಆಗಸ್ಟ್ ಮುಗಿಯುತ್ತಾ ಬಂದಿದ್ದರೂ ಒಮ್ಮೆಯಾದರೂ ಬೆಂಗಳೂರಿನ ಸಣ್ಣಪುಟ್ಟ ಗುಡ್ಡ, ಕೆರೆ, ಕಣಿವೆ ಮಳೆಯಿಂದ ತೋಯ್ದಿಲ್ಲ, ನೀರಿನ ಹೊಡೆತದಿಂದ ನೀವಿಸಿಕೊಂಡಿಲ್ಲ, ಇದರ ಪರಿಣಾಮ ಅನೇಕರಿಗೆ ಗೊತ್ತಿಲ್ಲ. ವರ್ಷದಲ್ಲಿ ಕನಿಷ್ಠ ಹತ್ತು ಸಲ ಮಳೆಯಿಂದ ಝಳಕ ಮಾಡಿ ಸ್ವಚ್ಛವಾಗುವ ನೂರಾರು ಗಲ್ಲಿಗಳು; ಬಡಾವಣೆಗಳು, ಕೊಳೆಗೇರಿಗಳು ಇಲ್ಲಿವೆ. ಅವು ಸ್ವಚ್ಛವಾಗದಿದ್ದರೆ ಕಾಲರಾ, ಮಲೇರಿಯಾ ಮುಂತಾದ ರೋಗಗಳು ಬಂದೇ ಬರುತ್ತದೆ. ನೀರು ನಿಂತು ನೆಲದಲ್ಲಿ ಇಂಗದಿದ್ದರೆ ಸಾವಿರಾರು ಸಣ್ಣಪುಟ್ಟ ಗಿಡಗಳು, ದೊಡ್ಡ ಮರಗಳು ಒಣಗತೊಡಗುತ್ತವೆ. ಬೆಂಗಳೂರಿನ ಬಾವಿಗಳ ನೀರು ಕೆಳಗಿಳಿದು ಇಂಗಿ ಹೋಗುತ್ತದೆ. ಇಷ್ಟೇ ಅಲ್ಲ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿನ ಸಾವಿರಾರು



ಕೆರೆಗಳು ತುಂಬದಿದ್ದರೆ ಫಸಲು ಸಾಧ್ಯವಿಲ್ಲ, ದನಕರುಗಳಿಗೆ ನೀರು ಇರುವುದಿಲ್ಲ, ಹಾಗೆಯೇ ಕೊಳವೆಬಾವಿಗಳು ನೀರು ಕಳೆದುಕೊಳ್ಳುತ್ತವೆ. ರಾಗಿ ಬೆಳೆವ ಸಾವಿರಾರು ಕುಟುಂಬಗಳು ತೊಂದರೆಗೊಳಗಾಗುತ್ತವೆ.

ಬೆಂಗಳೂರಿನಲ್ಲಿ ಆಟವಾಡುವ ಹುಡುಗರಿಗೆ, ಕಚೇರಿಗೆ ಹೋಗುವ ನೌಕರರಿಗೆ ಮಳೆ ಬಾರದೆ ಇದ್ದರೇ ಚೆನ್ನ ಅನ್ನಿಸಬಹುದು. ಆದರೆ ಅದರ ಪರಿಣಾಮ ತಟ್ಟಿದಾಗ ಬೆಚ್ಚಿಬೀಳುತ್ತಾರೆ.

ಈ ಬಗ್ಗೆ ಕೇಳಿದವರಿಂದ ಉತ್ತರ ಇಲ್ಲದಿದ್ದರೂ ಇಂಗ್ಲಿಷ್ ಪತ್ರಿಕೆಯೊಂದರ ಮೇಲೆ ಕಣ್ಣಾಡಿಸುತ್ತಿದ್ದಾಗ ನೋಡಿದೆ.... ಈ ಸಲ ಬೆಂಗಳೂರಿನಲ್ಲಿ ಬಂದಷ್ಟೇ ಮಳೆ ಫ್ರಾನ್ಸ್, ಇಂಗ್ಲೆಂಡಿನಲ್ಲಿ ಆಗಿದೆ. ಮಳೆ ಇಲ್ಲದ ಒಣ ಹವೆಯಿಂದ ಫ್ರಾನ್ಸಿನ ದ್ರಾಕ್ಷಿ ಸಿಹಿಯಾಗಿ ಹಣ್ಣಾದರೂ ಫ್ರಾನ್ಸಿನ, ಇಂಗ್ಲೆಂಡಿನ ಹೊಳೆಗಳು ಬೇಸಿಗೆಯಲ್ಲಿ ಹರಿಯುತ್ತಿದ್ದಂತೆ ಬಡವಾಗಿ ಹರಿಯುತ್ತಿರುವುದನ್ನು ಕಂಡು ಜನ ಕಂಗಾಲಾಗಿದ್ದಾರೆ. ಅಲ್ಲಿ ಕೂಡ ಈ ಸಲ ಆಗಿರುವುದು ಒಂದೇ ಸಲದ ಮಳೆ. ಲಕ್ಷಾಂತರ ಪೌಂಡ್ ಮೌಲ್ಯದ ಧಾನ್ಯ ಈ ವರ್ಷ ಅವರ ಪಾಲಿಗೆ ಇಲ್ಲವಾಗುತ್ತಿದೆ.

ಕಣ್ಮರೆಯಾದೀತು, ಎಚ್ಚರಿಕೆ




ನಾವೆಲ್ಲ ಹೀಗೆ ಆಗಲಾರದು ಎಂದು ತಿಳಿದಿರುತ್ತೇವೆ. ಕನ್ನಡವಾಗಲಿ, ಕನ್ನಡ ಸಂಸ್ಕೃತಿಯಾಗಲಿ ಸಾಯಲು ಸಾಧ್ಯವೆ? ನಾಲ್ಕು ಕೋಟಿ ಜನ, ಎರಡು ಲಕ್ಷ ಚದರ ಕಿಲೋಮೀಟರ್‌ನಲ್ಲಿ ಆಡುವ, ವ್ಯವಹರಿಸುವ ಭಾಷೆ ಇಲ್ಲವಾಗುವುದು ಸಾಧ್ಯವೆ?

ಈ ಸಲ ತರುಣ ಗೆಳೆಯರೊಬ್ಬರ ಲೇಖನ 'ರೂಮಿ ಟೋಪಿ'ಯನ್ನು ಪ್ರಕಟಿಸಿದ್ದೇವೆ. ಅದನ್ನು ಓದಿ... ಕೇವಲ ನಲವತ್ತೊರು ವರ್ಷದಲ್ಲಿ ಲಕ್ನೋ, ಅಲಹಾಬಾದ್, ಬನಾರಸ್‌ಗಳಲ್ಲಿ ಉರ್ದು ಮತ್ತು ಉರ್ದು ಸಂಸ್ಕೃತಿ ಇಲ್ಲವಾಗಿರುವುದು ನಮಗೆ ಸುದ್ದಿ ಮಾತ್ರ. ಆದರೆ ಹೈದರಾಬಾದ್‌ನಲ್ಲಿ ರೂಮಿ ಟೋಪಿ ಕಾಣೆಯಾಗಿರುವುದು, ಉರ್ದು ಮುಶೈರಾಗಳ, ಉರ್ದು ಮಾಧ್ಯಮ, ಉರ್ದು ಸಂಸ್ಕೃತಿ ಇಲ್ಲವಾಗಿರುವುದು ಕಠೋರ ಸತ್ಯ. ಭಾಷೆ, ಸಂಸ್ಕೃತಿ ಎಂಬುದು ಕೇವಲ ಜನರಲ್ಲ, ಕೇವಲ ನೀವು ಇಷ್ಟಪಡುವ ಅಥವಾ ಅಲ್ಲಗಳೆವ ವ್ಯಕ್ತಿಗಳಲ್ಲ, ಒಂದು ಪ್ರದೇಶದ ಜನತೆ ಜೀವಿಸುತ್ತಲೇ ಆಡಿದ, ವ್ಯವಹರಿಸಿದ, ಸೃಷ್ಟಿಸಿದ, ಹಾಡಿಕೊಂಡ, ಕಾಪಾಡಿ ಇಟ್ಟುಕೊಂಡ ಒಂದು ಸೊಗಡಿನ ಮೊತ್ತ ಸಂಸ್ಕೃತಿ. ಒಮ್ಮೆ ಭಾಷೆಯಿಂದ ಲಾಭವಾಗಲಿ, ವ್ಯವಹಾರವಾಗಲಿ, ನೌಕರಿಯಾಗಲಿ ಸಾಧ್ಯವಿಲ್ಲ ಎಂದು ತಿಳಿದೊಡನೆ ಜನ ಕ್ರಮೇಣ ಅದನ್ನು ಬಿಡುತ್ತಾ ಬರುತ್ತಾರೆ.

ಆದ್ದರಿಂದಲೇ ಇವತ್ತು ಇಂಗ್ಲಿಷ್ ಮಾಧ್ಯಮ ಬೇಕು, ಕನ್ನಡ ಮಾಧ್ಯಮ ಬೇಡ ಎನ್ನುವ ಕರ್ನಾಟಕದ ಕೆಲವರು ನಮ್ಮಂಥವರನ್ನು ದುಗುಡದಿಂದ ತುಂಬುತ್ತಾರೆ. ಇಂಗ್ಲಿಷ್ ಭಾಷೆಯೇ ನಮ್ಮ ವ್ಯವಹಾರ, ನೌಕರಿ, ವಿಜ್ಞಾನ ಎಲ್ಲಕ್ಕೆ ರಹದಾರಿಯಾದರೆ ಇಲ್ಲಿ ಕನ್ನಡ ಉಳಿಯುವುದಿಲ್ಲ. ಕನ್ನಡ ನಾಡನ್ನು ಆರ್ಥಿಕವಾಗಿ ಸಮೃದ್ಧಿಗೊಳಿಸದ, ಇಲ್ಲಿಯ ಶಿಕ್ಷಣವನ್ನು ಕೂಡ ಸರಿಯಾಗಿ ನಿಭಾಯಿಸದ, ಕನ್ನಡವನ್ನ ಅನಿವಾರ್ಯಗೊಳಿಸದ ನಮ್ಮ ರಾಜಕಾರಣಿಗಳು ಇದಕ್ಕೆ ಮುಖ್ಯ ಕಾರಣ. ನಿಜಕ್ಕೂ ಬೇಕೆಂದರೆ ಇಂಗ್ಲಿಷನ್ನಾಗಲಿ, ಫ್ರೆಂಚ್‌ನ್ನಾಗಲಿ ಚೆನ್ನಾಗಿ ಕಲಿಸದಿರುವ ಕನ್ನಡವನ್ನು ಎಲ್ಲ ಹಂತದಲ್ಲಿ ಕನ್ನಡದ ಮಕ್ಕಳಿಗೆ ನೀಡದ ಸರ್ಕಾರಗಳು ಪಾತಕಿಗಳು.

ನಿಮಗೆ ಒಂದು ಗುಟ್ಟನ್ನು ಹೇಳುತ್ತೇನೆ. ಅಖಿಲ ಭಾರತ ಮಟ್ಟದ ಇಂಗ್ಲಿಷ್ ಪತ್ರಿಕೆಯೊಂದು ನನ್ನನ್ನು ತಮ್ಮಲ್ಲಿ ಅಂಕಣ ಬರೆಯಲು ಕೇಳಿತು. ನಾನು ತಿರಸ್ಕರಿಸಿದೆ. "ಏಕೆ? ಚೆನ್ನಾಗಿ ಸಂಭಾವನೆ ಕೊಡುತ್ತೇವೆ" ಅಂದರು. ನಾನು ಹೇಳಿದೆ, "ಸಂಭಾವನೆಯೆಲ್ಲ ಸರಿ... ನಾನು ಕನ್ನಡದಲ್ಲಿ ಲೇಖನ ಬರೆಯಲು ಎರಡು ಗಂಟೆ ತೆಗೆದುಕೊಂಡರೆ ಇಂಗ್ಲಿಷ್‌ನಲ್ಲಿ ಬರೆಯಲು ನಾಲ್ಕಾರು ಗಂಟೆ ಬೇಕು. ಅಲ್ಲದೆ ನನಗಿಂತ ಚೆನ್ನಾಗಿ ಇಂಗ್ಲಿಷ್ ಬರೆಯುವವರ ತಾತ್ಸಾರಕ್ಕೆ ಒಳಗಾಗುತ್ತೇನೆ. ನನಗನ್ನಿಸಿದ್ದನ್ನು ನನ್ನ ಭಾಷೆಯಲ್ಲಿ ಮಾತ್ರ ಕಷ್ಟಪಟ್ಟಾದರೂ ಚೆನ್ನಾಗಿ ಬರೆಯಬಲ್ಲೆ, ಇಂಗ್ಲಿಷ್‌ನಲ್ಲಿ ಬರೆದು ಹಾಸ್ಯಾಸ್ಪದನಾದರೆ... ಅಂಥ ಅವಮಾನವನ್ನು ನಾನು ಸಹಿಸಲಾರೆ. ಅಲ್ಲದೆ ಹಾಸ್ಯಾಸ್ಪದವಾಗದಿರಲು ಅನೇಕ ಹಗಲು, ಅನೇಕ ರಾತ್ರಿ ತರಬೇತಿ ಪಡೆದುಕೊಂಡು ನನ್ನ ಶಕ್ತಿಯನ್ನೆಲ್ಲ ವ್ಯಯಿಸುವುದು ಮೂರ್ಖತನ. ಹಾಗಾದರೆ ನನ್ನ ಕತೆ, ಪದ್ಯಗಳನ್ನೇಕೆ ನಾನು ಇಂಗ್ಲಿಷ್‌ನಲ್ಲಿ ಬರೆಯಬಾರದಿತ್ತು ಹೇಳಿ? ಹಾಗೆ ಬರೆಯುವಂಥ ಭಂಡತನ ನನ್ನಲ್ಲಿಲ್ಲ."

ಹಿಂದಿ ತನ್ನ ದೂರದರ್ಶನದ ಚಮಕಿನ ಮೂಲಕ ಕನ್ನಡವನ್ನು ಒತ್ತರಿಸುತ್ತಿದೆ; ಇಂಗ್ಲಿಷ್ ತನ್ನ ಆಧುನಿಕ ಮಾಧ್ಯಮಗಳ ಮೂಲಕ ಕನ್ನಡವನ್ನು ತುಳಿಯತೊಡಗಿದೆ. ಹೊಸೂರು ರಸ್ತೆಯಿಂದ ಇಪ್ಪತ್ತು ಕಿಲೋಮೀಟರ್ ದೂರದಲ್ಲಿ, ಬನಶಂಕರಿಯ ಕೊನೆಯಲ್ಲಿರುವ ನನ್ನ ಮನೆಯ ಆಸುಪಾಸಿನಲ್ಲಿ ಕನ್ನಡದ ಮಾತು ಕಿವಿಗೆ ಬೀಳುತ್ತಿಲ್ಲ ಅಂದರೆ ನಿಮಗೆ ಆತಂಕವಾಗುವುದಿಲ್ಲವೆ? ■



ತಾಟಕಿ

ಹಸಿರುಟ್ಟ ತಾಟಕಿಯ ಎದೆಹೊಕ್ಕ
ರಾಮನ ಬಾಣಕ್ಕೆ
ದಂಡಕಾರಣ್ಯ ಕೆಂಪಾಗಿದೆ

❑

ತಾಟಕಿಯ ತೋಳುಗಳ ಕತ್ತರಿಸಿದ
ರಾಮನಿಗೆ ಸೀತೆಯ ತೋಳುಗಳು
ಹೂಮಾಲೆ ಹಾಕಿದವು

❑

ಯಜ್ಞಕುಂಡದಲ್ಲಿ
ಮಣ್ಣು ಸುರಿದ ತಾಟಕಿ
ಈ ಮಣ್ಣಿನ ಮಗಳು

❑

ಸೀತೆಯ ಸ್ವಯಂವರದಲ್ಲಿ
ತಾಟಕಿಯ ಕತ್ತರಿಸಿದ ಕೈಗಳು
ರಾಮನನ್ನು ಹರಸಿದವು

❑

ನಿರಾಯುಧ ತಾಟಕಿಯ
ಭೀಕರ ಕೊಲೆಯಾಗಿದೆ
ನ್ಯಾಯ ಕೊಡುವವರಾರು?

ಅಹಿಂಸಾತ್ಮಕ ಹೋರಾಟದಿಂದ ದಂಡಕಾರಣ್ಯದ ರಕ್ಷಣೆಯ ಹೊಣೆ ಹೊತ್ತಿದ್ದ ತಾಟಕಿ ಭಾರತದ ಮೊದಲ ಪರಿಸರವಾದಿ. ನಾಲ್ಕು ತಲೆಮಾರುಗಳನ್ನು ಕಂಡ ಮುಪ್ಪಾನು ಮುದುಕಿ ತಾಟಕಿಯನ್ನು ಮೋಸದಿಂದ ರಾಮನ ಮುಖಾಂತರ ಸಾಯಿಸಿದರು. ಈ ಅಭಿಪ್ರಾಯವಿರುವ ಲೇಖನವನ್ನು ವಾರ್ತಾಭಾರತಿಯಲ್ಲಿ ಓದಿದಾಗ ಅನಿಸಿ ಬರೆದದ್ದು.

■ ಡಾ. ಸಿ. ರವೀಂದ್ರನಾಥ್

'ದಶಾವತಾರಿ' ಕಮಲ್‌ನ ಕಮಾಲ್

ಭಾರತ ಚಿತ್ರರಂಗದಲ್ಲಿ ಕಮಲಹಾಸನ್ ಬಗ್ಗೆ ಒಂದು ಜೋಕ್ ಇದೆ. ಅದೇನೆಂದರೆ 'ಕಮಲ್ ತನ್ನ ಸಹಕಲಾವಿದರೊಂದಿಗೆ ಎಂದೂ ನಟಿಸುವುದಿಲ್ಲ, ಬದಲಾಗಿ ಆತ ಯಾವತ್ತೂ ತನ್ನೊಂದಿಗೆ ಮಾತ್ರ ನಟಿಸಲು ಇಚ್ಛಿಸುತ್ತಾರೆ' ಎಂಬುದು. 'ದಶಾವತಾರಂ' ಚಿತ್ರದಲ್ಲಿ ಕಮಲ್ ಒಮ್ಮೆಲೆ ಹತ್ತು ಪಾತ್ರಗಳಲ್ಲಿ ನಟಿಸುವ ಮೂಲಕ ವಿಶ್ವ ದಾಖಲೆ ಸ್ಥಾಪಿಸಿದ್ದಾರಲ್ಲದೆ, ತಮ್ಮ ಬಗೆಗಿನ ಜೋಕ್‌ಅನ್ನು ಸಮರ್ಥಿಸಿಕೊಂಡಿದ್ದಾರೆ.

ಕಮಲ್ ಬಗ್ಗೆ ಹುಟ್ಟಿಕೊಂಡಿರುವ ಆ ಜೋಕ್‌ಗೆ ಹಲವಾರು ಉದಾಹರಣೆಗಳು ಸಿಗುತ್ತವೆ. 'ಪುಣ್ಣಗೈ ಮನ್ನನ್' ಚಿತ್ರದಲ್ಲಿ ದ್ವಿಪಾತ್ರದಲ್ಲಿ ನಟಿಸಿದ ಕಮಲ್ ಆ ನಂತರ 'ಅಪೂರ್ವ ಸೋದರರ್‌ಗಳ್' ಚಿತ್ರದಲ್ಲಿ ಮೂರು ಪಾತ್ರಗಳಲ್ಲಿ ನಟಿಸಿದ್ದರು. ಆಮೇಲೆ 'ಮೈಕೆಲ್ ಮದನ್ ಕಾಮರಾಜನ್' ಚಿತ್ರದಲ್ಲಿ ನಾಲ್ಕು ಪಾತ್ರಗಳಲ್ಲಿ ನಟಿಸಿ ಅದರಲ್ಲೂ ಸೈ ಎನಿಸಿಕೊಂಡರು. ಆದರೆ ಕುಬ್ಜ, ಪೆದ್ದ, ಹಳ್ಳಿಗಮಾರ, ಕಳ್ಳ, ಪ್ರಿಯಕರ ಇಂತಹ ಪುರುಷ ಪಾತ್ರಗಳು ಸಾಲುವುದಿಲ್ಲವೆಂಬಂತೆ, 'ಅವ್ವೈ ಷಣ್ಮುಗಿ' ಚಿತ್ರದಲ್ಲಿ ಓರ್ವ ಮಹಿಳಾ ಪಾತ್ರವನ್ನೂ ಮಾಡಿ ಜನ ಮೆಚ್ಚುಗೆ ಗಳಿಸಿದರು.

ಈಗ ಅವೆಲ್ಲವನ್ನು ಮೀರುವಂತೆ ತಮ್ಮ ಹೊಸ ಚಿತ್ರದಲ್ಲಿ ದಶಾವತಾರವನ್ನು ತಾಳಿದ್ದಾರೆ ಕಮಲಹಾಸನ್. ಇದರಲ್ಲಿ ಕಮಲ್ ಅಮೆರಿಕನ್, ಜಪಾನೀಸ್, ಉತ್ತರ ಭಾರತದವ, ತಮಿಳಿಯನ್, ಮಹಿಳೆ- ಹೀಗೆ ಹತ್ತಾರು ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರ ಹೇಗಿದೆ ಎಂದರೆ ಇದನ್ನು ತುಂಡು ತುಂಡಾಗಿಸಿದರೆ ಏನಿಲ್ಲವೆಂದರೂ ನಾಲ್ಕು ತಮಿಳು ಸಿನಿಮಾಗಳನ್ನೋ ಅಥವಾ ಆರು ಕನ್ನಡ ಚಿತ್ರಗಳನ್ನೋ ನಿರ್ಮಿಸಬಹುದಿತ್ತು.

ಅದ್ಭುತ ಕಲಾವಿದ ಮತ್ತು ಕನಸುಗಾರ, ಪ್ರತಿಭಾವಂತ ನಟ, ನಿರ್ದೇಶಕ, ಸಂಭಾಷಣೆಗಾರ, ಸಂಗೀತಗಾರನೂ ಆಗಿರುವ ಕಮಲ್ ಸ್ವತಃ ತಾವೇ 'ದಶಾವತಾರಮ್' ಚಿತ್ರದ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನೂ ಬರೆದಿದ್ದಾರೆ. ಮಾತ್ರವಲ್ಲ, ಇದನ್ನೊಂದು ಅದ್ಭುತ ಚಿತ್ರವನ್ನಾಗಿಸಬೇಕೆಂದು ಅದಕ್ಕಾಗಿ ಮೂರು ವರ್ಷಗಳ ಕಾಲವನ್ನು ಸವೆದಿದ್ದಾರಲ್ಲದೆ ಪ್ರತಿ ಪಾತ್ರದ ಮೇಕಪ್‌ಗೆಂದು ಗಂಟೆಗಟ್ಟಲೆ ತಾಳ್ಮೆಯಿಂದ ಕೂತಿದ್ದಾರೆ. ಪ್ರತಿ ಪಾತ್ರವೂ ತನ್ನ ನಡೆ ಮತ್ತು ನುಡಿ, ಶೈಲಿ ಮತ್ತು 'ಬಾಡಿಲ್ಯಾಂಗ್ವೇಜ್‌ನಿಂದ ವಿಭಿನ್ನವಾಗಿ ಕಾಣಿಸುವಂತೆ ನಟಿಸಿದ್ದಾರೆ.

ಆದರೆ ಹತ್ತು ಪಾತ್ರಗಳಲ್ಲಿ ಒಬ್ಬನೇ ನಟಿಸುವ ಅಗತ್ಯವಿತ್ತೇ? ಆ ಪಾತ್ರಗಳನ್ನು ಇತರರು ಮಾಡಲಿಕ್ಕಾಗುತ್ತಿರಲಿಲ್ಲವೇ? ಕಮಲ್ ಎಂಬ ನಟನ ಅತಿಯಾಕಾಂಕ್ಷೆಗಾಗಿ ಮಾಡಿರುವ ಚಿತ್ರ ಇದೋ ಅಥವಾ ಭಾರತೀಯ ಚಿತ್ರೋದ್ಯಮದಲ್ಲಿ ಒಂದು ಮೈಲಿಗಲ್ಲಾಗುವ ಚಿತ್ರ ಇದೋ ಎಂಬೀ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವಲ್ಲದೆ, ಕಮಲ್ ದಶಾವತಾರಗಳನ್ನು ತಾಳಿರುವ ಈ ಚಿತ್ರದ ಕತೆಯಾದರೂ ಎಂತಹದ್ದು ಎಂಬ ಕುತೂಹಲವೂ ಕಾಡುತ್ತದೆ.

ಒಂದೇ ವಾಕ್ಯದಲ್ಲಿ ಈ ಚಿತ್ರದ ಕಥೆಯನ್ನು ಹೇಳುವುದಾದರೆ ಧಾರ್ಮಿಕ ಸಹಿಷ್ಣುತೆಯ ಕೊರತೆಯೇ ಎಲ್ಲ ಅಶಾಂತಿ ಮತ್ತು ಹಿಂಸೆಗೆ ಕಾರಣ ಎಂಬುದೇ ಆಗಿದೆ. ಹನ್ನೆರಡನೆ ಶತಮಾನದ ವೈಷ್ಣವ ಮತ್ತು ಶೈವರ ನಡುವಿನ ಕಿತ್ತಾಟದಿಂದ ಹಿಡಿದು ಇವತ್ತು ಧರ್ಮದ ಹೆಸರಿನಲ್ಲಿ ನಡೆಯುವ ಭಯೋತ್ಪಾದನೆಯನ್ನು ಕಮಲ್ ಚಿತ್ರದುದ್ದಕ್ಕೂ ಒಂದು ಸೆಲೆಯಾಗಿ ತಂದಿದ್ದಾರೆ.



ಆದರೆ ಚಿತ್ರವನ್ನು ನೋಡಿದ ನಂತರ ಕಮಲ್ ಓರ್ವ ಅಪ್ರತಿಮ ನಟ ಎಂಬುದು ಮತ್ತೊಮ್ಮೆ ಸಾಬೀತಾಗುತ್ತದೆ. ಮಾತ್ರವಲ್ಲ, ವಿಶ್ವ ದಾಖಲೆ ಸ್ಥಾಪಿಸಲೆಂದೇ ಕಮಲ್ ಈ ಚಿತ್ರದಲ್ಲಿ ನಟಿಸಿದ್ದಾರೆ ಎಂದೂ ಅನಿಸದೇ ಇರದು. ಅದಕ್ಕೆ ಕಾರಣ ಇಷ್ಟೊಂದು ಪಾತ್ರಗಳಲ್ಲಿ ಕಮಲ್‌ರವರ ನಟನೆ ಗಮನ ಸೆಳೆಯುವುದು ಕೇವಲ ನಾಲ್ಕೈದು ಪಾತ್ರಗಳಲ್ಲಿ ಮಾತ್ರ. ಮಿಕ್ಕೆಲ್ಲಾ ಸಂಖ್ಯಾ ದೃಷ್ಟಿಯಿಂದ ದಾಖಲೆ ಮಾಡಲು ಮಾಡಿರುವ ಗಿಮಿಕ್ ಅಷ್ಟೇ.

ವ್ಯಾಪಾರಿ ದೃಷ್ಟಿ

ಇವತ್ತು ತಮಿಳು ಸಿನಿಮಾಗಳಿಗೆ ಜಪಾನ್‌ನಿಂದ ಹಿಡಿದು ಅಮೆರಿಕಾತನಕ ಪ್ರೇಕ್ಷಕರಿದ್ದಾರೆ. ಅವರನ್ನೆಲ್ಲ ಮೆಚ್ಚಿಸಲೆಂದೇ ಈ ಚಿತ್ರದಲ್ಲಿ ಕಮಲ್ ಓರ್ವ ಜಪಾನಿ ಮಾರ್ಷಲ್ ಮತ್ತು ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗೆಯೇ ಭಾರತದಾದ್ಯಂತ ವೀಕ್ಷಕರನ್ನು ಸೆಳೆಯಲು ಯತ್ನಿಸಿದ್ದಾರೆ. ಉತ್ತರ ಭಾರತದ ಪ್ರೇಕ್ಷಕರಿಗಾಗಿ ಸಿಂಗ್ ಪಾತ್ರ, ತೆಲುಗರಿಗಾಗಿ ಪೊಲೀಸ್ ಆಫೀಸರ್ ಬಲರಾಮ್ ನಾಯ್ಡು ಪಾತ್ರ, ಮುಸ್ಲಿಮರಿಗಾಗಿ ಕಾಲಿಫುಲ್ಲಾ ಖಾನ್ ಪಾತ್ರ, ತಮಿಳುನಾಡಿನ ಹಿಂದುಳಿದ ವರ್ಗದವರಿಗಾಗಿ ದಲಿತ ಹೋರಾಟಗಾರನ ಪಾತ್ರ, ಮತ್ತು ಹಿಂದಿನಂತೆ ಓರ್ವ ಮುದಿ ಹೆಂಗಸಿನ ಪಾತ್ರ ಇವೆಲ್ಲವುಗಳು ಕಮಲ್ ಅತಿ ಬುದ್ಧಿವಂತಿಕೆಗೆ ಸಾಕ್ಷಿ.



ಎಲ್ಲ ಪಾತ್ರಗಳನ್ನೂ ನಿಭಾಯಿಸುವ ತರಾತುರಿಯಲ್ಲಿ ಕೆಲ ಪಾತ್ರಗಳ ಮೇಕಪ್ ಕೆಲವೆಡೆ ಖರಾಬ್ ಆಗಿದೆ. ಕಾಲಿಫುಲ್ಲಾ ಖಾನ್‌ನ ಪಾತ್ರವಂತೂ ಅನಿಮೇಶನ್ ಗ್ರಾಫಿಕ್ಸ್ ಮಾಡಿದಂತೆ ಭಾಸವಾಗುತ್ತಿದೆ. ಆದರೆ ಜಪಾನಿ ಮಾರ್ಷಲ್ ಪಾತ್ರದಲ್ಲಿ ಕಮಲ್‌ನ ಆಂಗಿಕ ಅಭಿನಯ ನೂರಕ್ಕೆ ನೂರರಷ್ಟು ಜಪಾನೀಯರನ್ನು ಹೋಲುತ್ತದೆ. ಪೊಲೀಸ್ ಆಫೀಸರ್ ಬಲರಾಮ್ ನಾಯ್ಡು ಪಾತ್ರವಂತೂ ಟಿಪಿಕಲ್ ಆಂಧ್ರಾವಾಲನನ್ನು ನೆನಪಿಗೆ ತರಿಸುತ್ತದೆ. ಭೂ ಹೋರಾಟಗಾರನ ಬಣ್ಣ, ನಡೆಯುವ ಶೈಲಿ, ಮಾತಿನ ಏರಿಳಿತ ಎಲ್ಲವೂ 'ತಮಿಳ್ ಪುಲಿ'ಯೇ ಎದುರು ಬಂದ ಅನುಭವವಾಗುತ್ತದೆ. ಜಾರ್ಜ್‌ಬುಷ್ ವೇಶದಲ್ಲಿ ಬರುವ ಕಮಲ್‌ಅಂತೂ ಥೇಟು ಬುಷ್‌ನ ಪಡಿಯಚ್ಚಿನಂತಿದ್ದಾರೆ. ಪಂಜಾಬಿ ಹಾಡುಗಾರನ ಪಾತ್ರ ಚಿತ್ರಕ್ಕೆ ಅನಗತ್ಯವಾಗಿ ತುರುಕಿರುವಂತಿದ್ದರೂ ಆ ಪಾತ್ರದಲ್ಲಿ ಕಮಲ್ ನಟನೆ ಅದ್ಭುತ. ಜೊತೆಗೆ ಆತನೊಂದಿಗೆ ಹೆಜ್ಜೆ ಹಾಕಿರುವ ಜಯಪ್ರದಾ ಕೂಡ ವಯಸ್ಸಾಗಿದ್ದರೂ ಗ್ಲಾಮರ್ ಕಳೆದುಕೊಂಡಿಲ್ಲ ಎಂಬುದನ್ನು ಸಾಬೀತುಮಾಡಿದ್ದಾರೆ.

ಐಟಂ ಸಾಂಗುಗಳಲ್ಲಿ ತನ್ನ ಅಂಗಪ್ರದರ್ಶನಕ್ಕೇ ಮೀಸಲಾಗಿದ್ದ ಮಲ್ಲಿಕಾ ಶೆರಾವತ್ ಮೊದಲ ಬಾರಿಗೆ ತನಗೆ ನಟನೆಯೂ ಬರುತ್ತೆ ಅನ್ನೋದನ್ನು ಖಚಿತಗೊಳಿಸಿದ್ದಾಳಲ್ಲದೇ ಬಾಂಡ್ ಶೈಲಿಯ ಪಾತ್ರದಲ್ಲಿ ಗಮನ ಸೆಳೆಯುತ್ತಾಳೆ. ನಾಯಕಿಯಾಗಿ ಮೆಳ್ಳಗಣ್ಣು ಸುಂದರಿ ಆಸಿನ್ ಮುದ್ದುಮುದ್ದಾಗಿ ಕಾಣಿಸುತ್ತಾಳೆ.

ಒಟ್ಟಾರೆ ಈ ಚಿತ್ರದ ನರೇಷನ್ ಸ್ಟೈಲ್ ಇರಲಿ, ಛೇಸಿಂಗ್ ದೃಶ್ಯಗಳಿರಲಿ... ಎಲ್ಲವೂ ಹಾಲಿವುಡ್ ಮಾದರಿಯಲ್ಲೇ ಇದೆ. ಭಾರತ ಚಿತ್ರರಂಗದಲ್ಲೇ ಇಷ್ಟೊಂದು ತಾಂತ್ರಿಕವಾಗಿ ಶ್ರೀಮಂತವಾಗಿರುವ ಚಿತ್ರ ಇಲ್ಲೀ ತನಕ ಬಂದಿಲ್ಲ.

ಜಿಗುಪ್ಸೆ ಹುಟ್ಟುವುದೇ ಅಲ್ಲಿ!

ಇಡೀ ಸಿನಿಮಾದಲ್ಲಿ ಮುಖ್ಯ ಪಾತ್ರ ಧಾರಿ ಗೋವಿಂದ್ (ಕಮಲ್) ನನ್ನು ಬೆನ್ನಟ್ಟಿ ಕಾಡುವ ಸಿಐಎ ಏಜೆಂಟ್ (ಕಮಲ್) ಮಾತ್ರ ಪ್ರೇಕ್ಷಕರ ಪಾಲಿಗೆ ಶನಿಯಂತೆ ಕಾಡುವುದು ಈ ಚಿತ್ರದ ದೊಡ್ಡ ದುರಂತ. ದೊಡ್ಡ ದೊಡ್ಡ ಕಟ್ಟಡಗಳಿಂದ ಬೊಂಬೆಯಂತೆ ಜಿಗಿಯುತ್ತಾ ಸಿಕ್ಕಸಿಕ್ಕವರನ್ನು ಕೊಲ್ಲುವ ಆ ಪಾತ್ರ ಹಾಲಿವುಡ್‌ನ ಹಾರರ್ ಸಿನಿಮಾದ ದೆವ್ವದಂತಿದೆ.

2001ರಲ್ಲಿ ತೆರೆಗೆ ಬಂದಿದ್ದ ಕಮಲ್‌ನ 'ಅಭಯ್' (ತಮಿಳಿನ 'ಆಳವಂದಾನ್') ಚಿತ್ರದಲ್ಲೂ ಕಮಲ್ ಇದೇ ತರ ತನ್ನ ಸೈಕೋಪಾತ್ ಮನೋಭಾವನೆಯನ್ನು ಹೊರಹಾಕಿದ್ದರು. ಆ ಚಿತ್ರ ನೋಡಿದ ವಿಮರ್ಶಕರೆಲ್ಲಾ ಕಮಲ್‌ಗೆ ಹುಚ್ಚು ಹಿಡಿದಿದೇ ಎಂದೇ ಬರೆದಿದ್ದರು. ಈಗ 'ದಶಾವತಾರಮ್'ನ ಸಿಐಎ ಏಜೆಂಟ್ ಪಾತ್ರವೂ ಸಹ ಅಭಯ್‌ಗೆ ಹೊರತಾಗಿಲ್ಲ.

ಸುನಾಮಿ

ಚಿತ್ರದ ಕೊನೆಯಲ್ಲಿ ಬರುವ ಸುನಾಮಿ ದೃಶ್ಯವಂತೂ ಗ್ರಾಫಿಕ್‌ಗಳಲ್ಲಿ ಮಾಡಿರುವುದು ಎಂಬ ಸುಳಿವೂ ಕೊಡದಂತೆ ಮಾಡಲಾಗಿದೆ. ಮೂರ್ನಾಲ್ಕು ನಿಮಿಷದ ಆ ದೃಶ್ಯಕ್ಕೇ ಕೋಟಿಗಟ್ಟಲೆ ಹಣ ಸುರಿದಿದ್ದಾರೆ. ನಿಜವಾಗಿಯೂ ಸುನಾಮಿ ಬಂದಾಗಲೇ ಶೂಟ್ ಮಾಡಿದ್ದಾರೋ ಅನ್ನಿಸುವಷ್ಟು ನೈಜವಾಗಿ ಮೂಡಿಬಂದಿದೆ ಈ ಸುನಾಮಿ ದೃಶ್ಯ.

ಜಾತ್ಯತೀತತೆ

ಅತಿರಂಜಕವೆನಿಸುವಂಥಾ ಪಾತ್ರಗಳ ನಡುವೆಯೂ ಗಮನ ಸೆಳೆಯುವುದು ಸ್ವತಃ ಕಮಲ್ ಬರೆದಿರುವ ಡೈಲಾಗ್‌ಗಳು. ಜಾತಿವಾದಿಯಾದ ನಾಯಕಿ ಪೆರಿಯಾರ್ ಹೆಸರು ಕೇಳಿದಾಕ್ಷಣ ಮುಖ ಕಿವುಚುವ ದೃಶ್ಯ ಇಂದಿಗೂ ಬ್ರಾಹ್ಮಣ್ಯದ ಮಡಿವಂತಿಕೆಯನ್ನು ತೋರಿಸುತ್ತದೆ. ಚಿತ್ರದ ಕೊನೆಯಲ್ಲಿ ಸಂಭವಿಸುವ ಸುನಾಮಿಯ ನಂತರ ಬ್ರಾಹ್ಮಣನೊಬ್ಬ ಬಂದು ಮುದುಕಿಗೆ (ಕಮಲ್) "ಸತ್ತು ಬಿದ್ದಿರುವವನು ಯಾವ ಜಾತಿಯವನೋ, ಯಾವ ಕುಲದವನೋ. ಅವನನ್ನು ಮುಟ್ಟಬೇಡ. ಮೈಲಿಗೆಯಾಗುತ್ತೆ" ಎಂದಾಗ ಆ ಮುದುಕಿ ತನ್ನ ಮಡಿವಂತಿಕೆಯನ್ನು ಮೀರಿ, ಸತ್ತು ಬಿದ್ದಿರುವವನನ್ನು ತನ್ನ ಮಡಿಲಿಗೆ ಹಾಕಿಕೊಂಡು "ಯಾವ ಜಾತಿಯಾದರೇನು? ಯಾವ ಕುಲವಾದರೇನು? ಕಳೆದು ಹೋಗಿರುವುದು ಜೀವ. ಆತನೂ ತನ್ನ ಮಗನಂತೆ" ಎಂದು ಹೇಳುವ ದೃಶ್ಯ ಮನಮುಟ್ಟುತ್ತದೆ. ಹಾಗೆಯೇ ಇನ್ನೊಂದು ದೃಶ್ಯದಲ್ಲಿ ತಾಯ್‌ನಾಗೇಶ್ "ಮುಸ್ಲಿಮರೆಲ್ಲಾ ಟೆರರಿಸ್ಟರಲ್ಲ" ಎಂದು ಮನದಟ್ಟು ಮಾಡಿದಾಗ ಪ್ರೇಕ್ಷಕ ನಿಜಕ್ಕೂ ಭಾವೋದ್ವೇಗಕ್ಕೆ ಒಳಗಾಗುತ್ತಾನೆ.

ಈ ರೀತಿ ಚಿತ್ರದ ಆರಂಭದ ವೈಷ್ಣವ ಮತ್ತು ಶೈವ ಜಾತಿಗಳ ನಡುವಿನ ಜಾತಿಸಮರದಿಂದ ಹಿಡಿದು ಚಿತ್ರದ ಅಂತ್ಯದವರೆಗೂ ಬರುವ ಅನೇಕ ದೃಶ್ಯಗಳಲ್ಲಿ ಕಮಲ್ ತಮ್ಮ ಜಾತ್ಯತೀತ ಮನೋಭಾವವನ್ನು ಮೆರೆದಿರುವುದು ಮೆಚ್ಚಬೇಕಾದ ಅಂಶ.

ಚಿತ್ರ ಗೆಲ್ಲುತ್ತಾ?

ಸುಮಾರು ನೂರಾ ಇಪ್ಪತ್ತು ಕೋಟಿ ರೂಪಾಯಿಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರ ಭಾರತದಲ್ಲಿ ತಯಾರಿಸಲಾದ ಅತಿ ದುಬಾರಿ ಚಿತ್ರ. ಆದರೆ ಚಿತ್ರಕ್ಕೆ ಎಷ್ಟೇ ಖರ್ಚು ಮಾಡಿರಲಿ, ಯಾರು ಎಷ್ಟು ಪಾತ್ರಗಳಲ್ಲಾದರೂ ನಟಿಸಿರಲಿ, ಅದರಲ್ಲಿ ಎಷ್ಟೇ ತಾಂತ್ರಿಕ ಶ್ರೀಮಂತಿಕೆಯಿರಲಿ, ಕೊನೆಗೆ ಎಲ್ಲಕ್ಕಿಂತ ಮುಖ್ಯವಾಗುವುದು 'ಗೆಲುವು' ಎಂಬ ಮೂರಕ್ಷರವಷ್ಟೇ. ಈ ನಿಟ್ಟಿನಲ್ಲಿ ನೋಡುವುದಾದರೆ 'ದಶಾವತಾರಂ' ಮಾಸ್ ಹಿಟ್ ಆಗುವುದು ಕಷ್ಟಸಾಧ್ಯ. ಯಾಕೆಂದರೆ ಈ ಚಿತ್ರ ಬರೀ ತಮಿಳುನಾಡು ಅಥವಾ ಭಾರತವನ್ನು ಮನಸ್ಸಿನಲ್ಲಿಟ್ಟುಕೊಂಡು ನಿರ್ಮಿಸಿಲ್ಲ. ಈ ಚಿತ್ರ ಸಂಪೂರ್ಣ ಹಾಲಿವುಡ್ ಶೈಲಿಯಲ್ಲಿರುವುದರಿಂದ ಇಲ್ಲಿನ ಲೋಕಲ್ ಜನ ಇದನ್ನು ಅರ್ಥಮಾಡಿಕೊಂಡು ಜೀರ್ಣಿಸುವುದು ಸುಲಭದ ಮಾತಲ್ಲ. ಒಂದು ವೇಳೆ ಅವರ ಮಾರ್ಕೆಟ್ ವ್ಯಾಪ್ತಿ ದೊಡ್ಡದಿರುವುದರಿಂದ ಚಿತ್ರಕ್ಕೆ ಖರ್ಚು ಮಾಡಿರುವ ನೂರು ಕೋಟಿ ವಾಪಸ್ ಬಂದರೆ ಅದು ಪವಾಡವೇ ಸರಿ.

ಅದೆಲ್ಲ ಏನೇ ಇರಲಿ, ಈ ಚಿತ್ರದ ಮೂಲಕ ಕಮಲ್ ತಾನು ಸಕಲಕಲಾವಲ್ಲಭನ್ ಎಂಬುದನ್ನು ತೋರಿಸಿದ್ದಾರೆ. ಈ ಕಾರಣಕ್ಕಾದರೂ ಚಿತ್ರವನ್ನೊಮ್ಮೆ ನೋಡಿದರೆ ಯಾವ ನಷ್ಟವೂ ಇಲ್ಲ. ಯಾಕೆಂದರೆ ಕಮಲ್‌ನ ಶ್ರಮ ಮತ್ತು ಕಲ್ಪನೆಗೆ ಬೆಲೆ ಕಟ್ಟಲಾಗುವುದಿಲ್ಲ, ಅದೇ ಕಮಲ್‌ನ ಕಮಾಲ್!

■ ಅರುಣ್ ಕುಮಾರ್. ಜಿ

ಓಬಾಮಾ ಈ ಜಗತ್ತಿನ ಮಕ್ಕಳ 'ಮಾಮಾ' ಆಗಬೇಕು

ಹೊಗಳಿಕೆ

ಗೌರಿಯಕ್ಕ ನಿಮ್ಮ 'ಕಂಡಹಾಗೆ' ಅಂಕಣದಲ್ಲಿ ಒಬ್ಬ ರಾಜಕೀಯ ನಾಯಕನ ಸಾಮಾಜಿಕ ಕಳಕಳಿಯುಳ್ಳ ಭಾಷಣದ ಭಾವಾನುವಾದವನ್ನು ಓದಿ ನಿಜಕ್ಕೂ ತುಂಬಾ ಹೆಮ್ಮೆಯಾಯಿತು. ಜಗತ್ತಿನ ಅತ್ಯಂತ ಬಲಾಢ್ಯ ಪ್ರತಿಷ್ಠಿತ ಹಾಗೂ ಅಷ್ಟೇ ವಿಷಯುಕ್ತ ಪೀಠವನ್ನು ಅಲಂಕರಿಸುವತ್ತ ದಾಪುಗಾಲಿಟ್ಟಿರುವ ಬರಾಕ್ ಓಬಾಮಾರ ನುಡಿಗಳು ಬದಲಾವಣೆಯ ಆಶಯವನ್ನು ಮೂಡಿಸಿದೆ. ಆದರೆ ಅದೇ ವ್ಯಕ್ತಿ ಕ್ಯೂಬಾದ ಬಗ್ಗೆ ತನ್ನ ನಿಲುವನ್ನು ಪ್ರಕಟಿಸುತ್ತಾ "ನಾನೂ ಕ್ಯೂಬಾ ಸರಕಾರದ ವಿರುದ್ಧ ದಿಗ್ಬಂಧನವನ್ನು ಮುಂದುವರಿಸಲಿದ್ದೇನೆ" ಎನ್ನುವಾಗ ಅಮೆರಿಕದ ಅಧ್ಯಕ್ಷಗಾದಿ ಓಬಾಮಾರ ವ್ಯಕ್ತಿತ್ವವನ್ನು, ಜನಪರ ಕಾಳಜಿಯನ್ನು ನುಂಗಿ ಹಾಕುತ್ತದೆಯೇ? ಎಂಬ ಅಳುಕೂ ಮೂಡುತ್ತದೆ.

ಏನೇ ಇರಲಿ, ಟಿವಿಯಲ್ಲಿ "...ಅಮೆರಿಕದ ಪ್ರಥಮ ಮಹಿಳಾ ಅಧ್ಯಕ್ಷೆಯಾಗುವ ಹಿಲರಿ ಕ್ಲಿಂಟನ್ ಕನಸು ಭಗ್ನಗೊಂಡಿದೆ" ಎಂದು ಕೇಳಿದಾಗ ನಾನೂ ಕೂಡಾ ಕೆನ್ಯಾದ ನೀರು ಮಾರಾಟಗಾರ ಪಾಸ್ಕಲ್ ಒವ್ಯಾಗೊವಿನಂತೆ ಸಂಭ್ರಮಪಟ್ಟೆ. ಮಹಿಳೆಯೊಬ್ಬರು ಆ ಪೀಠವನ್ನು ಏರುವುದರ ವಿರುದ್ಧ ನನ್ನ ನಿಲುವಲ್ಲ, ಬದಲು ನನ್ನದೇ ಬಣ್ಣದವನೊಬ್ಬ ಅಮೆರಿಕಾದ ಅಧ್ಯಕ್ಷನಾಗುತ್ತಾನೆಂಬ ಹೆಮ್ಮೆ.

ಓಬಾಮಾ ಅಮೆರಿಕದ ಅಧ್ಯಕ್ಷರಾಗಬೇಕು, ಆ ಮೂಲಕ ಆ ಪೀಠಕ್ಕಂಟಿದ ವಿಷವನ್ನು ತೊಳೆಯಬೇಕು, ಅಮೆರಿಕದ ದೊಡ್ಡಸ್ತಿಕೆ ಹಾಗೂ ಸರಕಾರಿ ಭಯೋತ್ಪಾದನೆಯಿಂದಾಗಿ ತಬ್ಬಲಿಗಳಾಗಿರುವ ಈ ಜಗತ್ತಿನ ಅದೆಷ್ಟೋ ಮಕ್ಕಳು ಅವರನ್ನು ಪ್ರೀತಿಯಿಂದ "ಬಾ...ಮಾಮಾ.."" ಎನ್ನುವಂತಾಗಬೇಕು, ನನ್ನ ಹಾಗೂ ನನ್ನಂತಹ ಲಕ್ಷಾಂತರ ಮಂದಿಯ ಆಶಯ, ಕೆನ್ಯಾದ ಸಂಭ್ರಮ, ಸಂಭ್ರಮವಾಗಿಯೇ ಉಳಿಯಬೇಕು, ಪಶ್ಚಿಮದಿಂದ ಬದಲಾವಣೆಯ ಗಾಳಿ ಬೀಸಬೇಕು ಓಬಾಮಾ...

- ಸಂತೋಷ ಗುಡ್ಡಿಯಂಗಡಿ, ಕುಂದಾಪುರ


ಜೂನ್ 11ರ ಸಂಚಿಕೆಯಲ್ಲಿ ಗೌರಿ ಲಂಕೇಶರ 'ನಾಯಕತ್ವದ ಗುಣ' ಲೇಖನವು ಎರಡೆರಡು ಸಾರಿ ಓದುವಂತಿತ್ತು, ಅಮೆರಿಕದ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಬರಾಕ್ ಒಬಾಮಾರ ಭಾಷಣವನ್ನು ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಗೆ ಗೌರಿ ಮಾಡಿದ ಭಾವಾನುವಾದ ತುಂಬಾ ಚೆನ್ನಾಗಿತ್ತು.

ನಮ್ಮ ರಾಜಕಾರಣಿಗಳಿಂದ ಓಬಾಮಾರ ಮಟ್ಟವನ್ನು ಎದುರುನೋಡುವುದು ವ್ಯರ್ಥ. ಹಲವಾರು ಕಾರಣಗಳಿಂದ ತಮ್ಮ ವೈಯಕ್ತಿಕ ನಿಲುವನ್ನು ತಮ್ಮ ಪಕ್ಷಕ್ಕೋ ಅಥವಾ ಇತರೆ ಕಾರಣಗಳಿಗೋ ಮಾರಿಕೊಂಡಿರುವ ಈ ಜನರು ಅಂತಹ ಸ್ವತಂತ್ರ ನಿಲುವಿಗೆ ಬದ್ಧರಾಗುವುದು ಅಪರೂಪ. ನಮ್ಮ ಜನರಲ್ಲೂ ಒಂದು ತರಹದ ಸಾಮೂಹಿಕ ಅಶಕ್ತತೆ ಇದೆ. ಇದನ್ನು ಉಪಯೋಗಿಸಿಕೊಳ್ಳುವ ನಮ್ಮ ರಾಜಕಾರಣಿಗಳು ಜನರಿಗೆ ಒಗ್ಗುವ ಅರ್ಥವಿಲ್ಲದ ವಿಷಯಗಳನ್ನೇ ಎತ್ತಿ ಹಿಡಿದು ಅವರನ್ನು ಕೆರಳಿಸುವ ಯತ್ನ ಮಾಡುತ್ತಾರೆ. ಅದರೊಡನೆ ಹಣ ಮತ್ತಿತರ ಆಮಿಷಗಳನ್ನೂ ಒಡ್ಡಿ ಜನರ ಒಂದೇ ಒಂದು ಅಸ್ತ್ರವಾದ 'ಓಟ'ನ್ನು ಹಾಳುಗೆಡವುದರಲ್ಲಿ ಸಫಲರಾಗುತ್ತಾರೆ. ಅವರ ಉದ್ದೇಶವನ್ನು ಈಡೇರಿಸಿಕೊಂಡ ನಂತರ ಜನರ ಮೂಲಭೂತ ಸಮಸ್ಯೆಗಳನ್ನು ಗಮನಿಸುವವರು ಯಾರು? ಹಿಂದಿನಿಂದಲೂ ಹಲವಾರು ಸಮಸ್ಯೆಗಳಿಂದ ಬಾಧಿಸಲ್ಪಟ್ಟ ವರ್ಗಗಳು ಅದೇ ಸ್ಥಿತಿಯಲ್ಲಿ ಮುಂದುವರೆಯುತ್ತಾರೆ. ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಈ ವರ್ಗಗಳ ಸಮಸ್ಯೆಗಳ ಪರಿಹಾರಕ್ಕೆ ಬಹುಶಃ ದೇವರೇ ಮತ್ತೆ ಪ್ರತ್ಯಕ್ಷವಾದರೂ ಸಾಧ್ಯವಿಲ್ಲವೇನೋ....

- ಬಾಲಕೃಷ್ಣ ಭಟ್, ಚೆನ್ನೈ

ಇಂಥ ದಿವ್ಯ ಕವರ್ ಪೇಜ್ ಹೊಂದಿರುವ ಈ ಸಲದ 'ಲಂಕೇಶ್'ಗೆ 12 ರೂ. ಖರ್ಚು ಮಾಡಲು ನನಗೆ ಮನಸ್ಸು ಬರುತ್ತಿಲ್ಲ, ನಮ್ಮ 'ಲಂಕೇಶ್'ಗೆ ಈ ಬಗೆಯ ಚೀಪ್ ಪ್ರಯತ್ನಗಳ ಅಗತ್ಯ ಖಂಡಿತಾ ಇಲ್ಲ. ಇಂತಹದ್ದನ್ನು ಮತ್ತೆ ಮಾಡಬೇಡಿ ಪ್ಲೀಸ್. ಈ ಪತ್ರಿಕೆ ನನ್ನದು, ನನ್ನಂಥ ಸಾವಿರಾರು ಜನರದ್ದು. ಡೋಂಟ್ ಹರ್ಟ್ ಅಸ್, ಪ್ಲೀಸ್...

- ಟಿ.ಕೆ. ದಯಾನಂದ, ಬೆಂಗಳೂರು



ಸಿನಿಮಾರಂಗದಲ್ಲಿ ಅತಿಬೇಗ ಪ್ರವರ್ಧಮಾನಕ್ಕೆ ಬಂದ ನೀಳ ಕಾಯದ, ಬೊಕ್ಕ ತಲೆಯ ಮತ್ತು ವಿಭಿನ್ನ ಮ್ಯಾನರಿಸಂನ 'ಕಂಠಿ' ಕಿಶೋರ್ ಇಂದು ಕರ್ನಾಟಕದ ನಾನಾ ಪಾಟೇಕರ್ ಎಂದೇ ಖ್ಯಾತರಾಗಿದ್ದಾರೆ. ಇಂಥ ಅಪರೂಪದ ನಟ ಚಿತ್ರರಂಗದಲ್ಲಿ ಸಾಗಿಬಂದದ್ದು ಹೀಗೆ....

ಕಲರ್‌ಫುಲ್ ಬದುಕಿನತ್ತ

ಕಿ | ಶೋ | ರ್

ಕೇವಲ ನಾಲ್ಕೈದು ವರ್ಷಗಳ ಹಿಂದೆಯಷ್ಟೇ ಸಾವಿರದ ಇನ್ನೂರು ರೂಪಾಯಿ ತಿಂಗಳ ಪಗಾರಕ್ಕೋಸ್ಕರ ಬೆಂಗಳೂರಿನ ಶಾರದಾ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದ ಯುವಕನೊಬ್ಬ ಇಂದು ತಮಿಳುನಾಡಿನಲ್ಲಿ ಖ್ಯಾತ ನಟನಾಗಿ ಬೆಳೆದಿದ್ದಾನೆ. ಮಾತ್ರವಲ್ಲ ಆತ ನಟಿಸಿದ ಎರಡನೇ ಸಿನಿಮಾಕ್ಕೆ ಶ್ರೇಷ್ಠ ಖಳನಟ ಎಂಬ ಪ್ರಶಸ್ತಿಯನ್ನೂ ಪಡೆದಿದ್ದಾನೆ.

ಹೌದು ಆ ನಟ ಬೇರೆ ಯಾರೂ ಅಲ್ಲ, 'ಕಂಠಿ' ಖ್ಯಾತಿಯ ಕಿಶೋರ್. ತನ್ನ ಸಹಜ ನಟನೆಯಿಂದಲೇ ಎಲ್ಲರ ಗಮನ ಸೆಳೆದಿರುವ ಕಿಶೋರ್ ಈಗ ರಜನೀಕಾಂತ್, ಅರ್ಜುನ್ ಸರ್ಜಾ ಮತ್ತು ಪ್ರಕಾಶ್ ರೈ ಸಾಲಿಗೆ ಸೇರ್ಪಡೆಗೊಂಡಿದ್ದಾರೆ.

ಕಿಶೋರ್ ಕಿರುಹಾದಿ

ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಪಿಯುಸಿಯಲ್ಲಿ ಎರಡೆರಡುಬಾರಿ ಫೇಲ್ ಆಗಿದ್ದ ಕಿಶೋರ್‌ಗೆ ಮೊದಲಿನಿಂದಲೂ ನಟನೆ, ನಾಟಕಗಳ ವ್ಯಾಮೋಹ. ಅಂತೂ ಇಂತೂ ಅಲ್ಲೇ ಡಿಗ್ರಿ ಮುಗಿಸಿದ ಕಿಶೋರ್ ಎಂಎ ಮಾಡಲು ಸೇರಿದ್ದು ಬೆಂಗಳೂರು ವಿ.ವಿಯನ್ನು. ಆದರೆ ಅಲ್ಲಿ ಆತ ಎಂಎ ಓದಿದ್ದಕ್ಕಿಂತ ಜ್ಞಾನಭಾರತಿಯ ಸುಂದರ ವಾತಾವರಣದಲ್ಲಿ ಅಲೆದಾಡುತ್ತಾ ಕಾಲ ಕಳೆದದ್ದೇ ಹೆಚ್ಚು. ಕಿ.ರಂ. ನಾಗರಾಜ, ಸಿದ್ದಲಿಂಗಯ್ಯ ಮತ್ತು ನಟರಾಜ್ ಹುಳಿಯಾರ್‌ರಂಥ ಮೇಷ್ಟ್ರುಗಳಿದ್ದರೂ ಒಂದು ದಿನವೂ ಸರಿಯಾಗಿ ಕ್ಲಾಸಿಗೆ ಹೋಗುತ್ತಿರಲಿಲ್ಲವಂತೆ. ಕರ್ನಾಟಕ ಕಂಡ ಅಪ್ರತಿಮ ಮೇಧಾವಿ ಡಿ.ಆರ್. ನಾಗರಾಜ್ ಕಿಶೋರ್‌ಗೆ ಖಾಸಾ ಚಿಕ್ಕಪ್ಪ ಆಗಬೇಕು. ದುರದೃಷ್ಟವೆಂದರೆ ತನ್ನ ಚಿಕ್ಕಪ್ಪ ಇಷ್ಟು ದೊಡ್ಡ ವ್ಯಕ್ತಿ ಅಂತಾ ಈತನಿಗೆ ಗೊತ್ತಾಗಿದ್ದೇ ಅವರು ತೀರಿಕೊಂಡ ನಂತರವಂತೆ.

ವಿಚಿತ್ರ ಪ್ರೇಮ

ಕಾಲೇಜು ದಿನಗಳಲ್ಲಿ ಇವರೊಂದಿಗೆ ನಾಟಕಗಳಲ್ಲಿ ಭಾಗವಹಿಸುತ್ತಿದ್ದ ಹುಡುಗಿಯೊಬ್ಬಳಿಗೆ ಅಪಘಾತದಲ್ಲಿ ಕೈ ಫ್ರ್ಯಾಕ್ಚರ್ ಆಯಿತು. ಆಗ ತಾತ್ಕಾಲಿಕವಾಗಿ ಆಕೆಯ ಬೈಕ್ ಡ್ರೈವರ್ ಆದ ಕಿಶೋರ್ ಆಕೆಗೇ ಲೈನ್ ಹೊಡೆದು ಆಕೆಯನ್ನು ಮದುವೆಯೂ ಆದರು. ಆದರೆ ಜೀವನ ಸಾಗಿಸುವುದಕ್ಕೆ ಒಂದು ಕೆಲಸ ಅಂತ ಬೇಕಲ್ಲಾ? ಅದಕ್ಕೆಂದು ಹೊಸ ದಂಪತಿಗಳು ಅವಲಂಬಿಸಿದ್ದು ಪ್ಯಾಕಿಂಗ್ ಬಾಕ್ಸ್‌ಗಳ ಡಿಸ್ಟ್ರಿಬ್ಯೂಷನ್‌ಅನ್ನು. ಆದರೆ ಅದ್ಯಾಕೋ ಅದು ಅವರ ಕೈಗೆ ಹತ್ತಲಿಲ್ಲ, ಅದೇ ಸಮಯಕ್ಕೆ ಇಬ್ಬರ ಮನೆಯವರೂ ಇವರಿಬ್ಬರನ್ನು ಮನೆಯಿಂದ ಹೊರಹಾಕಿದರು.

ಅಲ್ಲಿಂದ ಶುರುವಾಯಿತು ತಾಪತ್ರಯಗಳ ಮಹಾಪೂರ. ಕೈಯಲ್ಲಿ ಕೆಲಸವಿಲ್ಲ, ತಲೆ ಮೇಲೊಂದು ಸೂರಿಲ್ಲ, ಮುಂದಿನ ಊಟ ಎಲ್ಲಿಂದ ಎಂಬುದೂ ಗೊತ್ತಿಲ್ಲ. ಇವರಿಬ್ಬರೇ ಆಗಿದ್ದರೆ ಪರವಾಗಿರಲಿಲ್ಲ, ಆದರೆ ಅವರೊಂದಿಗೆ ಎರಡು ನಾಯಿಗಳು, ಒಂದಷ್ಟು ಬೆಕ್ಕುಗಳು, ಜೊತೆಗೊಂದು ಕೋತಿ ಇದ್ದ ಬೃಹತ್ ಸಂಸಾರ ಅವರದ್ದು!! ಇವರಿಗೇ ಹೊಟ್ಟೆಗೆ ಗತಿ ಇಲ್ಲದ ಕಾಲದಲ್ಲಿ ಇವರನ್ನೇ ನಂಬಿಕೊಂಡಿದ್ದ ಪ್ರಾಣಿಗಳನ್ನೂ ಸಾಕುವ ಹೊರೆ. ಕಿಶೋರ್ ದಂಪತಿಗಳ ಪ್ರಾಣಿ ಪ್ರೀತಿ ಎಷ್ಟಿದೆಯೆಂದರೆ ಎರಡು ವರ್ಷಗಳ ಹಿಂದೆ ಇವರನ್ನು ಅಗಲಿದ ಮುದ್ದಿನ ಕೋತಿ ಪಾಲಿಯ ಹೆಸರನ್ನೇ ಅವರ ಮಗುವಿಗೆ ಇಟ್ಟಿದ್ದಾರೆ.

ಆಗ ಬಾಡಿಗೆ ಮನೆ ಮಾಡಲೂ ಕಾಸಿಲ್ಲದೆ ಒದ್ದಾಡುತ್ತಿದ್ದ ಸಂದರ್ಭದಲ್ಲಿ ಅವರ ಸ್ನೇಹಿತರೊಬ್ಬರು ಜೆ.ಪಿ.ನಗರದ ತಮ್ಮ ಮನೆಯ ಮಹಡಿ ಮೇಲಿನ ಕೋಣೆಯನ್ನು ಇವರಿಗೆ ಬಿಟ್ಟುಕೊಟ್ಟರಂತೆ. ಕಿಶೋರ್‌ರ ತಂದೆ ಮಾಗಡಿಯಲ್ಲಿನ ಸರ್ಕಾರಿ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ್. ಮಹಾನ್ ಶಿಸ್ತಿನ ಮನುಷ್ಯ, ಸದಾ ತಂದೆಯೊಂದಿಗೆ ಕಿತ್ತಾಡುತ್ತಿದ್ದ ಕಿಶೋರ್ ಸ್ವಾಭಿಮಾನದಿಂದ ಮನೆಯಿಂದ್ಲೇನೋ ಬಿಟ್ಟುಬಂದಿದ್ದರು. ಆದರೆ ಹೊಟ್ಟೆ ತುಂಬಿಸಿಕೊಳ್ಳೋದೇ ಸಮಸ್ಯೆ. ಆಗೆಲ್ಲ ತಂದೆ ಮನೆಯಲ್ಲಿಲ್ಲದ ಸಮಯದಲ್ಲಿ ಮನೆಗೆ ಹೋಗಿ ಕದ್ದೂ ಮುಚ್ಚಿ ಉಂಡು ಬರುತ್ತಿದ್ದರಂತೆ ಕಿಶೋರ್.

ಆ ಸಮಯದಲ್ಲೇ ಚಿತ್ರರಂಗದ ನಂಟೂ ಬೆಳೆದಿದೆ. ಆಗ ತಾನೇ ಫ್ಯಾಷನ್ ಡಿಸೈನಿಂಗ್ ಕೋರ್ಸ್ ಮಾಡಿಕೊಂಡಿದ್ದ ಸ್ನೇಹಿತ ನರೇಂದ್ರಬಾಬುರೊಂದಿಗೆ 'ಕಂಠಿ' ಚಿತ್ರಕ್ಕೆ ಕಾಸ್ಟ್ಯೂಮ್ ಡಿಸೈನ್ ಮಾಡಲು ಹೋದರಂತೆ. ಆದರೆ ಅವರಿಗೆ ದೊರಕಿದ್ದು ಖಳನಾಯಕನ ಪಾತ್ರ. ಆ ಪಾತ್ರಕ್ಕಾಗಿ ಅಂದು ಚಿತ್ರತಂಡದವರು ಇವರ ಫೋಟೋವೊಂದನ್ನು ಕೇಳಿದರೆ ಅದೂ ಸಹಾ ಇವರ ಬಳಿ ಇರಲಿಲ್ಲವಂತೆ. ನಂತರ ಸ್ನೇಹಿತರೊಬ್ಬರ ಬಟ್ಟೆಯನ್ನು ಧರಿಸಿ ಅವರದ್ದೇ ಕ್ಯಾಮೆರಾದಲ್ಲಿ ಫೋಟೋ ತೆಗೆಸಿ ಕೊಟ್ಟರಂತೆ. ಕಿಶೋರ್‌ಗೆ ಆ ಪಾತ್ರವೇನೋ ದೊರಕಿತು. ಆದರೆ ಅದರಿಂದ ಅವರಿಗೆ ಒಂದೇ ಒಂದು ರೂಪಾಯಿ ಆದಾಯ ಬರಲಿಲ್ಲವಂತೆ. ಆದರೇನಂತೆ, ನಟನಾಗಿ ಅವರ ಬದುಕು ಪ್ರಾರಂಭವಾಗಲು 'ಕಂಠಿ' ನೆರವಾಯಿತು. ಆದರೂ ಎರಡನೇ ಸಿನಿಮಾ 'ರಾಕ್ಷಸ' ಮಾಡುವ ಸಂದರ್ಭದಲ್ಲಿ ಕಿಶೋರ್‌ರ ಬಳಿ ಹಾಕಿಕೊಳ್ಳುವಂಥ ಒಂದೊಳ್ಳೆಯ ಬಟ್ಟೆ ಕೂಡ ಇರಲಿಲ್ಲವಂತೆ. ಇವರ ಪಾಡನ್ನು ನೋಡಲಾರದೆ ಆವರ ಭಾವ ಕರಕೊಂಡು ಹೋಗಿ ಹೊಸ ಬಟ್ಟೆ ಮತ್ತು ಶೂಗಳನ್ನು ಕೊಡಿಸಿದರಂತೆ.

ಇಂಥ ಸಮಯದಲ್ಲಿ 'ರಾಕ್ಷಸ'ದ ನಿರ್ದೇಶಕ ಸಾಧು ಕೋಕಿಲಾ "ನೀವು ಸ್ಟಂಟ್ಸ್ ಕಲಿಯಲೇಬೇಕು" ಎಂದು ಫತ್ವಾ ಹೊರಡಿಸಿದರಂತೆ. ಅದನ್ನು ಎಲ್ಲಿ ಕಲಿಯಬೇಕೆಂದು ಗೊತ್ತಾಗದೆ ತಲೆಮೇಲೆ ಕೈಹೊತ್ತು ಕೂತಿದ್ದ ಕಿಶೋರ್‌ರನ್ನು ಸಂಭಾಷಣೆಕಾರ ರಂಗನಾಥ್ 'ದುನಿಯಾ' ವಿಜಯ್ ಬಳಿ ಕಳಿಸಿಕೊಟ್ಟರಂತೆ. ಆಗ ಸ್ವತಃ ವಿಜಯ್ ಕೂಡ ಚಿಕ್ಕ ಪುಟ್ಟ ಪಾತ್ರಗಳಲ್ಲಿ ನಟಿಸುತ್ತ ಕಡುಕಷ್ಟದಲ್ಲಿದ್ದರೂ ಕಿಶೋರ್‌ರಿಂದ ಒಂದು ಪೈಸೆಯನ್ನೂ ನಿರೀಕ್ಷಿಸದೆ ಫೈಟ್ ಹೇಳಿಕೊಟ್ಟಿದ್ದಾರೆ ವಿಜಿ.

ಒಂದು ತಮಾಷೆಯ ಸಂಗತಿಯೆಂದರೆ ಕತ್ರಿಗುಪ್ಪೆ ರಿಂಗ್ ರಸ್ತೆಯಲ್ಲಿ ವಿಜಯ್ ಮತ್ತು ಕಿಶೋರ್ ಸ್ಟಂಟ್ ಪ್ರಾಕ್ಟೀಸ್ ಮಾಡುತ್ತಿದ್ದರಂತೆ. ಹೇಳಿಕೇಳಿ ಅಲ್ಲಿನ ಸುತ್ತಮುತ್ತಲಿನ ಸ್ಲಂ ನಿವಾಸಿಗಳೆಲ್ಲಾ ಬಹಿರ್ದೆಸೆಗೆ ಹೋಗುವ ಜಾಗವದು. ಮೊದಲೆಲ್ಲ ಎಲ್ಲೆಲ್ಲೋ ಸಂದಿಗಳಲ್ಲಿ ಕೂರುತ್ತಿದ್ದವರೆಲ್ಲಾ ದಿನಕಳೆದಂತೆ ಇವರ ಫೈಟ್ ಪ್ರಾಕ್ಟೀಸ್ ನೋಡಲು ಇವರ ಸುತ್ತಲೂ ಕುಳಿತು ತಮ್ಮ 'ಕಾರ್ಯ'ವನ್ನು ನಿರ್ವಹಿಸುತ್ತಿದ್ದರಂತೆ! ಕೊನೆಗೆ, ಈ ಹಿಂಸೆ ತಾಳಲಾರದೆ ಇಬ್ಬರೂ ತಮ್ಮ ಪ್ರಾಕ್ಟೀಸ್ ಲೊಕೇಷನ್‌ಅನ್ನು ಬೇರೆಡೆಗೆ ಶಿಫ್ಟ್ ಮಾಡಿದರಂತೆ.

ಕನ್ನಡದಲ್ಲಿ 'ಕಂಠಿ'ಯ ಬೀರನ ಪಾತ್ರ ಕಿಶೋರ್‌ಗೆ ಒಳ್ಳೆಯ ಬ್ರೇಕ್ ನೀಡಿತಾದರೂ ಚಿತ್ರ ಯಶಸ್ವಿಯಾಗಲಿಲ್ಲ, ನಂತರ ಬಂದ 'ರಾಕ್ಷಸ' ಮತ್ತು 'ಶುಭಂ'ಯೂ ಅಷ್ಟೆ. ಆದರೆ ಆನಂತರ ಬಂದ 'ಡೆಡ್ಲಿ ಸೋಮ' ಮತ್ತು 'ಆಕಾಶ್' ಚಿತ್ರಗಳು ಕಿಶೋರ್ ಚಿತ್ರರಂಗದಲ್ಲಿ ನಟನಾಗಿ ಉಳಿಯುವಂತೆ ಮಾಡಿದವು. 'ಕುಮಾರರಾಮ' ಎಂಬ ಪೌರಾಣಿಕ ಸಿನಿಮಾದಲ್ಲಿ ಸೇನಾಧಿಪತಿಯಾಗಿ ನಟಿಸಿದರೂ ಭಾರ್ಗವರ ನೀರಸ ನಿರ್ದೇಶನದಿಂದ ಚಿತ್ರ ನೆಲಕಚ್ಚಿತು.

ಕಿಶೋರ್‌ಗೆ ತಕ್ಕುದಾದ ಪಾತ್ರ ದಕ್ಕಿದ್ದು 'ದುನಿಯಾ'ದಲ್ಲಿ, ಸದಾ ಕೈಯಲ್ಲಿ ಪಿಸ್ತೂಲು ಹಿಡಿದುಕೊಂಡು ಕಂಡ ಕಂಡ ರೌಡಿಗಳನ್ನೆಲ್ಲಾ ಢಮಾಢಂ ಎಂದು ಸುಟ್ಟು ಬಿಸಾಡುವ ಎಸಿಪಿ ಉಮೇಶ್ ಪಾತ್ರ ಕಿಶೋರ್‌ಗೆ ಹೇಳಿಮಾಡಿಸಿದಂತಿತ್ತು.

ಪರಭಾಷೆಗೆ ಹಾರಿದ್ದು....

ಇವರ ಅದೃಷ್ಟವೋ ಏನೋ ಕಿಶೋರ್ ಪಾಲಿಗೆ ಪರಭಾಷೆಗಳಲ್ಲಿ ಅವಕಾಶ ಗಿಟ್ಟಿಸುವುದು ರಜನಿ ಮತ್ತು ರೈಗೆ ಆದಂತೆ ಕಷ್ಟಕರವಾಗಲಿಲ್ಲ. ರಾಮೋಜಿ ರಾವ್ ಸ್ಟುಡಿಯೋದಲ್ಲಿ ಪುನೀತ್ ಅಭಿನಯದ 'ಆಕಾಶ್' ಸಿನಿಮಾದ ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭದಲ್ಲಿ ಕಿಶೋರ್ ಅಭಿನಯವನ್ನು ಗಮನಿಸಿದ ತೆಲುಗು ನಿರ್ದೇಶಕ 'ಹ್ಯಾಪಿ' ಚಿತ್ರದಲ್ಲಿ ಇವರಿಗೆ ಒಂದು ಪಾತ್ರವನ್ನು ಕೊಟ್ಟರು. ನಂತರ 'ಹ್ಯಾಪಿ'ಯ ಇನ್‌ಫ್ಲೂಯೆನ್ಸ್‌ನಿಂದಾಗಿ ಕಿಶೋರ್‌ಗೆ ತಮಿಳಿನಲ್ಲೂ ಸುಲಭವಾಗಿ ಅವಕಾಶ ಸಿಕ್ಕಿತು. ಹೀಗೆ ಕೈಗೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡಿದ್ದರಿಂದಲೇ ಕಿಶೋರ್‌ಗೆ ಮೇಲಿಂದ ಮೇಲೆ ಅವಕಾಶಗಳ ಸುರಿಮಳೆಯಾಗಿದ್ದು. ಇವರು ಮೊದಲು ನಟಿಸಿದ 'ಜಯಂಕೊಂಡ' ಚಿತ್ರದಿಂದಾಗಿಯೇ ಇವರ ಬಗ್ಗೆ ಸಿಕ್ಕಾಪಟ್ಟೆ ಕ್ರೇಜ್ ಸೃಷ್ಟಿಯಾಯಿತು. ಈ ಕಾರಣಕ್ಕೇ ರಜನಿಯ ಅಳಿಯ ಧನುಷ್ ಮತ್ತು ರಮ್ಯಾ ಅಭಿನಯದ 'ಪೊಲ್ಲಾದವನ್' ಚಿತ್ರಕ್ಕೂ ಕಿಶೋರ್ ಖಳನಟನ ಪಾತ್ರಕ್ಕೆ ಆಯ್ಕೆಯಾದರು. ಅದೃಷ್ಟ ಮತ್ತೆ ಕೈತಪ್ಪಲಿಲ್ಲ, 'ಪೊಲ್ಲಾದವನ್' ಕೂಡ ಸೂಪರ್ ಡೂಪರ್ ಹಿಟ್ ಆಯಿತು. ಜೊತೆಗೆ ಕಿಶೋರ್‌ಗೆ ಶ್ರೇಷ್ಠ ಖಳನಟ ಪ್ರಶಸ್ತಿಯೂ ಲಭಿಸಿತು. ಈತ ಆರಂಭದಲ್ಲೇ ಅಲ್ಲಿ ಅದೆಂತಾ ಹವಾ ಸೃಷ್ಟಿಸಿದ್ದಾರೆಂದರೆ ಕಮಲ್‌ನಂಥ ಮೇರುನಟನನ್ನೇ ಹಿಗ್ಗಾಮುಗ್ಗಾ ಜಾಡಿಸುವ ತಮಿಳುನಾಡಿನ ಖ್ಯಾತ ವಿಮರ್ಶಕ ತಿರ್ರೈ ಪಾರ್ವೈ ಮದನ್‌ರಂಥವರು 'ಕಿಶೋರ್‌ರ ನಟನೆಯನ್ನು ನೋಡಲಾದರೂ ಈ ಸಿನಿಮಾ ನೋಡಬೇಕು' ಎಂದಿದ್ದಾರೆ. ಸದ್ಯ 'ಸಿಲಿಂಬಾಟಂ', 'ಮುತ್ತಿರೈ', 'ವೆನ್ನಿಲಾ ಕಬಡ್ಡಿ ಕುಳಂ' ಮುಂತಾದ ತಮಿಳು ಚಿತ್ರಗಳಲ್ಲಿ ನಟಿಸುತ್ತಿರುವ ಕಿಶೋರ್ ಅಲ್ಲಿ ಫುಲ್ ಬಿಜಿಯಾಗಿದ್ದಾರೆ.


ಹೀಗೆ ಕಿಶೋರ್ ತಮಿಳಿನಲ್ಲೇ ಭದ್ರವಾದ ನೆಲೆಯನ್ನು ಸೃಷ್ಟಿಸಿಕೊಂಡಿರುವುದನ್ನು ನೋಡಿದರೆ ಇವರೂ ರಜನಿ, ರೈಗಳಂತೆ ಕನ್ನಡಕ್ಕೆ ನಿಲುಕುವುದಿಲ್ಲವೇನೋ ಎಂಬ ಅನುಮಾನ ಹುಟ್ಟದಿರಲು ಸಾಧ್ಯವಿಲ್ಲ. ಯಾಕೆಂದರೆ ನಮ್ಮ ಕನ್ನಡದವರು ಇವರಿಗೆ ತಕ್ಕ ಪಾತ್ರಗಳನ್ನು ಕೊಡದೇ ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಪರಭಾಷೆಯ ಜನ ಇವರನ್ನು ಕರೆದು ಅವಕಾಶ ನೀಡಿದ್ದಾರೆ. ಅದನ್ನು ಉತ್ತಮವಾಗಿ ಬಳಸಿಕೊಳ್ಳುವುದೇ ಅವರ ಮುಂದಿರುವ ಸದ್ಯದ ಗುರಿ.


ಹೀಗೆ ನೆರೆಯ ರಾಜ್ಯದಲ್ಲಿ ಬಿಸಿ ಆಗಿದ್ದರೂ ಸದ್ಯಕ್ಕೆ ಕಿಶೋರ್ ತಮ್ಮ ತಂಡದೊಂದಿಗೆ ಕನ್ನಡದಲ್ಲಿ 'ಕಬಡ್ಡಿ' ಎಂಬ ಸಿನಿಮಾ ನಿರ್ಮಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಕಬಡ್ಡಿ ಆಟವನ್ನೇ ಕಥಾವಸ್ತುವನ್ನಾಗಿಸಿ ತನ್ನ ಸ್ನೇಹಿತ ನರೇಂದ್ರಬಾಬುರನ್ನೇ ನಿರ್ದೇಶಕನನ್ನಾಗಿಸಿದ್ದಾರೆ.


ಸದ್ಯಕ್ಕೆ ಪರಭಾಷೆಗಳ ಪಾಲಾಗಿರುವ ಕಿಶೋರ್‌ಗೆ ಎಲ್ಲಾದರೂ ಇರು ಎಂತಾದರೂ ಇರು, ಆದರೆ ಎಂದಿಗೂ ನೀ ಕನ್ನಡವಾಗಿರು ಅನ್ನಬಹುದಷ್ಟೇ.

■ ಅರುಣ್.ಜಿ

ಕಂಠವೋ ಕಂಠ!








ತಮಿಳು ಚಿತ್ರರಂಗದವರು ತಮ್ಮತ್ತ ಸೆಳೆದುಕೊಂಡಿರುವ ಕನ್ನಡದ ಪ್ರತಿಭೆಗಳ ವೈಶಿಷ್ಟ್ಯವಾದರೂ ಏನು ಎಂಬುದನ್ನು ಗಮನಿಸಿದ್ದೀರಾ? ಅವರಿಗೆ ಬಹಳವಾಗಿ ಆಸ್ತಿ ಆಗಿರುವುದು ಈ ನಟರ ಕಂಠ!

ಸುಮ್ಮನೆ ಯೋಚಿಸಿ: ಕನ್ನಡದಿಂದ ತಮಿಳು ಚಿತ್ರರಂಗಕ್ಕೆ ಹಾರಿ ಹೋಗಿರುವ ರಜನಿಕಾಂತ್, ಪ್ರಕಾಶ್ ರೈ, ಅರ್ಜುನ್ ಸರ್ಜಾ, ಸಂಪತ್ ಮತ್ತು ಈಗ ಕಿಶೋರ್- ಇವರೆಲ್ಲರದ್ದೂ ವಿಶಿಷ್ಟ ಕಂಠ ಸಂಪತ್ತು. ಈ ಎಲ್ಲ ನಟರನ್ನು ಪರದೆಯ ಮೇಲೆ ನೋಡದಿದ್ದರೂ ಕೇವಲ ಅವರ ವಾಯ್ಸ್‌ನಿಂದಲೇ ಅವರನ್ನು ಗುರುತು ಹಿಡಿಯಬಹುದು. ತಮಿಳಿನ ಮೂರು ನಾಲ್ಕು ಚಿತ್ರದಲ್ಲಿ ಅಭಿನಯಿಸುತ್ತಿರುವ ದೇವರಾಜ್ ಮತ್ತು ಅವಿನಾಶ್‌ರ ಕಂಠಗಳೂ ಡಿಫರೆಂಟಾಗೇ ಇವೆ. ಒಬ್ಬೊಬ್ಬರದ್ದೂ ಮನಸ್ಸಿನಲ್ಲಿ ಉಳಿಯುವಂತಹ ಒಂದೊಂದು ಬಗೆಯ ದನಿ. ಅದನ್ನು ತಮ್ಮ ಪಾತ್ರಕ್ಕೆ ಸರಿಯಾಗಿ ಏರಿಳಿತಗಳೊಂದಿಗೆ ಅಳವಡಿಸುವ ಕಲೆ ಇವರೆಲ್ಲರಿಗೆ ಕರಗತವಾಗಿದೆ.





ಹಾಗೆ ನೋಡಿದರೆ ಇವರೆಲ್ಲರ ಹಿನ್ನೆಲೆ ವಿಭಿನ್ನ. ರಜನೀಕಾಂತ್‌ರದ್ದು ಮರಾಠಿ ಮೂಲ. ಪ್ರಕಾಶ್ ರೈ ತವರೂರು ಮಂಗಳೂರು. ಕಿಶೋರ್ ಮತ್ತು ಅರ್ಜುನ್ ಸರ್ಜಾ ಇಬ್ಬರೂ ಬೆಂಗಳೂರಲ್ಲೇ ಬೆಳೆದವರು. ಸಂಪತ್ ಮಾತ್ರ ಅಸಲಿ ತಮಿಳಿಗನಾದರೂ ಆತ ಬೆಳೆದದ್ದು ಮುಂಬೈಯಲ್ಲಿ. ಸಂಪತ್ ಹೊರತುಪಡಿಸಿ ಇವರ್‍ಯಾರಿಗೂ ತಮಿಳಿನ ಗಂಧಗಾಳಿ ಗೊತ್ತಿರಲಿಲ್ಲ. ಆದರೂ ಆ ಭಾಷೆಯನ್ನು ಬೇಗನೆ ಕಲಿತು ತಂತಮ್ಮ ಪಾತ್ರಗಳಿಗೆ ತಾವೇ ಕಂಠದಾನ ಮಾಡುವ ಮೂಲಕ ಆ ಪಾತ್ರಗಳಿಗೆ ಜೀವ ತುಂಬಿದರು. ಆ ಮೂಲಕ ತಮಿಳು ಚಿತ್ರರಂಗದಲ್ಲಿ ತಮ್ಮ ಛಾಪನ್ನು ಒತ್ತಿದರು. ಅಂದಹಾಗೆ ಇವರೆಲ್ಲರಲ್ಲಿ ರಜನೀ ಮತ್ತು ಅರ್ಜುನ್ ಮಾತ್ರ ಹೀರೋಗಳಾಗಿದ್ದರೆ, ರೈ, ಸಂಪತ್, ಅವಿನಾಶ್, ದೇವರಾಜ್ ಮತ್ತು ಕಿಶೋರ್ ಅಲ್ಲಿನ ಚಿತ್ರಗಳಲ್ಲಿ ವಿಲನ್‌ಗಳಾಗಿದ್ದಾರೆ!

ಇಂತಹ ಪ್ರತಿಭೆಗಳನ್ನು ನಿರ್ಲಕ್ಷಿಸಿದ ಕನ್ನಡ ಚಿತ್ರರಂಗ ಇವತ್ತು ಬಡವಾಗಿದೆ. ಆದರೆ ಅವರೆಲ್ಲರ ಪ್ರತಿಭೆಯನ್ನು ಗುರುತಿಸಿದ ತಮಿಳು ಚಿತ್ರರಂಗ ಅಷ್ಟರಮಟ್ಟಿಗೆ ಉದ್ಧಾರವಾಗಿದೆ.

ಕನ್ನಡದವರದ್ದೇ ಕಾಟ ಅಂದನಂತೆ ವಿಜಯ್‌ಕಾಂತ್!



ಕೆಲ ವರ್ಷಗಳ ಹಿಂದ ತಮಿಳು ನಾಡಿನ ಖ್ಯಾತ ನಟ ವಿಜಯ್‌ಕಾಂತ್ ಒಮ್ಮೆ ಚೆನ್ನೈನಲ್ಲಿನ ಫೈವ್ ಸ್ಟಾರ್ ಹೋಟೆಲಿಗೆ ಕಾಲಿಡುತ್ತಿದ್ದಂತೆ, 'ಎಂಗ್ಯೆ ಪಾತ್ತಾಲೂ ಕನ್ನಡಕಾರರದ್ದೇ ತೊಲ್ಲೈ' (ಎಲ್ಲಿ ನೋಡಿದರೂ ಕನ್ನಡದವರದ್ದೇ ಕಾಟ) ಎಂದು ಉದ್ಗಾರವೆತ್ತಿದನಂತೆ. ಯಾಕೆಂದರೆ ಅಂದು ಆ ಹೋಟೆಲ್‌ನ ಒಂದೆಡೆ ರಜನೀಕಾಂತ್ ಕೂತಿದ್ದರೆ, ಇನ್ನೊಂದೆಡೆ ಅರ್ಜುನ್ ಸರ್ಜಾ ಮತ್ತವರ ಸಹೋದರ ಕಿಶೋರ್ ಸರ್ಜಾ ಇದ್ದರಂತೆ. ಹಾಗೆಯೇ ಮತ್ತೊಂದೆಡೆ ಪ್ರಕಾಶ್ ರೈ ಕೂಡ ತಮ್ಮ ಮಿತ್ರರೊಂದಿಗೆ ಕೂತಿದ್ದರಂತೆ.

ಈಗ ಆ ಪಟ್ಟಿಗೆ ಸಂಪತ್ ಮತ್ತು ಕಿಶೋರ್ ಕೂಡ ಸೇರ್ಪಡೆಗೊಂಡು ವಿಜಯ್‌ಕಾಂತನ ನಿದ್ದೆ ಕೆಡಿಸುವುದರಲ್ಲಿ ಸಂಶಯವಿಲ್ಲ! ■



ತಾರಾ ಮತ್ತು ಅವಾಂತರ

ನಟಿ ತಾರಾ ಮೊನ್ನೆ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಒಬ್ಬರೇ ಭೇಟಿಯಾಗಿ ಹೂಗುಚ್ಛ ನೀಡಿ ಅಭಿನಂದಿಸಿದರಂತೆ. ಅಷ್ಟೇ ಆಗಿದ್ದಲ್ಲಿ ಅದೇನು ವಿಶೇಷ ಸುದ್ದಿಯಾಗುತ್ತಿರಲಿಲ್ಲ. ಆದರೆ 'ರಾಷ್ಟ್ರ ಪ್ರಶಸ್ತಿ ವಿಜೇತ ನಟಿ' ತಾರಾ ಮೇಡಂರವರು "ನೀವು ಆದಷ್ಟು ಬೇಗ ವಿಡಿಯೋ ಪೈರಸಿಯನ್ನು ಹತ್ತಿಕ್ಕಬೇಕು" ಎಂದು ಉದ್ಯಮದ ಪರವಾಗಿ ಸಿಎಂ ಸಾಹೇಬರಿಗೆ ಮನವಿ ಮಾಡಿದರಂತೆ.

ಸಹಜವಾಗಿಯೇ ಇದು ಛೇಂಬರ್‌ನ ಪದಾಧಿಕಾರಿಗಳ ಸಿಟ್ಟು ನೆತ್ತಿಗೇರುವಂತೆ ಮಾಡಿದೆ. ಉದ್ಯಮಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಸಿಎಂ ಗಮನಕ್ಕೆ ತರಲು ಛೇಂಬರ್ ಇದೆ; ಹಾಗೆಯೇ ನಿರ್ಮಾಪಕ, ನಿರ್ದೇಶಕ, ನಟರ ಸಂಘಗಳಿವೆ; ಮೊನ್ನೆಯಷ್ಟೇ ಛೇಂಬರ್ ಕಟ್ಟಡವನ್ನು ಸಿಎಂ ಉದ್ಘಾಟಿಸಿದಾಗ ಅವರಿಗೆ ಉದ್ಯಮ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ಪಟ್ಟಿಯನ್ನೂ ನೀಡಲಾಗಿದೆ. ಆದರೂ ತಾರಾ ಏಕಾಂಗಿಯಾಗಿ ಹೋಗಿ ಉದ್ಯಮದ ಪರವಾಗಿ ಅಹವಾಲು ನೀಡಿದ್ದು ಎಲ್ಲರಿಗೂ ಬೇಸರ ತರಿಸಿದೆ.

ಆಕೆ ವೈಯಕ್ತಿಕವಾಗಿ ಭೇಟಿಯಾಗಿ ತನ್ನ ಮನೆಯ ಗೋಡೆಯನ್ನು ಸ್ವಾಹಾ ಮಾಡಲಿರುವ ರಸ್ತೆ ಅಗಲೀಕರಣದ ಬಗ್ಗೆಯೋ ಅಥವಾ ಪ್ರಶಸ್ತಿ ಸೈಟು ಇತ್ಯಾದಿ ಬಗ್ಗೆಯೋ ಮನವಿ ಮಾಡಿಕೊಳ್ಳಬಹುದಿತ್ತು. ಆದರೆ ಉದ್ಯಮದ ಪರವಾಗಿ ಮನವಿ ನೀಡಲು ಆಕೆ ಯಾರು ಎಂದು ಛೇಂಬರ್‌ನವರು ಗುಡುಗುತ್ತಿದ್ದಾರೆ. ತಾರಾಳ ಈ ವರ್ತನೆಯನ್ನು ಛೇಂಬರ್‌ನವರು ಗಂಭೀರವಾಗಿ ಪರಿಗಣಿಸಿ ಆಕೆಗೆ ಪಾಠ ಕಲಿಸುವ ಸಾಧ್ಯತೆಗಳಿವೆ.

ಪ್ರಶಸ್ತಿಗಳ ಮಧ್ಯೆ ಪತ್ರಕರ್ತರು



ಎಲ್ಲರ ನಿರೀಕ್ಷೆಯಂತೆ ಲಿಂಗದೇವ್ರು ನಿರ್ದೇಶನದ 'ಕಾಡಬೆಳದಿಂಗಳು' ಚಿತ್ರ ಈ ಬಾರಿಯ ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂಬ ರಾಷ್ಟ್ರ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಈ ಚಿತ್ರದ ಒಂದು ವಿಶೇಷ ಯಾವುದೆಂದರೆ ಇದರಲ್ಲಿ ಬಹಳಷ್ಟು ಪತ್ರಕರ್ತರು ಭಾಗವಹಿಸಿದ್ದು. ಇದರ ಕತೆಯನ್ನು ಕನ್ನಡಪ್ರಭದ ಜೋಗಿ ಬರೆದಿದ್ದರೆ, ಚಿತ್ರಕತೆಯನ್ನು ಅದೇ ಕನ್ನಡಪ್ರಭದ ಮತ್ತೋರ್ವ ಪತ್ರಕರ್ತ ಉದಯ ಮರಕಿಣಿ ಬರೆದಿದ್ದರು. ಅಷ್ಟೇಅಲ್ಲ, ಮತ್ತೊಬ್ಬ ಪತ್ರಕರ್ತ ಕೆ.ಎಂ. ವೀರೇಶ್ ಪಾಲುದಾರಿಕೆಯಲ್ಲಿ ಈ ಚಿತ್ರ ನಿರ್ಮಾಣಗೊಂಡಿತ್ತು.

ಕಳೆದ ಕೆಲ ವರ್ಷಗಳಿಂದ ಪ್ರಶಸ್ತಿ ವಂಚಿತರಾಗಿದ್ದ ನಾಗಾಭರಣ ನಿರ್ದೇಶಿಸಿದ್ದ 'ಕಲ್ಲರಳಿ ಹೂವಾಗಿ' ಚಿತ್ರಕ್ಕೆ ಈ ಬಾರಿ ಭಾವೈಕ್ಯತಾ ಪ್ರಶಸ್ತಿ ಸಿಕ್ಕಿದೆ. ಅಂದಹಾಗೆ, ಹಿಂದೆ 'ಗ್ರಹಣ' ಮತ್ತು 'ಸಂತ ಶಿಶುನಾಳ ಶರೀಫ್' ಚಿತ್ರಗಳಿಗಾಗಿ ಇದೇ ಪ್ರಶಸ್ತಿಯನ್ನು ಪಡೆದಿದ್ದ ನಾಗಾಭರಣ ಅದನ್ನು ಮೂರನೇ ಬಾರಿ ಪಡೆದು ಹ್ಯಾಟ್ರಿಕ್ ಬಾರಿಸಿದ್ದಾರೆ.



ಇನ್ನು ಮಾಸ್ಟರ್ ಕಿಶನ್ ನಿರ್ದೇಶನದ 'ಕೇರ್ ಆಫ್ ಫುಟ್‌ಪಾತ್' ಸಿನಿಮಾಗೆ ಅತ್ಯುತ್ತಮ ಮಕ್ಕಳ ಚಿತ್ರಕ್ಕೆ ನೀಡುವ ಸ್ವರ್ಣ ಕಮಲ ಪ್ರಶಸ್ತಿ ದೊರಕಿದೆ. ಆದರೆ ನಮ್ಮ ಟಿವಿ ಚಾನೆಲ್ ಮತ್ತು ಪತ್ರಿಕೆಗಳು ಅದನ್ನು ಹೇಗೆ ವರದಿ ಮಾಡಿವೆಯೆಂದರೆ ಈ ಹುಡುಗನಿಗೆ ಅತ್ಯುತ್ತಮ ಚಿತ್ರಕ್ಕೆ ನೀಡುವ ಸ್ವರ್ಣ ಕಮಲ ಪ್ರಶಸ್ತಿಯೇ ಲಭಿಸಿದೆ ಎಂಬಂತೆ ಬಿಂಬಿಸಿವೆ. ವಾಸ್ತವವಾಗಿ ಆ ಪ್ರಶಸ್ತಿಯು ಈ ಬಾರಿ ಮಲೆಯಾಳಂನ 'ಪುಲಿಜನ್ಮಮ್' ಚಿತ್ರಕ್ಕೆ ದೊರಕಿದೆ. ಆದರೂ ಮಾಸ್ಟರ್ ಕಿಶನ್ ತನ್ನ ಪ್ರಥಮ ಪ್ರಯತ್ನದಲ್ಲೇ ಮಕ್ಕಳ ಚಿತ್ರ ಕ್ಯಾಟಗರಿಯಲ್ಲಿ ಪ್ರಶಸ್ತಿ ಪಡೆದದ್ದು ಚಿಕ್ಕ ಸಾಧನೆಯಲ್ಲ.

ಪ್ರಶಸ್ತಿ ವಿಜೇತರೆಲ್ಲರಿಗೂ ಅಭಿನಂದನೆಗಳು.

ಮೂರು ಚಿತ್ರ | ಮೂರು ಮುಖ | ಮೂರು ಕತೆಗಳು



ಸುಮಾರು ಎರಡೂವರೆ ವರ್ಷಗಳಿಂದ ಡಬ್ಬಾದಲ್ಲಿ ಕೊಳೆಯುತ್ತಿದ್ದ ದಿನೇಶ್ ಬಾಬು ನಿರ್ದೇಶನದ 'ಆಕಾಶಗಂಗೆ' ಚಿತ್ರ ಕೊನೆಗೂ ಬಿಡುಗಡೆಗೊಂಡಿದೆ.

ಚಿತ್ರದ ಮೊದಲರ್ಧ ಎಷ್ಟು ಸುಂದರವಾಗಿದೆಯೆಂದರೆ, ಇಷ್ಟು ಒಳ್ಳೆಯ ಚಿತ್ರ ಬಿಡುಗಡೆಗೊಳ್ಳಲು ಯಾಕೆ ಇಷ್ಟು ಸಮಯ ತೆಗೆದುಕೊಂಡಿತು ಎಂದೆನಿಸುತ್ತದೆ. ದಿನೇಶ್ ಬಾಬು 'ಅಮೃತವರ್ಷಿಣಿ' ಚಿತ್ರದ ಮಾದರಿಯಲ್ಲೇ ಇಲ್ಲೂ ಕೂಡಾ ಪಾತ್ರಗಳನ್ನು ಬಹಳ ಜಾಣ್ಮೆಯಿಂದ ಪರಿಚಯಿಸುತ್ತಾ, ಬೆಳೆಸುತ್ತಾ ಪ್ರೇಕ್ಷಕನಲ್ಲಿ ಕುತೂಹಲವನ್ನು ಮೂಡಿಸುತ್ತಾ ಹೋಗುತ್ತಾರೆ. ಮನಸ್ಸಿಗೆ ಮುದ ನೀಡುವ ಅವರ ಕ್ಯಾಮೆರಾ ಕೈಚಳಕ, ಮಧುರವಾದ ಹಾಡುಗಳು ಆ ಭಾವನೆಯನ್ನು ಹೆಚ್ಚಿಸುತ್ತವೆ.

ಆದರೆ ವಿರಾಮದ ಬಳಿಕ ಈ ಚಿತ್ರ ಯಾಕಾದರೋ ಬಿಡುಗಡೆಗೊಂಡಿತೋ ಎನಿಸುವಷ್ಟು ದಿನೇಶ್ ಬಾಬು ಮುಗ್ಗರಿಸಿದ್ದಾರೆ. ಪ್ರೇಕ್ಷಕನಲ್ಲಿ ಕುತೂಹಲ ಮೂಡಿಸಬೇಕೆಂಬ ಏಕೈಕ ಉದ್ದೇಶದಿಂದ ದೃಶ್ಯಗಳನ್ನು ಯದ್ವಾತದ್ವಾ ಹಿಗ್ಗಿಸಿ ಹಿಂಸಿಸುತ್ತಾರೆ. ವಾಸ್ತವಿಕತೆಯಿಂದ ಕಥೆ ಅವಾಸ್ತವಿಕತೆಯತ್ತ ಜಾರಿಕೊಳ್ಳುವ ಮುಖಾಂತರ 'ಆಕಾಶಗಂಗೆ' ಕೂಡಾ ಮಾಮೂಲಿ ಮಸಾಲೆ ಚಿತ್ರ ಎಂದೆನಿಸಿಕೊಳ್ಳುತ್ತದೆ. ಆದರೂ ಹೊಡಿ-ಬಡಿ-ಕಡಿ ಚಿತ್ರಗಳಿಗಿಂತ ಇದು ಪರವಾಗಿಲ್ಲ ಎನ್ನಬಹುದು.

ಕನ್ನಡದ ನಟಿ ಛಾಯಾಸಿಂಗ್ ಪ್ರಬುದ್ಧವಾಗಿ ನಟಿಸಿ ತನ್ನ ಪ್ರತಿಭೆ ಪ್ರದರ್ಶಿಸಿದ್ದಾಳೆ. ಆದರೆ ಅದೇ ಮಾತನ್ನು ಖಂಡಿತವಾಗಿಯೂ ನಾಯಕ ಮಿಥುನ್ ಬಗ್ಗೆ ಹೇಳಲು ಸಾಧ್ಯವಿಲ್ಲ.



ಉದಯ್ ಜಾದೂಗಾರ್ ನಿರ್ದೇಶನದ 'ದರೋಡೆ' ಚಿತ್ರಕ್ಕೆ ಸಿಕ್ಕಿದಷ್ಟು ಪ್ರಚಾರ ಇತ್ತೀಚಿನ ದಿನಗಳಲ್ಲಿ ಬೇರೆ ಯಾವ ಚಿತ್ರಕ್ಕೂ ದೊರೆತಿರಲಾರದು. ಅದರಲ್ಲೂ ಈ ಚಿತ್ರ ಒಂದು ವಾರ ಮಾತ್ರ ಚಿತ್ರಮಂದಿರಗಳಲ್ಲಿ ಇರುತ್ತದೆ" ಎಂದು ಹೇಳುವ ಮೂಲಕ ಮತ್ತಷ್ಟು ಪುಕ್ಕಟೆ ಪ್ರಚಾರ ಪಡೆದಿದ್ದರು. ಅದೂ ಸಾಲದೆಂಬಂತೆ ಚಿತ್ರ ಬಿಡುಗಡೆಯಾದ ಮೊದಲ ದಿನದ ಎಲ್ಲಾ ನಾಲ್ಕು ಶೋಗಳಿಗೆ ಉಚಿತ ಪ್ರವೇಶವನ್ನು ಘೋಷಿಸಿದ್ದರು.

ಈ ತರಹ ಉಚಿತ ಪ್ರವೇಶ ನೀಡಿದ ಉದಾಹರಣೆ ಕನ್ನಡ ಚಿತ್ರರಂಗದಲ್ಲಂತೂ ಇಲ್ಲವೇ ಇಲ್ಲ. ಆದರೂ ಈ ಚಿತ್ರದ ಮ್ಯಾಟಿನಿ ಶೋಗೆ ಹನ್ನೆರಡು ಜನ ಪ್ರೇಕ್ಷಕರು ಬಂದಿದ್ದರು. ಮಧ್ಯಾಹ್ನದ ಹೊತ್ತಿಗೆ ಪ್ರೇಕ್ಷಕರ ಸಂಖ್ಯೆಯಲ್ಲಿ ಏರುಮುಖ ಕಾಣಿಸಿತ್ತು. ಥಿಯೇಟರ್ ಮಾಲೀಕರ ಪ್ರಕಾರ ಉಚಿತವಾಗಿ ಚಿತ್ರ ನೋಡಲು ಬಂದವರ ಸಂಖ್ಯೆ ಹದಿನಾಲ್ಕು ತಲುಪಿತ್ತು. ಸಂಜೆಯ ನಾಲ್ಕು ಗಂಟೆಯ ಶೋ ನೋಡಲು ಸುಮಾರು 60 ಜನ ಬಂದಿದ್ದರು. ಆ ಅರವತ್ತರಲ್ಲಿ ಐವತ್ತೈದು ಜನ ಪತ್ರಕರ್ತರು ಮತ್ತು ಟಿವಿ ಚಾನೆಲ್‌ನವರಾಗಿದ್ದರು.

ವಿಶೇಷ ಮಾಹಿತಿ: ಈ ವಿಮರ್ಶೆ ಓದಿ ನೀವು ಚಿತ್ರ ನೋಡಲು ಥಿಯೇಟರಿಗೆ ಧಾವಿಸಿದಾಗ ಅಲ್ಲಿ ಈ ಚಿತ್ರ ಇಲ್ಲದಿದ್ದರೆ ಅದಕ್ಕೆ ನಾವು ಜವಾಬ್ದಾರರಲ್ಲ.

ಇಲ್ಲಿಗೆ ಈ ಚಿತ್ರದ ಬಗೆಗಿನ ನಮ್ಮ ವಿಮರ್ಶೆ ಮುಗಿಯಿತು. ನಮಸ್ಕಾರ.



ಸಂಪತ್ ಕುಮಾರ್ ಎಂಬುವವರು ಬರೆದ ಕತೆ, ಚಿತ್ರಕತೆ ಮತ್ತು ಟ್ಯೂನ್ ಮಾಡಿದ ಹಾಡೊಂದು ಇರುವ ಮತ್ತು ಅವರೇ ನಿರ್ಮಿಸಿದ 'ಚೆನ್ನ' ಎಂಬ ಚಿತ್ರದ ಬಗ್ಗೆ ವಿಶೇಷವಾಗಿ ಹೇಳಿಕೊಳ್ಳುವುದಕ್ಕೆ ಏನೂ ಇಲ್ಲ. ರೌಡಿಸಂ ಕತೆ ಹೊಂದಿರುವ ಇದು ಒಂದು ಅಪ್ಪಟ ಮಸಾಲೆ ಚಿತ್ರ.

ತಾವು ನಿರ್ಮಿಸಿದ ಮೊದಲ ಚಿತ್ರದಿಂದಾಗಿ ಭಾರೀ ನಷ್ಟ ಅನುಭವಿಸಿದ್ದರಿಂದ ಈ ಬಾರಿ ಚಿತ್ರದ ಮೇಲೆ ಹತೋಟಿಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಹೀಗೆ ಮಾಡಿದೆ ಎನ್ನುತ್ತಾರೆ ಸಂಪತ್. ಮುಂದಿನ ಚಿತ್ರ ತಾನೇ ನಿರ್ದೇಶಿಸುತ್ತೇನೆ ಎಂಬ ಘೋಷಣೆಯನ್ನೂ ಈಗಾಗಲೇ ಮಾಡಿರುವ ಸಂಪತ್ "ಛಾಯಾಗ್ರಾಹಕ ಜೆ.ಜೆ. ಕೃಷ್ಣ ಇರುವಾಗ ನನಗೆ ನಿರ್ದೇಶನ ಮಾಡಲು ಯಾವ ಭಯವೂ ಇಲ್ಲ" ಎಂದು ನೇರವಾಗಿ ಮತ್ತು ಅಷ್ಟೇ ಮುಗ್ಧವಾಗಿ ಹೇಳುತ್ತಾರೆ. ಹೊಸ ನಿರ್ದೇಶಕರ ಚಿತ್ರಗಳನ್ನು ಛಾಯಾಗ್ರಾಹಕರೇ ಮಾಡಿ ಮುಗಿಸಿದ ಅನೇಕ ಉದಾಹರಣೆಗಳಿದ್ದರೂ, ಯಾರೂ ಕೂಡ ಸಂಪತ್ ತರಹ ಧೈರ್ಯವಾಗಿ ಹೇಳುವ ಗುಂಡಿಗೆಯನ್ನು ಪ್ರದರ್ಶಿಸಲಿಲ್ಲ.

ಈ ಚಿತ್ರದ ಹಾಡೊಂದರಲ್ಲಿ ಕರವೇ ನಾಯಕ ನಾರಾಯಣ ಗೌಡ ಕಾಣಿಸಿಕೊಂಡಿದ್ದಾರೆ. ಹೀಗಾಗಿ ಇದು ಕನ್ನಡಿಗರಿಂದ, ಕನ್ನಡಿಗರಿಗಾಗಿ ನಿರ್ಮಿಸಲ್ಪಟ್ಟ ಕನ್ನಡ ಚಿತ್ರ ಎಂಬ ಹಣೆಪಟ್ಟಿಯನ್ನು ಧರಿಸಿಕೊಂಡರೆ ಅಚ್ಚರಿ ಪಡಬೇಕಿಲ್ಲ. ಏನೇ ಇರಲಿ, ಮೊದಲ ಚಿತ್ರದಲ್ಲಿ ಸಾಕಷ್ಟು ನಷ್ಟ ಅನುಭವಿಸಿದ ಸಂಪತ್ ಈ ಚಿತ್ರದಲ್ಲಿ ಸಾಕಷ್ಟು ಸಂಪತ್ತು ಗಳಿಸುವ ಸಾಧ್ಯತೆ ಇದೆ. ಯಾಕೆಂದರೆ ನಾಯಕ ನಟ ದೀಪಕ್‌ನ ಹೊಡೆದಾಟಗಳು ಬಿ ಮತ್ತು ಸಿ ಕೇಂದ್ರಗಳ ಪ್ರೇಕ್ಷಕರಿಗೆ ಇಷ್ಟವಾಗಬಹುದು.

ನವರಸ ನೋಟದಲ್ಲಿ ರೇಣುಕಾ ಪ್ರಸಾದ್

ರೇಣುಕಾಪ್ರಸಾದ್ ಎಂಬ ಪೋಷಕನಟ ಕಳೆದ ಎರಡು ವರ್ಷಗಳಿಂದ ಕಾಲಿನ ನಿಶ್ಶಕ್ತಿಯಿಂದ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆಯಲ್ಲೇ ಮಲಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇಂತಹ ದುಃಸ್ಥಿತಿಯಲ್ಲೂ ಛೇಂಬರ್‌ನವರು ರೇಣುಕಾಪ್ರಸಾದ್‌ಗೆ ಯಾವುದೇ ಆರ್ಥಿಕ ಸಹಾಯ ಮಾಡಿಲ್ಲ ಎಂಬುದೂ ಈಗ ಜಗಜ್ಜಾಹೀರಾಗಿರುವ ಸಂಗತಿ.

ಈಗ ರೇಣುಕಾಪ್ರಸಾದ್ ಹೊಸ ಉತ್ಸಾಹ ಮತ್ತು ಶಕ್ತಿಯಿಂದ ನಗುನಗುತ್ತಿದ್ದಾರೆ. ಇದಕ್ಕೆ ಕಾರಣ ಈಟಿವಿಯ ಸೂರಿ ಮತ್ತು ಶ್ರೀಧರ್ ನೀಡಿರುವ ಬೆಂಬಲ. 'ನವರಸನೋಟ' ಎಂಬ ಹೊಸ ಕಾರ್ಯಕ್ರಮವನ್ನು ಈಟಿವಿ ಈ ವಾರದಿಂದ ಆರಂಭಿಸಿದೆ. ಆ ಕಾರ್ಯಕ್ರಮದ ನಿರೂಪಣೆಯನ್ನು ರೇಣುಕಾಪ್ರಸಾದ್ ನಿರ್ವಹಿಸುತ್ತಿದ್ದಾರೆ. ಈಟಿವಿ ತಂಡ ಅವರ ಮನೆಗೇ ಹೋಗಿ ಆತನ ಹಾಸಿಗೆಯಲ್ಲೇ ಅದನ್ನು ಚಿತ್ರೀಕರಿಸಿ ಬಂದು, ಆ ವಾರ ಪ್ರಸಾರ ಮಾಡುವ ಯೋಜನೆ ಹಾಕಿಕೊಂಡಿದೆ.

ಇದರಿಂದಾಗಿ ಇನ್ನೆಂದೂ ಮುಖಕ್ಕೆ ಬಣ್ಣ ಹಚ್ಚಲಾಗುವುದಿಲ್ಲ ಎಂಬ ನೋವಿನಲ್ಲಿದ್ದ ರೇಣುಕಾಪ್ರಸಾದ್ ಈಗ ಹೊಸ ಉತ್ಸಾಹ ಪಡೆದಿದ್ದಾರೆ. ಜೊತೆಗೆ ಕುಳಿತಲ್ಲೇ ಸಂಪಾದಿಸುತ್ತಿದ್ದೇನೆ ಎಂಬ ಆತ್ಮತೃಪ್ತಿಯೂ ಅವರಿಗೆ ದೊರಕಿದೆ. ಇಂತಹ ಅಶಕ್ತ ಕಲಾವಿದರ ಬಗ್ಗೆ ಲಿಪ್ ಸಿಂಪತಿ ತೋರಿಸುವ ಬದಲು ಈಟಿವಿ ತಂಡ ನಿಜಕ್ಕೂ ಮಾನವೀಯತೆ ಮೆರೆದಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com. Printed at Rajhans Enterprises, # 134, 4th Main, Industrial